ಪೂರ್ಣಯೋಗಿ ಶ್ರೀ ಅರವಿಂದರು

ಕೋ. ಚನ್ನಬಸಪ್ಪ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಪೂರ್ಣಯೋಗಿ ಶ್ರೀ ಅರವಿಂದರು

ಕೋ. ಚೆನ್ನಬಸಪ್ಪ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

Poornayogi Shri Aravindaru : by Sri K. Channabasappa Published by the Bangalore University
Pp. 72+viii Second Edition 1980

ಪ್ರಕಾಶಕರು :
ನಿರ್ದೇಶಕರು,
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056

ಬೆಲೆ 50 ಪೈಸೆ

ಮುದ್ರಕರು :
ಕಪಿಶೈಲ ಮುದ್ರಣಾಲಯ
ಮೈಸೂರು-12

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರ ಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ–ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಹ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯ ವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯ ಗಳು ಜ್ಞಾನಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷ ಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ, ಕಾರ್ಖಾನೆಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣಿತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈ ಸೇರಲೆಂದು ಈ ಕಿರು-ಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಟಿ. ಕೆ. ತುಕೋಳ್

ಸೆಪ್ಟೆಂಬರ್ 4, 1972 ಉಪಕುಲಪತಿ

ಅರಿಕೆ

ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯ ಆಶ್ರಯದಲ್ಲಿ ಎರಡು ವರ್ಷಗಳ ಕೆಳಗೆ ಕೆಂಗೇರಿಯಲ್ಲಿ ನನ್ನದೊಂದು ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಶ್ರೀ ಅರವಿಂದರನ್ನು ಕುರಿತು ಕೆಂಗೇರಿ ಗ್ರಾಮಾಂತರ ಹೈಸ್ಕೂಲಿನ ವಿದ್ಯಾರ್ಥಿಗಳ ಮುಂದೆ ನಾಲ್ಕು ಮಾತನಾಡಿದೆ. ಅಂದಿನ ಅಧ್ಯಕ್ಷತೆ ವಹಿಸಿದ್ದ ಡಾ. ಮಾಸ್ತಿ ವೆಂಕಟೇಶ ಐಯಂಗಾರ್ಯರು ತಮ್ಮ ಅಧ್ಯಕ್ಷಭಾಷಣದಲ್ಲಿ "ಹೈಸ್ಕೂಲ್ ಮಕ್ಕಳಿಗೆ ಅರವಿಂದರ ವಿಚಾರ ಎಷ್ಟರ ಮಟ್ಟಿಗೆ ಹಿಡಿಸೀತೋ ಎಂದು ನನಗೆ ಸಂಶಯವಿತ್ತು. ಇಂದಿನ ಭಾಷಣಕಾರರು ಸರಳವಾದ ಮಾತಿನಲ್ಲಿ ಅವರ ವಿಚಾರವಾಗಿ ತಿಳಿಯುವಂತೆ ಹೇಳಿದ್ದಾರೆ. ನಮ್ಮ ಮಕ್ಕಳು ಅರವಿಂದರ ಆದರ್ಶದಂತೆ ಬೆಳೆಯಬೇಕು........................" ಎಂಬುದಾಗಿ ಹೇಳಿದರು. ಅಂದಿನಿಂದ ಪ್ರಚಾರೋಪನ್ಯಾಸ ಮಾಲೆಯ ನಿರ್ದೇಶಕರಾದ ಶ್ರೀ ಕೆ. ಸಿ. ಶಿವಪ್ಪನವರು, ಶ್ರೀ ಅರವಿಂದರ ಜೀವನ ಚರಿತ್ರೆಯನ್ನು ಬರೆದುಕೊಡಬೇಕೆಂದು, ಬರೆದೂ ಬಾಯಿಮಾತಿನಿಂದಲೂ ಒತ್ತಾಯ ಮಾಡುತ್ತಲೇ ಇದ್ದರು. ಆದರೆ ನನಗೆ ಪುರುಸೊತ್ತೇ ಆಗದಿದ್ದುದರಿಂದ ಬರೆಯಲು ಆಗಲೇ ಇಲ್ಲ. ಜೊತೆಗೆ, ಆಗಲೆ ನಾನು ಶ್ರೀ ಅರವಿಂದರನ್ನು ಕುರಿತು ಮೂರು ಪುಸ್ತಕಗಳನ್ನು ಬರೆದಿದ್ದರಿಂದ ಹೊಸದಾಗಿ ಏನು ಬರೆಯುವುದಿದೆ ಎಂಬ ಸಂಕೋಚವೂ ಸೇರಿಕೊಂಡು, ಈ ಕೆಲಸಕ್ಕೆ ಕೈ ಹಾಕದಿರುವುದೆ ಲೇಸೆಂದೂ ನಿರ್ಧರಿಸಿದ್ದೆ. ಆದರೆ ಈ ರೀತಿ ಶ್ರೀ ಕೆ. ಸಿ. ಶಿವಪ್ಪನವರಿಗೆ ಹೇಳಲಿಲ್ಲ. ಆದ್ದರಿಂದ

ಅವರು ಮಾತ್ರ ತಮ್ಮ ಒತ್ತಾಯವನ್ನು ಸಡಿಲಗೊಳಿಸಲೆ ಇಲ್ಲ. ನಾನು ಹೇಳಿದ ಗಡುವಿಗೆ ಸರಿಯಾಗಿ ಮತ್ತೆ ನೆನಪುಮಾಡುತ್ತಿದ್ದರು. ಅವರ ಹಿಡಿದ ಪಟ್ಟು, ತಾಳ್ಮೆಯನ್ನು ನೋಡಿ ನನಗೆ ತಾಳ್ಮೆ ತಪ್ಪುವಂತಾಗುತ್ತಿತ್ತು. ಹೀಗೆ ಎರಡು ವರ್ಷಗಳೆ ಸಂದು ಹೋದವು.

ಅಷ್ಟರಲ್ಲಿ ಶ್ರೀ ಅರವಿಂದ ಜನ್ಮ ಶತಾಬ್ದಿಯನ್ನು ಆಚರಿಸ ಲೋಸುಗ ರಾಜ್ಯ ಸರ್ಕಾರವು ಕುಲಪತಿ ನ್ಯಾಯಮೂರ್ತಿ ಶ್ರೀ ಟಿ. ಕೆ. ತುಕೋಳ್ ಅವರ ಕಾರ್ಯ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿಯನ್ನು ನೇಮಿಸಿತು. ಆ ಸಮಿತಿ ಒಂದು ಪ್ರಕಟನಾ ಸಮಿತಿಯನ್ನು ರಚಿಸಿ, ಕುಲಪತಿಗಳು ನನ್ನನ್ನು ಆ ಸಮಿತಿಯ ಸದಸ್ಯನೆಂದು ಸೇರಿಸಿಕೊಂಡರು. ಸಲಹಾಸಮಿತಿಯ ಒಂದು ಸಭೆಯಲ್ಲಿ ನಾನು, ಕರ್ನಾಟಕದಲ್ಲಿರುವ ಮೂರು ವಿಶ್ವವಿದ್ಯಾ ನಿಲಯಗಳೂ ಶ್ರೀ ಅರವಿಂದರ ಬಗ್ಗೆ ಒಂದಾದರೂ ಗ್ರಂಥ ಪ್ರಕಾಶನ ಮಾಡಬೇಕೆಂಬ ಸೂಚನೆಯನ್ನು ಮಂಡಿಸಿದೆ. ಅದನ್ನು ಸಮಿತಿ ಒಪ್ಪಿ ಕೊಂಡು ಮೂರೂ ವಿಶ್ವವಿದ್ಯಾನಿಲಯಗಳ ಪ್ರಸಾ ರಂಗದ ನಿರ್ದೇಶಕರಿಗೆ ಪತ್ರಗಳನ್ನು ಬರೆದರು. ಆ ಪತ್ರ ಹೋದ ಕೂಡಲೆ ಶ್ರೀ ಕೆ. ಸಿ. ಶಿವಪ್ಪನವರು ನನ್ನ ಹಳೆಯ ವಚನವನ್ನು ನೆನಪಿಸಿ ಮತ್ತೆ ಕಾಗದ ಬರೆದರು.ಸಾಲದೆ ಕುಲಪತಿಗಳಿಂದಲೆಖುದ್ದಾಗಿ ಒತ್ತಾಯದ ಪತ್ರ ಬರೆಸಿದರು. ಇನ್ನು ಇದು ತೀರಿಸಲೇಬೇಕಾದ ಋಣವೆಂದೂ, ಶ್ರೀ ಅರವಿಂದರಿಗೆ ಸಲ್ಲಬೇಕಾದ ಪೂಜೆಯೆಂದೂ ನಾನು ಈ ಪುಸ್ತಕ ಬರೆಯಲೆ ಬೇಕಾಯಿತು. ಹೀಗೆ ಕುಲಪತಿಗಳ ಮತ್ತು ನಿರ್ದೇಶಕರ ಒತ್ತಾಯ ಇಲ್ಲದೆ ಹೋಗಿದ್ದರೆ ನಿಶ್ಚಯ ವಾಗಿಯೂ ನಾನು ಈ ಪುಸ್ತಕ ಬರೆಯುತ್ತಲೆ ಇರಲಿಲ್ಲ. ಆದ್ದರಿಂದ ಈ ಕೃತಿ ಮೂಡುವುದಕ್ಕೆ ಕಾರಣರಾದ ಅವರಿಗೆ ನಾನು ಕೃತಜ್ಞ.

ಶ್ರೀ ಅರವಿಂದರನ್ನು ಕುರಿತು ಬರೆದ ನಾಲ್ಕನೆಯ ಗ್ರಂಥ ಇದು. ಸ್ವಾತಂತ್ರ್ಯಯೋಧ ಶ್ರೀ ಅರವಿಂದರು, ಬಾಲಕರ ಶ್ರೀ ಅರವಿಂದರು, ಯೋಗಿ ಶ್ರೀ ಅರವಿಂದರು ಆ ಇತರ ಮೂರು ಗ್ರಂಥಗಳು. ವಿಷಯ ಒಂದೇ ಆದರೂ, ಬರೆದವರು ಒಬ್ಬನೇ ಆದರೂ ನಿರೂಪಣೆಯಲ್ಲಿ ಬೇರೆಬೇರೆಯ ಬರಹಗಾರರಿಂದ ಮೂಡಿದ ಕೃತಿ ಎಂಬುದಾಗಿ ಪ್ರಾಂಜಲಮನಸ್ಸಿನ ಓದುಗರಿಗೆ ತಿಳಿಯದೆ ಇರಲಾರದು. ಅದಕ್ಕೆ ಆ ಮಹಾಯೋಗಿಯೆ ಕಾರಣ ಶ್ರೀಮಾತೆಯ ಕೃಪಾಶೀರ್ವಾದವೆ ಕಾರಣ! ಅಷ್ಟಲ್ಲದೆ ಈ ರೀತಿಯಾದ ಪರಿಣಾಮ ಉಂಟಾಗುವುದು ಸಾಧ್ಯವಿಲ್ಲ. ಇನ್ನೊಂದು ವಿಶೇಷವೇನೆಂದರೆ ಲಕ್ಷ್ಯಯಿಟ್ಟು ಓದುವ ಓದುಗರಿಗೆ, ಈ ಜೀವನ ಚರಿತ್ರೆ ಆ ಇತರ ಕೃತಿಗಳಿಗಿಂತ ಹೆಚ್ಚು ಶಾಸ್ತ್ರೀಯವೂ, ಖಚಿತವೂ, ಪರಿಣಾಮಕಾರಿಯೂ ಆಗಿದೆ ಎಂದು ಕಂಡುಬರದೆ ಇರಲಾರದು. ಹಾಗೂ ಈ ಜೀವನ ಚರಿತ್ರೆಯಲ್ಲಿ ಅನುಸರಿಸಿದ ವಿಷಯ ನಿರೂಪಣೆಯ ಕ್ರಮ ಹೆಚ್ಚು ಸಮರ್ಪಕವೆಂದು ನನಗೆ ಅನಿಸುತ್ತದೆ.

ಕೊನೆಯದಾಗಿ, ವಿಶ್ವವಿದ್ಯಾನಿಲಯದ ಕುಲಪತಿಗಳಿಗೂ ಪ್ರಸಾರಾಂಗದ ನಿರ್ದೇಶಕರಿಗೂ ನನ್ನ ನೆನಕೆಗಳು.

ಕೋ. ಚೆನ್ನಬಸಪ್ಪ

ಪರಿವಿಡಿ

ಹೆತ್ತವರ ಹಂಬಲ

ಬಡತನದ ಬೇಗೆಯಲ್ಲಿ

ಪ್ರತಿಭೆಯ ಪ್ರಚಂಡ ಜ್ಯೋತಿ

ದೇಶಮುಕ್ತಿ ಮಂತ್ರದೀಕ್ಷೆ

ಗುರು-ಸಾರಸ್ವತಯೋಗಿ

ಸೆರೆಮನೆಯೇ ಗುರುಮನೆಯಾಯಿತು

ಪಾಂಡಿಚೆರಿಗೆ ಪ್ರಯಾಣ

ಬಾಳೆಲ್ಲ ಯೋಗ; ಭೂಮಿಯೇ ಸ್ವರ್ಗ

೧ ಪಿತೃವರ ಹಂಬಲ

ಈಗ್ಗೆ ಒಂದುನೂರಾ ಒಂದು ವರ್ಷಗಳ ಹಿಂದೆ(1871ರಲ್ಲಿ) ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಕೊನ್ನಗರ ಎಂಬ ಗ್ರಾಮದಲ್ಲೊಂದು ದೊಡ್ಡ ಗೊಂದಲ. ಆ ಗೊಂದಲಕ್ಕೆ ಕಾರಣ ಡಾ. ಕೃಷ್ಣಧನ ಘೋಷ್ ಎಂಬ ವ್ಯಕ್ತಿ. ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿ ಎರಡು ವರ್ಷಗಳಿದ್ದು ವೈದ್ಯವಿದ್ಯಾ ಪಾರಂಗತರಾಗಿ, ಇಂಡಿಯನ್ ಮೆಡಿಕಲ್ ಸರ್ವೀಸ್ (ಐ. ಎಮ್. ಎಸ್)ಗೆ ಅರ್ಹತೆ ಪಡೆದು ಮರಳಿದ್ದರು. ಸಮುದ್ರಯಾನ ಮಾಡಿ, ಇಂಗ್ಲೆಂಡಿಗೆ ಹೋಗಿ ಬಂದ ಈತನ ಬ್ರಾಹ್ಮಣ್ಯ ಉಳಿಯಬೇಕಾದರೆ ಪ್ರಾಯಶ್ಚಿತ್ತ ಮಾಡಿಸಿಕೊಳ್ಳಬೇಕು; ಇಲ್ಲವೇ ಆತನನ್ನು ಕುಲದಿಂದ ಹೊರಗೆ ಹಾಕಬೇಕೆಂದು ಆ ಗ್ರಾಮದ ದ್ವಿಜೋತ್ತಮರೆಲ್ಲ ತೀರ್ಮಾನಿಸಿದರು!

ವಿಜ್ಞಾನ ವಿದ್ಯೆಯನ್ನು, ಅದರ ಅನಿವಾರ್ಯ ಸಹಾಯಕಶಕ್ತಿ ತರ್ಕಬುದ್ಧಿಯನ್ನು ಹೊಂದಿದ್ದ ಡಾ. ಕೃಷ್ಣಧನ ಘೋಷರಿಗೆ, ಮಡಿವಂತ ಬ್ರಾಹ್ಮಣರ ಈ ತೀರ್ಮಾನ ಕೇಳಿ ಆಶ್ಚರ್ಯದ ಜೊತೆಗೆ ಕೋಪವೂ ಬಂದಿರಬೇಕು. ಅಷ್ಟು ಹೊತ್ತಿಗೆ ಕ್ರೈಸ್ತ ಪಾದ್ರಿಗಳು ಬಂದು ಹಿಂದೂಧರ್ಮ, ಆಚಾರ, ಸಂಪ್ರದಾಯಗಳೆಲ್ಲ ಮೌಢ್ಯದ ಮುದ್ದೆಯೆಂದು ದೇಶದ ತುಂಬ ಅಗಾಧವಾದ ಪ್ರಚಾರ ನಡೆಸಿದ್ದರು. ಅದನ್ನು ಡಾ. ಕೃಷ್ಣಧನ ಘೋಷ್ ಕೇಳಿದ್ದರೂ ಲಕ್ಷ್ಯಕ್ಕೆ ತಂದುಕೊಂಡಿರಲಿಲ್ಲ. ಈಗ ಸ್ವಜನರೂ ಸ್ವಜಾತಿಯರೂ ಆದ ತಮ್ಮ ಊರಿನವರು ತಮಗೆ ಬಹಿಷ್ಕಾರ ಹಾಕಬೇಕೆಂದು ತೀರ್ಮಾನಿಸಿದ್ದನ್ನು ಕೇಳಿ, ಕ್ರೈಸ್ತ ಪಾದ್ರಿಗಳ

ಪ್ರಚಾರ ನಿಜವೆಂದೆ ನಿರ್ಧರಿಸಿದರು. ಅದಕ್ಕನುಗುಣವಾಗಿ. ಅವರು ಹಿಂದೂಧರ್ಮವನ್ನು ಬಿಟ್ಟೇ ಬಿಟ್ಟರು. ಹುಟ್ಟಿದ ಜಾತಿ ಬಿಟ್ಟಂತೆ ಹುಟ್ಟಿದೂರನ್ನೂ ಬಿಟ್ಟರು. ಬ್ರಾಹ್ಮ ಸಮಾಜಕ್ಕೆ ಸೇರಿಸಿಕೊಂಡರು. ಮಾತ್ರವಲ್ಲ ಕ್ರೈಸ್ತ ಧರ್ಮದ ಬಗ್ಗೆ ಅಪಾರವಾದ ಅಭಿಮಾನವನ್ನು ಬೆಳೆಸಿಕೊಂಡರು. ಕ್ರೈಸ್ತ ಧರ್ಮಕ್ಕಿಂತ ಇನ್ನಿಲ್ಲ ಎಂಬಷ್ಟು ವ್ಯಾಮೋಹ ಉಂಟಾಯಿತು.

ಸ್ವಜಾತಿಯವರ ಮೌಢ್ಯದ ದೆಸೆಯಿಂದ ಹಿಂದೂಧರ್ಮದಿಂದ ಬಹಿಷ್ಕೃತರಾಗಿ ಪರಮತೀಯರ ಆದರಕ್ಕೆ ಒಳಗಾಗಿ ಮನಸ್ಸು ಪ್ರಕ್ಷುಬ್ಧಗೊಂಡಿದ್ದ ಈ ಕಾಲಾವಧಿಯಲ್ಲೇ ಅವರ ಮಡದಿ ಸ್ವರ್ಣಲತಾದೇವಿ ಗರ್ಭವತಿಯಾದಳು. 1872ನೇ ಆಗಸ್ಟ್ 15ರ ಬೆಳಗುವಮುಂಜಾನೆ ಒಂದು ಗಂಡು ಕೂಸನ್ನು ಹೆತ್ತಳು. ಆ ಮಗುವಿಗೆ ಕೃಷ್ಣಧನಘೋಷರು ಅರವಿಂದ ಅಕ್ರಾಯಿಡ್ ಘೋಷ್ ಎಂದು ನಾಮಕರಣ ಮಾಡಿದರು. 'ಅಕ್ರಾಯಿಡ್' ಎಂಬ ಆಂಗ್ಲ ಕ್ರಿಶ್ಚಿಯನ್ ಹೆಸರು ಭಾರತೀಯ ಬ್ರಾಹ್ಮ ಸಮಾಜದ ದಂಪತಿಗಳ ಮಗುವಿಗೆ ಹೇಗೆ ಬಂತು? ಈ ಹೆಸರೇ ಅವರ ಶಾಲಾ ಕಾಲೇಜ್ ದಾಖಲೆಗಳಲ್ಲೆಲ್ಲ ದಾಖಲಾಯಿತು. ಇಂಥ ವೈಪರೀತ್ಯ ಹೇಗಾಯಿತು? ಏಕಾಯಿತು? ಎಂದು ಶೋಧನೆಮಾಡಿ ನೋಡಿದಾಗ ಅರವಿಂದರು ಹುಟ್ಟುವುದಕ್ಕೆ ಮೊದಲೂ, ಹುಟ್ಟಿದಾಗಲೂ, ಖುಲ್ನಾ ನಗರದಲ್ಲಿದ್ದ 'ಅಕ್ರಾಯಿಡ್' ಎಂಬ ಆಂಗ್ಲ ಕ್ರಿಶ್ಚಿಯನ್ ದಂಪತಿಗಳು ಘೋಷ್ ದಂಪತಿಗಳ ಸ್ನೇಹಮಾಡಿಕೊಂಡಿದ್ದರು. ಡಾ. ಘೋಷರಿಗೆ ಅವರು ಇಷ್ಟು ಆಪ್ತರಾಗಿದ್ದರಲ್ಲ ಹುಟ್ಟಿದ ಮಗುವಿಗೆ ಅವರ ಮನೆತನದ ಹೆಸರನ್ನೇ ಇಟ್ಟುಬಿಟ್ಟರು! ಹಿಂದೂಗಳು ಕೂಸಿಗೆ ಹೆಸರಿಡುವಾಗ ತಮ್ಮ ಪೂರ್ವಜರ ಹೆಸರನ್ನೊ ಇಲ್ಲವೆ ಇಷ್ಟದೈವದ ಹೆಸರನ್ನೊ ಅಥವಾ ಹರಕೆ

ಹೊತ್ತ ದೇವರ ಹೆಸರನ್ನೊ ಇಡುವುದು ವಾಡಿಕೆ. ಈ ಸಂಪ್ರದಾಯದ ಹೊರಗೆ ಹೋಗಿ ಬೇರೆಯವರ ಹೆಸರು ಇಡಬೇಕಾದರೆ, ಅವರ ಉಪ್ಪು ತಿಂದವರೊ ಅಥವಾ ಆಪ್ತರೊ ಆಗಿರಬೇಕು. ಡಾ. ಕೃಷ್ಣಧನ ಘೋಷರು ಹುಟ್ಟಿದ ಮಗನಿಗೆ ಈ ಹೆಸರಿಟ್ಟದ್ದು ಅವರಿಗೆ ಕ್ರೈಸ್ತ ಧರ್ಮದ ಮೇಲೆ ಆ ಕ್ರೈಸ್ತ ದಂಪತಿಗಳ ಮೇಲೆ ಇದ್ದ ಅತೀವ ಮೋಹವೇ ಕಾರಣವೆಂದು ನಿಶ್ಚಯವಾಗಿ ನಿರ್ಧರಿಸಬಹುದು. ಹಿಂದೂ ಧರ್ಮದ ಬಗ್ಗೆ ಆಚಾರವಿಚಾರಗಳ ಬಗ್ಗೆ, ಸಂಸ್ಕೃತಿ ಸಂಪ್ರದಾಯದ ಬಗ್ಗೆ ಅತೀವ ಹೇಯಭಾವನೆಯೂ ಬೆಳದಿರಬೇಕೆಂದೂ ಎದ್ದು ಕಾಣುತ್ತದೆ.

ಅವರ ಈ ಮನೋಭಾವ, ತಮ್ಮ ಮಕ್ಕಳಿಗೆ ಕೊಡಿಸಿದ ಶಿಕ್ಷಣಕ್ರಮದಿಂದ ಚೆನ್ನಾಗಿ ಗೊತ್ತಾಗುತ್ತದೆ. ಘೋಷರ ಮನೆ ಮಾತು, ತಾಯಿನುಡಿ ಬೆಂಗಾಲಿ. ಆದ್ದರಿಂದ ಅದು ವರ್ಜ್ಯವಾಯಿತು. ಮಗ ಅರವಿಂದ ಬೆಂಗಾಲಿ ಕಲಿಯಲೆ ಕೂಡದು. ಅವನ್ನ ಯಾರೊಡನೆಯೂ ಬೆಂಗಾಲಿಯಲ್ಲಿ ಮಾತನಾಡಲೇ ಬಾರದು. ಬೆಂಗಾಲಿ ಬಲ್ಲ ದಾದಿಯ ಕೈಗೆ ಮಗ ಸಿಕ್ಕರೆ ಎಲ್ಲಿ ಬೆಂಗಾಲಿ ಮಾತುಗಳಿಂದ ಮಗುವಿನ ಮನಸ್ಸನ್ನು ಮಲಿನ ಮಾಡುವಳೊ ಎಂದು ಡಾ. ಘೋಷರು ಅಚ್ಚ ಆಂಗ್ಲ ದಾದಿಯನ್ನೆ, ದುಬಾರಿಯಾದರೂ ನೇಮಿಸಿದರು! ಅಷ್ಟು ಮಾತ್ರವೇ ಅಲ್ಲ. ಆಕೆ ಮರೆತೂ ಮಗುವನ್ನು ಬೆಂಗಾಲಿ ಮಾತನಾಡುವವರ ಮಧ್ಯ ಬಿಡಕೂಡದು—ಎಂದು ಕಟ್ಟಪ್ಪಣೆ ಮಾಡಿದರು.! ಅಂದರೆ, ಬೆಂಗಾಲಿ ಭಾಷೆಯ ಮೇಲೆ ಅಂಥ ತುಚ್ಛ, ಅಸಹ್ಯ ಭಾವನೆ ಅವರಿಗೆ! ಜೊತೆಗೆ ತನ್ನ ಮಗ ಹುಟ್ಟನಿಂದಲೆ ಇಂಗ್ಲಿಷ್ ಕಲಿಯಬೇಕು; ಪಕ್ಕಾ ಇಂಗ್ಲಿಷ್ ಮನುಷ್ಯನೇ ಆಗಿ ಬೆಳೆಯಬೇಕೆಂಬುದು ಕೃಷ್ಣಧನ ಘೋಷರ ಎಣಿಕೆ. ಸಾಧ್ಯವಾಗಿದ್ದಿದ್ದರೆ

ಮಗುವಿನ ಮೈಚರ್ಮವನ್ನು ಬದಲಾಯಿಸಿ ಬಿಳಿಯ ಮಗುವನ್ನಾಗಿ ಮಾಡುತ್ತಿದ್ದರೋ ಏನೋ!

ಇದರ ಪರಿಣಾಮ ಏನಾಯಿತೆಂದರೆ, ಅರವಿಂದ ಮಾತು ಕಲಿತಾಗ ಒಂದಕ್ಷರವೂ ಬೆಂಗಾಲಿ ಬರುತ್ತಿರಲಿಲ್ಲ. ಬಾಯಿತೆರೆದರೆ ಇಂಗ್ಲೀಷೇ ಇಂಗ್ಲೀಷು! ಬಾಲಕನಿಗೆ ಐದು ವರ್ಷ ವಯಸ್ಸಾದ ಕೂಡಲೇ ಡಾರ್ಜಿಲಿಂಗ್ ಪಟ್ಟಣದ ಒಂದು ಇಂಗ್ಲೀಷ್ ಕಾನ್ವೆಂಟ್ ಶಾಲೆಗೆ ಹಾಕಿದರು. ಅಲ್ಲಿ ಇದ್ದದ್ದು ಬಹುತೇಕ ಆಂಗ್ಲ ಅಧಿಕಾರಿಗಳ ಆಂಗ್ಲಮಕ್ಕಳೇ. ಆಂಗ್ಲರಲ್ಲದವರು ಯಾರಾದರೂ ಇದ್ದರೆ, ಅವರು ಆಂಗ್ಲಭಾಷೆ, ಸಂಸ್ಕೃತಿ, ನಾಗರಿಕತೆಗೆ ಸಂಪೂರ್ಣ ಮರುಳಾಗಿ ಶರಣಾಗಿ ಹೋದವರ ಮಕ್ಕಳು. ಅಲ್ಲಿ ಎರಡು ವರ್ಷ ಕಾನ್ವೆಂಟ್ ಶಿಕ್ಷಣ ದೊರೆತ ಮೇಲೆ ಬಾಲಕ ಅರವಿಂದ ಅವರಪ್ಪ ನಿರೀಕ್ಷಿಸಿದಂತೆಯೇ ಒಬ್ಬ ಛೋಟಾಸಾಹೇಬನೇ ಆಗಿಬಿಟ್ಟ. ಹ್ಯಾಟ್‌ಬೂಟ್ ಆಂಗ್ಲ ಪೋಷಾಕು! ಕೀಸ್-ಪೀಸ್ ಆಂಗ್ಲಭಾಷೆಯಲ್ಲಿ ಸಂಭಾಷಣೆ! ಅಲ್ಲಿಯೂ ಬಂಗಾಲೀ ಭಾಷೆಯ ಗಂಧವೂ ಅವರಿಗೆ ಸಿಗಲಿಲ್ಲ. ತಾಯ್ನುಡಿಗೆ ಎರವಾಗಿ ಮಲತಾಯಿ ಎದೆಹಾಲು ಕುಡಿಯುವ ಪ್ರಾರಬ್ಧ ಬಾಲಕ ಅರವಿಂದನದಾಗಿತ್ತು.

ಇಷ್ಟು ಹೊತ್ತಿಗೆ ಅರವಿಂದನಿಗೆ ಏಳುವರ್ಷ ತುಂಬಿತು. ಡಾ. ಕೃಷ್ಣಧನ ಘೋಷರು ಎಂಟುವರ್ಷ ಭಾರತ ಸರ್ಕಾರದ ಸೇವೆಯಲ್ಲಿ ಕಳೆದಿದ್ದರು. ಆಗಿನ ಸೇವಾ ನಿಯಮಾನುಸಾರ, ಭಾರತ ಸರ್ಕಾರದ ಸೇವೆಯಲ್ಲಿದ್ದ ಆಂಗ್ಲರು ಪ್ರತಿ ಎರಡು ವರ್ಷಕ್ಕೊಮ್ಮೆ ಸ್ವದೇಶ(Home)ಕ್ಕೆ ಸರ್ಕಾರದ ಖರ್ಚಿನಿಂದ ಹೋಗಿ ಬರುವ ಸೌಲಭ್ಯವಿತ್ತು. ಆ ಸೌಲಭ್ಯ ಆಂಗ್ಲರಲ್ಲದವರಿಗೂ ಸಿಗುತ್ತಿತ್ತು. ಇವರೂ ಸರ್ಕಾರದ ಖರ್ಚಿನಲ್ಲಿ ಮಡದಿ ಮಕ್ಕಳನ್ನು

ಕರೆದುಕೊಂಡು "ಹೋಂ"(ಇಂಗ್ಲೆಂಡ್)ಗೆ ಹೋಗಬಹುದಾಗಿತ್ತು. ಈ ಸೌಲಭ್ಯದ ಉಪಯೋಗ ಪಡೆದುಕೊಂಡು ಡಾ. ಕೃಷ್ಣಧನ ಘೋಷರು ಗರ್ಭಿಣಿಯಾಗಿದ್ದ ತಮ್ಮ ಮಡದಿಯೊಡನೆ, ವಿನಯ ಭೂಷಣ, ಮನಮೋಹನ, ಅರವಿಂದ ಎಂಬ ಮೂವರು ಮಕ್ಕಳೊಡನೆ ಇಂಗ್ಲೆಂಡಿಗೆ 1879ರಲ್ಲಿ ಹೋದರು. ಅವರು ಇಂಗ್ಲೆಂಡಿಗೆ ಹೋದ ಏಕಮಾತ್ರ ಉದ್ದೇಶ ಅರವಿಂದನನ್ನು ಭಾರತೀಯ ಸನ್ನಿವೇಶ ಭಾರತೀಯರ ಸಂಪರ್ಕದಿಂದ ಸಂಪೂರ್ಣ ತಪ್ಪಿಸಿ ಪಕ್ಕಾ ಆಂಗ್ಲ ಸಾಹೇಬನನ್ನೇ ಮಾಡುವುದಾಗಿತ್ತು! ಅವರ ಈ ಉದ್ದೇಶ. ತಾ: 2-12-1891 ರಂದು ಅವರು ತಮ್ಮ ಭಾವನಿಗೆ ಬರೆದಿದ್ದ ಒಂದು ಪತ್ರದಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಆ ಪತ್ರದಲ್ಲಿ ಹೀಗೆ ಬರೆದಿದ್ದಾರೆ:

"ನನ್ನ ಮೂವರು ಮಕ್ಕಳನ್ನು ಮಹಾದೈತ್ಯರನ್ನಾಗಿ ಮಾಡಿದ್ದೇನೆ.... ಅರೋ (ಅರವಿಂದ) ತನ್ನ ಪ್ರತಿಭಾಪೂರ್ಣವಾದ ಆಡಳಿತೆಯಿಂದ ಈ ದೇಶಕ್ಕೆ ಕೀರ್ತಿತರುವನು. ಅದನ್ನು ನೋಡಲು ನಾನು ಬದುಕಿರುವುದಿಲ್ಲ. ಆದರೆ ನೀನು ಈ ಮಾತನ್ನು ನೆನಪಿನಲ್ಲಿಟ್ಟುಕೊ............"

ಡಾ. ಕೃಷ್ಣಧನ ಘೋಷರಿಗೆ ಆಂಗ್ಲರ ನಡೆನುಡಿ ಆಚಾರ ವಿಚಾರ, ಸಂಸ್ಕೃತಿ ಸಂಪ್ರದಾಯ ಎಂದರೆ ಅದೇನೊ ವರ್ಣಿಸಲಸಾಧ್ಯವಾದ ಮೋಹ. ಅಷ್ಟೇ ಪ್ರಮಾಣದಲ್ಲಿ ಭಾರತೀಯವಾದುದೆಲ್ಲವೂ ವರ್ಜ್ಯ. ಈ ತಲೆತಿರುಕ ವ್ಯಾಮೋಹ ಎಲ್ಲಿಯವರೆಗೆ ಹೋಯಿತೆಂದರ, ಇಂಗ್ಲೆಂಡಿನಲ್ಲಿ ಹುಟ್ಟಿದ ಅವರ ನಾಲ್ಕನೆಯ ಮಗನಿಗೆ 'ಎಮಾನ್ಯುಅಲ್' ಎಂಬ ಹೆಸರನ್ನಿಟ್ಟಿದ್ದರು.

ಅವನೇ ಮುಂದೆ ಬಾರೀಂದ್ರಕುಮಾರ್ ಘೋಷ್ ಎಂಬ ಹೆಸರಿನ ಮಹಾ ಕ್ರಾಂತಿಕಾರೀ ಪುರುಷನಾದ.

ಇಂಗ್ಲೆಂಡಿನಲ್ಲಿ ಡಾ. ಕೃಷ್ಣಧನ ಘೋಷರು ತಮ್ಮ ಮೂವರೂ ಮಕ್ಕಳನ್ನು ಮ್ಯಾಂಚೆಸ್ಟರಿನಲ್ಲಿ ಡ್ರ್ಯೂವೆಟ್ ದಂಪತಿಗಳ ಪಾಲನೆಯಲ್ಲಿಬಿಟ್ಟರು. ಆ ಆಂಗ್ಲ ದಂಪತಿಗಳು ಕ್ರೈಸ್ತಪಾದ್ರಿಗಳಾಗಿದ್ದರು. ಅವರ ವಶಕ್ಕೆ ಈ ಎಳೆಯ ಮಕ್ಕಳನ್ನು ಕೊಡುವಾಗ, ಈ ಮಕ್ಕಳು ಭಾರತೀಯರ ಸಂಗ ಮಾಡಬಾರದೆಂದೂ, ಭಾರತೀಯರ ನಡೆನುಡಿಯ ಸೋಂಕೂ ತಟ್ಟಬಾರದೆಂದೂ, ಭಾರತೀಯ ಎಂಬುದು ಯಾವುದೂ ಅವರ ಕಣ್‌ಮನಗಳಿಗೆ ಬೀಳಬಾರದೆಂದೂ ಕಟ್ಟಪ್ಪಣೆ ಮಾಡಿದರು! ದುಃಖ ದಾರಿದ್ರ್ಯ ರೋಗ ಮುಪ್ಪು ಮರಣಗಳು ಕಣ್ಣಿಗೆ ಬೀಳದಂತೆ ಅರಮನೆಯ ಪಂಜರದಲ್ಲಿಯೆ ಶುದ್ಧೋಧನ ದೊರೆ ತನ್ನ ಮಗನನ್ನು ಬೆಳೆಸಿದಂತೆ, ಅರವಿಂದ ಸೋದರರನ್ನು ಭಾರತೀಯ ಧರ್ಮ, ಸಂಸ್ಕೃತಿ, ಭಾಷೆ, ನಾಗರಿಕತೆಗಳೆಂಬ ರೋಗ ಮುಪ್ಪು ಮರಣ ದುಃಖ ದಾರಿದ್ರ್ಯಗಳ ಸಂಗಸಂಪರ್ಕವೆ ಇಲ್ಲದಂತೆ ಬೆಳೆಸಲು ಡಾ. ಕೃಷ್ಣಧನ ಹವಣಿಸಿದರು! ಆದರೆ, ಒಂದೇ ಒಂದು ದಿನ ಭಿಕ್ಷುಕನನ್ನು, ಮುದುಕನನ್ನು, ರೋಗಿಯನ್ನು, ಹೆಣವನ್ನು ನೋಡಿದ ಗೌತಮ ಏಕಾಕಿ ಅರಮನೆಯನ್ನು, ಮಡದಿಮಕ್ಕಳನ್ನು ಬಿಟ್ಟು ಹೇಗೆ ಹೊರಟು ಹೋದನೋ ಹಾಗೆಯೆ ಅರವಿಂದರೂ ಕೂಡಾ ಭಾರತೀಯ ಧರ್ಮ, ಸಂಸ್ಕೃತಿ ಕಲೆ, ನಾಗರಿಕತೆಯ ಪ್ರಥಮ ಸಂದರ್ಶನ ಸಂಪರ್ಕದಿಂದಲೆ ಆಂಗ್ಲ ಸಂಸ್ಕಾರಕ್ಕೆಲ್ಲ ತಿಲಾಂಜಲಿಯನ್ನು ಕೊಟ್ಟ ವಿಚಿತ್ರ ಪ್ರಸಂಗವನ್ನು ಅರವಿಂದರ ಜೀವನದಲ್ಲೂ ಕಾಣಲಿದ್ದೇವೆ. ಯಾವುದು ಆಗಲೇಬಾರದೆಂದು ಡಾ. ಕೃಷ್ಣಧನ ಘೋಷ್ ಹಟಹಿಡಿದು ಸಾಧಿಸಲು ಪ್ರಯತ್ನಿಸಿದರೊ,

ಅದೇ ಪರಿಣಾಮ, ಅರವಿಂದರ ಮೇಲಾಯಿತು. ಮಾನವ ಸ್ವಭಾವವೆ ಹಾಗೆಂದು ಕಾಣುತ್ತದೆ.

ಡಾ. ಕೃಷ್ಣಧನ ಘೋಷ್‌ರ ಈ ಆಂಗ್ಲ ವ್ಯಾಮೋಹದ ಬಟ್ಟಲು ತುಂಬಿ ಹರಿಯುವಂತಹ ಇನ್ನೊಂದು ಪ್ರಸಂಗದಿಂದ ಈ ವಿಚಿತ್ರ ವರ್ತನೆಯ ಕಥೆಯನ್ನು ಮುಗಿಸೋಣ.

ತಮ್ಮ ವಶಕ್ಕೆ ಒಪ್ಪಿಸಿದ ಮಕ್ಕಳ ದೈಹಿಕ ಮಾನಸಿಕ ಯೋಗ ಕ್ಷೇಮ ನೋಡಿಕೊಳ್ಳುವ ಕರ್ತವ್ಯವನ್ನು ವಹಿಸಿಕೊಂಡ ಮೇಲೆ ಅವರ ಆತ್ಮ ರಕ್ಷಣೆಯ ವಿಚಾರವಾಗಿ ಮಿ. ಡ್ರೂವೆಟ್:

'ಈ ಮಕ್ಕಳಿಗೆ ಅಧ್ಯಾತ್ಮ ವಿದ್ಯೆಯನ್ನು ಯಾವುದು ಕೊಡೋಣ' ಎಂದು ಕೇಳಿದ್ದಕ್ಕೆ 'ಆ ಬಗ್ಗೆ ಕಾಳಜಿಮಾಡಬೇಡಿ. ಅವರಿಗೆ ತಿಳುವಳಿಕೆ ಬಂದಮೇಲೆ ಅವರೇ ತಮಗಿಷ್ಟ ಬಂದದ್ದನ್ನು ಆರಿಸಿ ಕೊಳ್ಳುವರು' ಎಂದು ಉತ್ತರಕೊಟ್ಟರಂತೆ ಡಾ. ಘೋಷ್.

ಇಂಥ ಸನ್ನಿವೇಶದಲ್ಲಿ ಈ ಮಕ್ಕಳನ್ನು, ಬಿಟ್ಟು ಡಾ. ಕೃಷ್ಣಧನ ಘೋಷ್ ಭಾರತಕ್ಕೆ ಮರಳಿದರು. ಹಿಂದಿನಿಂದ ಅವರ ಮಡದಿ 1881ರ ಮಧ್ಯಭಾಗದಲ್ಲಿ ವಾಪಸು ಬಂದರು.

೨ ಬಡತನದ ಬೇಗೆಯಲ್ಲಿ!

ಡ್ರ್ಯೂವೆಟ್ ದಂಪತಿಗಳ ರಕ್ಷಣೆಯಲ್ಲಿ ಅರವಿಂದರನ್ನು
ಬಿಟ್ಟಾಗ ಅವರಿಗಿನ್ನೂ ಶಾಲೆಗೆ ಸೇರಿಸಿಕೊಳ್ಳುವ ವಯಸ್ಸಾಗಿರಲಿಲ್ಲ.
ಆದ್ದರಿಂದ ಅವರ ಶಿಕ್ಷಣ ಡ್ರ್ಯೂವೆಟ್‌ರ ಮನೆಯಲ್ಲಿಯೇ ನಡೆಯ
ಬೇಕಾಯಿತು. ಆ ಶಿಕ್ಷಣ ಎಂದರೆ ಶಾಲೆಯಲ್ಲಿ ಸಿದ್ಧಗೊಳಿಸಿದ
ವೇಳಾಪಟ್ಟಿಯ ಕ್ರಮದಂತೆ ಇಂಥಾವೇಳೆಯಲ್ಲಿ ಇಷ್ಟು ಪ್ರಮಾಣ
ದಲ್ಲಿ ಇಂಥಾ ವಿಷಯ ಇಂಥಾ ಪಾಠ ಹೇಳಿಕೊಡುವ ಯಾಂತ್ರಿಕ
ಕೆಲಸವಾಗಿರಲಿಲ್ಲ. ಸಮಯದ ನಿರ್ಬಂಧ, ವಿಷಯದ ಪರಿಮಿತಿ,
ಪರೀಕ್ಷೆಯ ಉದ್ದೇಶಗಳಿಗೆ ಕಲಿಸುವ ಮತ್ತು ಕಲಿಯುವ ಕೂಲಿ
ಕೆಲಸ ಅದಾಗಿರಲಿಲ್ಲ. ಇಂಥಾದ್ದನ್ನೇ ಇಂತಿಂಥಾ ಕಾಲಕ್ಕೇ ಇಷ್ಟಿಷ್ಟೇ
ಕಲಿಸಿ ಮುಗಿಸಬೇಕೆಂಬ ಕಡ್ಡಾಯ ಇರಲಿಲ್ಲ. ಆ ಗುರು
ಶಿಷ್ಯರ ಒಲವು ಬುದ್ಧಿಶಕ್ತಿಗೆ ಅನುಗುಣವಾಗಿ ಯಾವುದನ್ನು
ಬೇಕಾದರೂ ಎಷ್ಟಾದರೂ ಕಲಿಯುವ ಕಲಿಸುವ ಅವಕಾಶವಿತ್ತು.
ಆದ್ದರಿಂದಲೆ ಅರವಿಂದ ಹನ್ನೆರಡು ವರ್ಷದವನಾಗುವ ಹೊತ್ತಿಗೆ
ಷೇಕ್ಸ್‌ಪಿಯರ್, ಷೆಲ್ಲಿ, ಕೀಟ್ಸ್. ವರ್ಡ್ಸ್‌ವರ್ಥ್, ಮಿಲ್ಟನ್
ಮುಂತಾದ ಪ್ರಖ್ಯಾತ ಆಂಗ್ಲ ಕವಿಗಳ ಕಾವ್ಯರಾಶಿಯನ್ನೆಲ್ಲ ಅರೆದು
ಆಪೋಶನಮಾಡಿದ! ಇಂಗ್ಲಿಷ್ ಭಾಷೆಯಲ್ಲಿ ಎಷ್ಟು ಪಳಗಿದ
ನೆಂದರೆ, ಆ ಚಿಕ್ಕ ವಯಸ್ಸಿಗೆ ಕಾವ್ಯ ರಚನಾ ಸಾಮರ್ಥ್ಯ ಕರಗತ
ವಾಗಿತ್ತು! ಆ ವಯಸ್ಸಿನ ಬಹುಮಕ್ಕಳಿಗೆ ತಮ್ಮ ಮಾತೃ
ಭಾಷೆಯಲ್ಲಿಯೆ ನಾಲ್ಕುವಾಕ್ಯ ತಪ್ಪಿಲ್ಲದೆ ಬರೆಯುವ ಸಾಮರ್ಥ್ಯ
ವಿರುವುದಿಲ್ಲ. ಅವರು ಆಟದ ಹಂಬಲದಿಂದ ಇನ್ನೂ ಪಾರಾಗಿರು

ವುದೆ ಇಲ್ಲ. ಆದರೆ ಅರವಿಂದನಿಗೆ ಮಾತ್ರ ಕಾವ್ಯರಚನೆಯೂ ಬಟುವಾಗಿ ಹೋಗಿತ್ತು.

ಇಷ್ಟೇ ಅಲ್ಲ. ಅದೇ ಕಾಲಾವಧಿಯಲ್ಲಿ ಲ್ಯಾಟಿನ್, ಗ್ರೀಕ್ ಮತ್ತು ಫ್ರೆಂಚ್ ಭಾಷೆಗಳನ್ನು ಕಲಿತರು. ಮಿಸ್ಟರ್ ಡ್ರ್ಯೂವೆಟ್ ಲ್ಯಾಟಿನ್ ಭಾಷೆಯಲ್ಲಿ ಘನ ವಿದ್ವಾಂಸರು. ಶ್ರೀಮತಿ ಡ್ರ್ಯೂವೆಟ್ ಫ್ರೆಂಚ್ ಭಾಷೆಯಲ್ಲಿ ಪಳಗಿದ ಅಗಾಧ ಪಂಡಿತೆ. ಈ ಇಬ್ಬರೂ ಕೂಡಿ ಅರವಿಂದನಿಗೆ ಪಾಶ್ಚಾತ್ಯ ಪ್ರಪಂಚದ ಎರಡು ಉತ್ಕೃಷ್ಟ ಭಾಷೆಗಳ, ಅವುಗಳ ಮೂಲಕ ಪ್ರೈವೆತ್ತ ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯ, ತತ್ವಜ್ಞಾನ, ಕಲೆ, ಇತಿಹಾಸ ಮುಂತಾದ ಶ್ರೇಷ್ಠಜ್ಞಾನ ಭಂಡಾರದ ಬಾಗಿಲನ್ನು ತೆರೆದು ತೋರಿಸಿದರು. ಲ್ಯಾಟಿನ್ ಭಾಷೆಯಲ್ಲಿದ್ದ ಅಪಾರ ಅನುಪಮ ಸಾಹಿತ್ಯ, ಕಲೋಪಾಸನೆ, ಗ್ರೀಕ್ ಭಾಷೆಯ ಮೂಲಕ ಶಕ್ತಿಯುತವಾದ, ಬಲಿಷ್ಠ ಸಂಸ್ಕೃತಿಯು ಪ್ರಭಾವಶಾಲಿಯಾದ. ಒಂದು ಕಾಲದಲ್ಲಿ ಅಂದಿನ ಲೋಕವನ್ನೇ ನಿಬ್ಬೆರಗು ಮಾಡಿದ ವಿಚಾರ ಪ್ರಣಾಳಿಕೆಯ ಬೀಗದಕೈ ಅರವಿಂದನ ಕೈವಶವಾಯಿತು! ಮುಂದೆ ಶ್ರೀ ಅರವಿಂದರು ಆಧ್ಯಾತ್ಮಿಕ, ದಾರ್ಶನಿಕ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ, ಕಲಾ ಕ್ಷೇತ್ರಗಳಲ್ಲಿ ಏರಿದ ಮಹೋನ್ನತ ಎತ್ತರಕ್ಕೆ ಇದು ದಾರಿಮಾಡಿಕೊಟ್ಟಿತು. ಶಾಲೆಗೆ ಹೋಗದಿದ್ದರಿಂದಲೆ ಆ ಚಿಕ್ಕ ವಯಸ್ಸಿಗೆ ಇಷ್ಟೆಲ್ಲಾ ಸಾಧ್ಯವಾಯಿತೆಂದು ತೋರುತ್ತದೆ. ಅಲ್ಲದೆ ಅವರೇ ಬಂಕಿಮರ ಬಗ್ಗೆ ಹೇಳುವಂತೆ. 'ನಿಜವಾಗಿಯೂ ಉಪಯುಕ್ತವಾದ ಯಾವ ಜ್ಞಾನವೂ ಶಾಲೆಯ ಓದಿನಿಂದ ಸಾಧ್ಯವಿಲ್ಲ' ಎಂಬುದು ಅವರ ಸ್ವಾನುಭವದ ನುಡಿ!!

ಇಂಥ ಮೇಧಾವಿ ಬಾಲಕನಿಗೆ ಬಹು ಉತ್ಸಾಹದಿಂದ ಡ್ರ್ಯೂವೆಟ್ ದಂಪತಿಗಳು ವಿದೆ ಕಲಿಸಿದರು. ಬಾಲಕ ಅರವಿಂದನ ಉತ್ಸಾಹ

ಭವಿಷ್ಯವನ್ನು ಶ್ರೀಮತಿ ಡ್ರ್ಯೂವೆಟ್ ಮುಂಗಂಡು ಗಂಡನಿಗೊಂದು ಸೂಚನೆ ಕೊಟ್ಟಳು: ಈ ಹುಡುಗನನ್ನು ಕ್ರಿಶ್ಚಿಯನ್ ಜಾತಿಗೆ ಮತಾಂತರ ಮಾಡುವುದೆಂದು. ಆದರೆ ಮಿ. ಡ್ರ್ಯೂವೆಟ್ ಅದನ್ನು ಒಪ್ಪಲಿಲ್ಲ. ನಂಬಿ ತಮ್ಮ ವಶಕ್ಕೆ ಬಿಟ್ಟಿದ್ದ ಅನ್ಯಮತೀಯರಾದ ಬಾಲಕನನ್ನು ಮತಾಂತರ ಮಾಡುವುದು ನಂಬಿಕೆ ದ್ರೋಹವೆಂದು ಶ್ರೀಮತಿ ಡ್ರ್ಯೂವೆಟ್ ಅವರ ಯೋಜನೆಯನ್ನು ತಳ್ಳಿಹಾಕಿದರು. ಆದರೂ ಬಾಲಕ ಅರವಿಂದನನ್ನು ಮತಾಂತರಗೊಳಿಸಿದ್ದರೆಂಬ ಒಂದು ನಂಬುಗೆ ಬಹುದಿನಗಳವರೆಗೆ ಪ್ರಚಲಿತವಿತ್ತು. ಅದನ್ನು ಶ್ರೀ ಅರವಿಂದರ ಗಮನಕ್ಕೆ ತಂದಾಗ, ಅವರು ಹೀಗೆ ಹೇಳಿದ್ದಾರೆ:

"ನಡೆದ ಸಂಗತಿ ಇಷ್ಟು. ಕಂಬರ್ ಲ್ಯಾಂಡ್ ಎಂಬಲ್ಲಿ ಪಾದ್ರಿಗಳ ಸಭೆ ಸೇರಿತ್ತು. ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ....ಆ ಸಭೆಯಲ್ಲಿ ಕೆಲವು ಮತಾಂತರಗಳಾದುವು. ಆಗ ಒಬ್ಬ ಪಾದ್ರಿ ಬಂದು ನನ್ನನ್ನು ಕೆಲವು ಪ್ರಶ್ನೆ ಕೇಳಿದ. ನಾನು ಏನೊಂದು ಉತ್ತರ ಕೊಡಲಿಲ್ಲ. ಆಗ ಅವರಿಗೆ ಅದೇನು ಅನಿಸಿತೊ ಏನೋ : 'ಅವನ ಉದ್ಧಾರವಾಯ್ತು! ಉದ್ಧಾರವಾಯ್ತು! ದೇವರು ರಕ್ಷಿಸಿದ ! ರಕ್ಷಿಸಿದ !' ಎಂದು ಗಟ್ಟಿಯಾಗಿ ಕೂಗಿ ನನಗಾಗಿ ಪ್ರಾರ್ಥನೆಮಾಡಿ, ದೇವರಿಗೆ ಕೃತಜ್ಞತೆ ಸಲ್ಲಿಸಿದರು. ತರುವಾಯ ಆ ಪಾದ್ರಿ ಬಂದು ನಾನು ಪ್ರಾರ್ಥನೆ ಮಾಡುವಂತೆ ಹೇಳಿದ. ನನಗೆ ಅದರ ಅಭ್ಯಾಸವೆ ಇರಲಿಲ್ಲ. ಆದರೂ ತೋರ್ಕೆಗಾಗಿ ಮಕ್ಕಳು ಮಲಗುವ ಮುನ್ನ ಪ್ರಾರ್ಥನೆ ಮಾಡುವಂತೆ ನಟಿಸಿದೆ. ಆಗಿದ್ದು ಅಷ್ಟೆ. ನಾನು ಚರ್ಚಿಗೆ ಎಂದೂ ಹೋಗಲಿಲ್ಲ. ಆಗ ನನಗೆ ಹತ್ತು ವರ್ಷ."

1884ರಲ್ಲಿ ಡ್ರ್ಯೂವೆಟ್ ದಂಪತಿಗಳು ಇಂಗ್ಲೆಂಡ್ ದೇಶವನ್ನು ಬಿಟ್ಟು ಆಸ್ಟ್ರೇಲಿಯ ಖಂಡಕ್ಕೆ ಹೋಗಬೇಕಾದ ಪ್ರಸಂಗ ಬಂತು.

ಚರ್ಚಿನ ಅಧಿಕಾರಿಗಳಿಗೂ ಅವರಿಗೂ ಭಿನ್ನಾಭಿಪ್ರಾಯವುಂಟಾಗಿ, ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳಲಾರದೆ ಇಂಗ್ಲೆಂಡನ್ನೆ ಬಿಟ್ಟು ಹೊರಟರು. ಹೊರಡುವ ಮುನ್ನ ತಮ್ಮ ರಕ್ಷಣೆಯಲ್ಲಿದ್ದ ಈ ಮೂವರು ಹಿಂದೂ ಬಾಲಕರನ್ನು ತಮ್ಮ ವೃದ್ಧ ತಾಯಿಯ ವಶಕ್ಕೊಪ್ಪಿಸಿ ಹೋದರು. ಆಸ್ಟ್ರೇಲಿಯಾಕ್ಕೆ ತಲುಪುವುದಕ್ಕೆ ಮೊದಲು ಕಲ್ಕತ್ತೆಯ ಮಾರ್ಗವಾಗಿ ಹೋಗಿ, ಡಾ. ಕೃಷ್ಣಧನ ಘೋಷರಿಂದ, ಅವರ ಮಕ್ಕಳ ರಕ್ಷಣೆಯ ಬಾಬ್ತು ಬರಬೇಕಾಗಿದ್ದ ಬಾಕೀ ಹಣವನ್ನು ವಸೂಲು ಮಾಡಿಕೊಂಡು ಹೋದರು. ಡಾ. ಕೃಷ್ಣಧನ ಘೋಷರು ಒಂದೆರಡು ವರ್ಷಗಳಿಂದ ಸರಿಯಾಗಿ ಹಣವನ್ನೆ ಕಳಿಸುತ್ತಿರಲಿಲ್ಲ. ಪರದೇಶದಲ್ಲಿದ್ದ ಈ ಮೂವರೂ ಅಲ್ಪವಯಸ್ಸಿನ ಬಾಲಕರು ಪರದೇಶಿಗಳಂತೆ ಕಡಿ ಕಷ್ಟದ ಬಾಳು ಜೀವಿಸುತ್ತಿದ್ದರು.

1884ರಲ್ಲಿ ಅರವಿಂದ ಮತ್ತು ಅವರಿಬ್ಬರು ಅಣ್ಣಂದಿರು ಮ್ಯಾಂಚೆಸ್ಟರ್ ಬಿಟ್ಟು ಲಂಡನ್ನಿಗೆ ಬಂದು ಮಿ. ಡ್ರ್ಯೂವೆಟ್ ಅವರ ವೃದ್ಧ ತಾಯಿಯ ಮನೆಯಲ್ಲಿ ವಾಸಿಸತೊಡಗಿದರು.

ಅದೇ ವರ್ಷ ಸೆಪ್ಟಂಬರ್ ತಿಂಗಳಲ್ಲಿ ಸೇಂಟ್ ಪಾಲ್ಸ್ ಹೈಸ್ಕೂಲಿಗೆ ಸೇರಿದರು. ಆಗ ಆ ಶಾಲೆಯ ಮುಖ್ಯೋಪಾಧ್ಯಾಯರು ಮಿ. ವಾಕರ್ ಎಂಬುವವರು. ಮುಖ್ಯೋಪಾಧ್ಯಾಯರು ಬಾಲಕ ಅರವಿಂದರನ್ನು ಶಾಲೆಗೆ ಸೇರಿಸಿಕೊಳ್ಳುವುದಕ್ಕೆ ಮುಂಚೆ ಪರೀಕ್ಷಿಸಿದಾಗ, ಈ ಹನ್ನೆರಡು ವರ್ಷದ ಬಾಲಕನ ಲ್ಯಾಟಿನ್ ಮತ್ತು ಇಂಗ್ಲೀಷ್ ಭಾಷಾಜ್ಞಾನ, ಸಾಹಿತ್ಯ ಪರಿಚಯ, ಕಾವ್ಯ ರಚನಾ ಶಕ್ತಿಯನ್ನು ಕಂಡು ಸುಮ್ಮನೆ ಬೆರಗಾಗಿಹೋದರು. ಗುಣಕ್ಕೆ ಮತ್ಸರವಿಲ್ಲದ ಪ್ರಾಂಜಲ ಮನಸ್ಸಿನ ಆ ಪ್ರಾಜ್ಞಾತ್ಮರು

ಬಾಲಕ ಅರವಿಂದರು ವಿದ್ಯಾಭ್ಯಾಸದ ಬಗ್ಗೆ ತುಂಬ ಆಸಕ್ತಿ ಮತ್ತು ಮುತುವರ್ಜಿ ವಹಿಸಿದರು. ತಂದೆ ಅರವಿಂದರಿಗೆ ಗ್ರೀಕ್ ಭಾಷೆಯನ್ನು ಹೇಳಿಕೊಡತೊಡಗಿದರು. ಶೀಘ್ರ ಮತಿಯ ಅರವಿಂದ ಆ ಕಠಿನವಾದ ಭಾಷೆಯ ಮೇಲೆ ಬಹು ಶೀಘ್ರವಾಗಿ ಅಗಾಧವಾದ ಪ್ರಭುತ್ವ ಪಡೆದರು. ಮ್ಯಾಂಚೆಸ್ಟರಿನಲ್ಲಿ ಇದ್ದಾಗಲೇ ಲ್ಯಾಟಿನ್, ಫ್ರೆಂಚ್ ಭಾಷೆಗಳಲ್ಲಿ ಪರಿಣತಿಯಿತ್ತು. ಇಲ್ಲಿ ಇನ್ನೂ ಆಳವಾದ ಪರಿಶ್ರಮ ಉಂಟಾಯಿತು. ಅಂದರೆ ಹದಿನಾಲ್ಕು–ಹದಿನೈದು ವರ್ಷ ವಯಸ್ಸಿನೊಳಗಾಗಿ ನಾಲ್ಕು ಭಾಷೆಗಳಲ್ಲಿ—ಇಂಗ್ಲಿಷ್, ಫ್ರೆಂಚ್, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಲ್ಲಿ —ಅಗಾಧವಾದ ಪಾಂಡಿತ್ಯ ಪಡೆದರು! ಇಷ್ಟೇ ಅಲ್ಲ. ಇಟಾಲಿಯನ್, ಜರ್ಮನ್ ಮತ್ತು ಸ್ಪ್ಯಾನಿಷ್ ಭಾಷೆಗಳನ್ನು ತಕ್ಕಮಟ್ಟಿಗೆ ಪರಿಚಯ ಮಾಡಿಕೊಂಡರು. ಅಂದರೆ ನಾಲ್ಕು ಭಾಷೆಗಳಲ್ಲಿ ಅಗಾಧವಾದ ಪಾಂಡಿತ್ಯವನ್ನು ಪಡೆದುದಲ್ಲದೆ ಮೂರು ಭಾಷೆಗಳ ವ್ಯಾವಹಾರಿಕ ಜ್ಞಾನವನ್ನು ಪಡೆದಿದ್ದರು. ಆಯಾ ಭಾಷೆಗಳ ಸಾಹಿತ್ಯದ ಅಪಾರ ಪರಿಚಯ ಪಡೆದರು.

ಶ್ರೀ ಅರವಿಂದರ ಜ್ಞಾನದ ವಿಸ್ತೃತಿ ಇಷ್ಟಕ್ಕೇ ನಿಲ್ಲಲಿಲ್ಲ. ಆಧುನಿಕ ಹಾಗೂ ಮಧ್ಯಯುಗದ ಯೂರೋಪ್ ಇತಿಹಾಸದಲ್ಲಿ ಆಳವಾದ ಜ್ಞಾನಾರ್ಜನೆ ಮಾಡಿದರು.

ಹೀಗೆ ಸಾಹಿತ್ಯದಲ್ಲಿ ನಿಷ್ಣಾತರಾದುದಕ್ಕಾಗಿ ಅವರಿಗೆ ಬಟರ್‌ವರ್ತ್ ಶಿಷ್ಯವೇತನವೂ ಇತಿಹಾಸದಲ್ಲಿ ಪಾರಂಗತರಾದುದಕ್ಕಾಗಿ ಬೆಡ್‌ಫೋರ್ಡ್ ಶಿಷ್ಯವೇತನವೂ ಸಿಕ್ಕವು! ಈ ಶಿಷ್ಯವೇತನದ ಧನಸಹಾಯ ಒದಗಿದ್ದರಿಂದಲೇ ಆ ಮೂವರೂ ಬಾಲಕರು ಆ ಪರದೇಶದಲ್ಲಿ ತುತ್ತನ್ನು ಕಾಣುವ ದಾರಿಯಾಯಿತು. ಲಂಡನ್ನಿನಲ್ಲಿ ಅವರು ಕಳೆದ ಆ ದುರ್ದೆಸೆಯ ಕಾಲವನ್ನು

ಕುರಿತು ಅವರೆ ಒಮ್ಮೊಮ್ಮೆ ಈ ಅಭಿಪ್ರಾಯದ ಮಾತುಗಳನ್ನು ಆಡುತ್ತಿದ್ದರು.

"ನಮಗೆ ಮೈತುಂಬ ಬೆಚ್ಚನೆಯ ಬಟ್ಟೆಯೇ ಇರುತ್ತಿರಲಿಲ್ಲ. ಕಾಲುಚೀಲ ಬೂಟುಗಳೂ ಇರುತ್ತಿರಲಿಲ್ಲ. ಆ ಕೊರೆಯುವ ಚಳಿಯನ್ನು ಹೋಗಲಾಡಿಸಲು ಅಗ್ಗಿಷ್ಟಿಕೆಯನ್ನು ಹೊತ್ತಿಸಲು ಬೇಕಾದ ಕಲ್ಲಿದ್ದಲು ಅಥವಾ ಸೌದೆಗೂ ಗತಿಯಿರಲಿಲ್ಲ. ಮಲಗಿದಾಗ ಹೊದ್ದುಕೊಳ್ಳಲು ಬೆಚ್ಚನೆಯ ರಗ್ಗೂ ಇರಲಿಲ್ಲ. ನಮ್ಮ ಊಟ ಎಂದರೆ ಬೆಳಿಗ್ಗೆ ಒಂದು ಕಪ್ ಚಹಾ. ಮಧ್ಯಾಹ್ನ ಒಂದೆರಡು ತುಂಡು ಬ್ರೆಡ್, ರಾತ್ರಿ ಮತ್ತೆ ಒಂದು ಸ್ಯಾಂಡ್‌ವಿಚ್. ಐದು ಶಿಲಿಂಗ್ ಹಣದಲ್ಲಿ ಒಂದು ವಾರ ಜೀವ ಹಿಡಿದುಕೊಂಡಿರಬೇಕಾಗುತ್ತಿತ್ತು".

ಇಂಥ ದುರ್ಭರ ಪ್ರಸಂಗದಲ್ಲೂ ಅವರು ಎದೆಗೆಟ್ಟ ಸಂಗತಿ ಕಂಡುಬರುವುದಿಲ್ಲ. ತದ್ವಿರುದ್ಧವಾಗಿ ಇಂಥ ಅತ್ಯಂತ ಕಠಿನ ಹಾಗೂ ಅನನುಕೂಲ ಸನ್ನಿವೇಶದಲ್ಲೂ ತಮ್ಮ ವ್ಯಾಸಂಗವನ್ನು ಅವ್ಯಾಹತವಾಗಿ ಸಾಗಿಸಿದರು. ಅಷ್ಟು ಮಾತ್ರವೇ ಅಲ್ಲ. ಇಂಗ್ಲೀಷ್ ಮತ್ತು ಲ್ಯಾಟಿನ್ ಭಾಷೆಯಲ್ಲಿ ಅತ್ಯುತ್ತಮ ಕವಿತೆಗಳನ್ನೂ ಕಟ್ಟ ತೊಡಗಿದರು. ಹನ್ನೊಂದು ವರ್ಷದವರಿದ್ದಾಗಲೇ ಪ್ರಾರಂಭಿಸಿದ್ದ ಕಾವ್ಯರಚನೆಯನ್ನು ದಿನಕಳೆದಂತೆಲ್ಲ ಇನ್ನೂ ವೃದ್ಧಿಪಡಿಸಿಕೊಂಡರು. 'ಮ್ಯಾಂಚೆಸ್ಟರಿನಲ್ಲಿದ್ದಾಗ ಬರೆದ ಕವಿತೆಗಳು ವಿಕಾರವಾದ ಅನುಕರಣೆಗಳಾಗಿದ್ದುವು'. ಎಂಬುದಾಗಿ ಅವರೆ ಮುಂದೆ ಹೇಳುತ್ತಾರೆ. ಅವರೆ. ಲಂಡನ್ನಿನಲ್ಲಿ ಬರೆದ ಕವಿತೆಗಳು ಭಾಷಾಶುದ್ಧಿ, ಭಾವಶುದ್ಧಿ, ಚಿಂತನಾಂಶಗಳಿಂದ ಕೂಡಿದ ಶ್ರೇಷ್ಠಮಟ್ಟದ ಕಾವ್ಯಕೃತಿಗಳಾಗಿದ್ದುವೆಂದು ಅಂದಿನ ಶ್ರೇಷ್ಠ ಸಾಹಿತಿಗಳು ಮೆಚ್ಚಿಕೊಂಡಿದ್ದರು. ಗ್ರೀಕ್ ಭಾಷೆಯಿಂದ ತರ್ಜುಮೆಮಾಡಿದ್ದ

ಕೆಲವು ಕವಿತೆಗಳನ್ನು ಓದಿದ ಪ್ರಖ್ಯಾತ ಆಂಗ್ಲಕವಿ ಲಾರೆನ್ಸ್ ಬಿನಿಯನ್ ಅವುಗಳನ್ನು ಮೆಚ್ಚಿಕೊಂಡು, ಇನ್ನೂ ವಿಶೇಷವಾಗಿ ಕವಿತಾರಚನೆ ಏಕೆ ಮಾಡಬಾರದೆಂದು ಕೇಳಿದರಂತೆ.

ಲಂಡನ್ನಿನಲ್ಲಿದ್ದಾಗ ಅವರ ಜ್ಞಾನದ ದಿಗಂತ ಇನ್ನೂ ವಿಸ್ತಾರವಾಗಿತ್ತೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ತಮ್ಮ ಶಾಲೆಯಲ್ಲಿ ಏರ್ಪಡಿಸಿದ್ದ ಚರ್ಚಾಕೂಟಗಳಲ್ಲಿ ಬಾಲಕ ಅರವಿಂದ ಭಾಗವಹಿಸುತ್ತಿದ್ದ. ಮಿಲ್ಟನ್‌ನ ಕಾವ್ಯವನ್ನು ಕುರಿತು. ಸ್ವಿಫ್ಟ್‌ನ ರಾಜ್ಯಕೀಯ ಸಿದ್ಧಾಂತಗಳನ್ನು ಕುರಿತು ಅರವಿಂದ ಪ್ರಬಂಧಗಳನ್ನು ರಚಿಸಿ ಚರ್ಚಾಕೂಟದಲ್ಲಿ ಭಾಗವಹಿಸಿದ್ದರಂತೆ! ಅವರಿಗಾಗ ಹದಿನಾಲ್ಕು-ಹದಿನೈದು ವರ್ಷಮಾತ್ರ!

ಹೀಗಿರುತ್ತಿರಲಾಗಿ. ತಮಗೆ ಆಶ್ರಯ ಕೊಟ್ಟಿದ್ದ ಡ್ರ್ಯೂವೆಟ್ ತಾಯಿ ತಾನಿದ್ದ ಮನೆಯನ್ನೇ ಬಿಟ್ಟು ತೊಲಗಿ ಹೋಗುವಂಥ ಸಣ್ಣದೊಂದು ಘಟನೆ ನಡೆಯಿತು. ಈ ಮೂವರು ಹಿಂದೂ ಬಾಲಕರು ಆಕೆಯ ಮನೆಯಲ್ಲಿ ನಡೆಯುತ್ತಿದ್ದ ಕ್ರೈಸ್ತನ ಆರಾಧನೆ. ಬೈಬಲ್ ಪಾರಾಯಣೆಯಲ್ಲಿ ಭಾಗವಹಿಸುತ್ತಿದ್ದರು. ವಿನಯ ಭೂಷಣ ಪೂಜೆ. ಪ್ರಾರ್ಥನೆ. ಪಾರಾಯಣೆ ಮಾಡುತ್ತಿದ್ದ. ಒಂದು ದಿನ ಮನಮೋಹನ ಈ ಪ್ರಾರ್ಥನೆಯಲ್ಲಿ ಭಾಗವಹಿಸಲು ನಿರಾಕರಿಸಿದ. ಅದರಿಂದ ಡ್ರ್ಯೂವೆಟ್ ಮುದುಕಿಗೆ ಕೋಪ ಬಂತು. ಇಂಥ ಪಾಷಂಡಿಗಳಿರುವ ಮನೆಯ ಮಾಳಿಗೆ ಕುಸಿದು ಬೀಳುವುದೆ ಖಂಡಿತ ಎಂದು ದೃಢವಾಗಿ ನಂಬಿದ್ದ ಆ ಮುದುಕಿ ಆ ಮನೆಯಲ್ಲಿ ಅರೆಘಳಿಗೆನಿಲ್ಲದೆ ಚಾರು ಚೂರು ಅರಿವೆ ಅಂಚಡಿ ಕಟ್ಟಿಕೊಂಡು ಕಾಲ್ತೆಗೆದಳು!! ಕೆಲವು ದಿನ ಈ ಮೂವರೂ ಬಾಲಕರು ಆ ಮನೆಯಲ್ಲಿದ್ದು ಅಲ್ಲಿಂದ 1887ರ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಕೆನ್ಸಿಂಗ್‌ಟನ್ ಲಿಬರಲ್ ಕ್ಲಬ್ ಕಛೇರಿಯ ಮಹಡಿಯ ಮೇಲಿದ್ದ

ಕೊಠಡಿಗಳಿಗೆ ಹೋದರು. ಆ ಕ್ಲಬ್ಬಿನ ಕಾರ್ಯದರ್ಶಿಗಳಾಗಿದ್ದ ಜೇಮ್ಸ್ ಎಸ್. ಕಾಟನ್ ಎಂಬ ಮಹಾನುಭಾವರು (ಅವರೇ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿದ ಸರ್ ಹೆನ್ರಿ ಕಾಟನ್ ಅವರ ಮಕ್ಕಳು) ಮನಮೋಹನನಿಗೆ ಒಂದು ಸಹಾಯಕ ಉದ್ಯೋಗವನ್ನು ಕೊಟ್ಟರು. ವಾರಕ್ಕೆ ಐದು ಶಿಲಿಂಗ್ ಸಂಬಳ ಬರುತ್ತಿತ್ತು. ಅದರಲ್ಲಿಯೇ ಈ ಮೂವರೂ ವಿದೇಶೀ ಬಾಲಕರು ಜೀವ ಹಿಡಿದುಕೊಂಡು ಬದುಕಬೇಕಾಗಿತ್ತು. ಬದುಕದಿದ್ದರೆ ವಿಧಿಯೇ ಇರಲಿಲ್ಲ! ಅಲ್ಲಿ ಮಲಗಲು ಪ್ರತ್ಯೇಕವಾದ ಕೋಣೆಯೂ ಇರಲಿಲ್ಲ. ಹಾಸಿಗೆಯೂ ಇರಲಿಲ್ಲ. ಹೋಗಲಿ, ವ್ಯಾಸಂಗಕ್ಕೆ ಬೇಕಾದ ಪ್ರಶಾಂತ ಸನ್ನಿವೇಶವಾದರೂ ಇತ್ತೇ ಎಂದರೆ ಅದೂ ಇಲ್ಲ! ಹಗಲಿರುಳು ಕ್ಲಬ್ಬಿಗೆ ಬಂದು ಹೋಗುವ ಜನರ — ಸಾಧಾರಣವಾಗಿ ಸಜ್ಜನರ — ಓಡಾಟ; ಹಾಳು ಹರಟೆ. ಜೊತೆಗೆ ಈ ಕಟ್ಟಡದ ಬದಿಯ ರೈಲು ಸಂಚಾರದ ಸದ್ದು. ಈ ದೊಂಬಿಯ ಮಧ್ಯದಲ್ಲಿ ಕುಳಿತು ಅರವಿಂದ ತನ್ನ ಶಾಲೆಯ ಪಾಠಗಳ ವ್ಯಾಸಂಗವನ್ನೂ ಮಾಡುವುದರ ಜೊತೆಗೆ, ಐ. ಸಿ. ಎಸ್. ಪರೀಕ್ಷೆಗೆ ವ್ಯಾಸಂಗ ಮಾಡಬೇಕಾಗಿತ್ತು! ಇಂಥ ಅನುಕೂಲ ಮತ್ತು ಕೇವಲ ಅಹಿತಕರವಾದ ಸನ್ನಿವೇಶದಲ್ಲಿ ಅರವಿಂದರು ಶಾಲಾ ಪಠ್ಯಗಳನ್ನು ಅಭ್ಯಸಿಸಿದುದಲ್ಲದೆ ಐ. ಸಿ. ಎಸ್. ಅರ್ಹತಾ ಪರೀಕ್ಷೆಯನ್ನು ಕಟ್ಟಿ ಉತ್ತಮ ಶ್ರೇಣಿಯಲ್ಲಿ ಪಾಸಾದರು. ಲ್ಯಾಟಿನ್ ಮತ್ತು ಗ್ರೀಕ್ ಕಾವ್ಯ, ಕಲೆ, ಸಂಸ್ಕೃತಿಗಳನ್ನು ತಮ್ಮ ವಿಶೇಷ ವ್ಯಾಸಂಗದ ವಿಷಯವನ್ನಾಗಿ ಆರಿಸಿಕೊಂಡು ಹೆಮ್ಮೆತರುವ ರೀತಿಯಲ್ಲಿ ಅರ್ಹತೆ ಪಡೆದರು. ಆಗವರಿಗೆ ಹದಿನಾರು ತುಂಬಿ ಹದಿನೇಳರಲ್ಲಿ ನಡೆಯುತ್ತಿತ್ತು. ಹದಿನೇಳು

ತುಂಬಿದ ವರ್ಷ ಆಗಸ್ಟ್ 1889ರಲ್ಲಿ ಶ್ರೀ ಅರವಿಂದರು ಕೇಂಬ್ರಿಜ್ ವಿಶ್ವ ವಿದ್ಯಾನಿಲಯದ ಕಿಂಗ್ಸ್ ಕಾಲೇಜಿಗೆ ಉನ್ನತ ವ್ಯಾಸಂಗಕ್ಕಾಗಿ ಸೇರಿದರು.

೩ ಪ್ರತಿಭೆಯ ಪ್ರಚಂಡ ಜ್ಯೋತಿ

ಶ್ರೀ ಅರವಿಂದರು ಕೇಂಬ್ರಿಜ್‌ನಲ್ಲಿ ಕಳೆದ ದಿನಗಳನ್ನು ಕುರಿತು ಆಗ ಅಲ್ಲಿದ್ದ ಪ್ರಾಧ್ಯಾಪಕರು ಸಹಪಾಠಿಗಳು ಏನು ಹೇಳುತ್ತಾರೆ ಎಂಬುದನ್ನು ನೋಡಿ ತಿಳಿದುಕೊಳ್ಳೋಣ. ಆಗ ಪ್ರೊ॥ ಜಿ. ಎಂ. ಪ್ರೋಥೇರೊ ಎಂಬ ವಿದ್ವಾಂಸರು ಕೇಂಬ್ರಿಜ್‌ನಲ್ಲಿ ಸೀನಿಯರ್ ಟ್ಯೂಟರ್ ಆಗಿದ್ದರು. ಅವರ ಘನಪಾಂಡಿತ್ಯಕ್ಕೆ ಮೆಚ್ಚಿದ ಬ್ರಿಟಿಷ್ ಪ್ರಭುತ್ವ ಮುಂದೆ ಅವರಿಗೆ 'ಸರ್' ಎಂಬ ಬಹು ದೊಡ್ಡ ಬಿರುದನ್ನು ಕೊಟ್ಟು ಗೌರವಿಸಿತು. ಅವರು ಮಹಾ ಶ್ರೇಷ್ಠ ಇತಿಹಾಸ ಕಾರರೆಂದು ಇಂದಿಗೂ ಲೋಕ ಅವರನ್ನು ಗೌರವಿಸುತ್ತದೆ. ಅವರು ತಾ: 20-11-1892ರಲ್ಲಿ ಒಂದು ಪತ್ರದಲ್ಲಿ ಹೀಗೆ ಬರೆದಿದ್ದಾರೆ:

ಕಿಂಗ್ಸ್ ಕಾಲೇಜ್
ಕೇಂಬ್ರಿಜ್
ಸೆಪ್ಟೆಂಬರ್ 20. 1892

ಪ್ರಿಯ ಮಹಾಶಯರೇ,

ಅವರು (ಶ್ರೀ ಅರವಿಂದರು) ಅಲ್ಲಿದ್ದ ಎರಡು ವರ್ಷಗಳ ಉದ್ದಕ್ಕೂ ಅವರ ನಡತೆ ಸರ್ವಶ್ರೇಷ್ಠ ಮಟ್ಟದ್ದಾಗಿತ್ತು........ ಅವರ ಆರ್ಥಿಕ ಸ್ಥಿತಿ ತುಂಬಾ ಹದಗೆಟ್ಟಿತ್ತು. (ಇದನ್ನು ಸುಧಾರಿಸಿ ಕೊಳ್ಳಲು) ಶಿಷ್ಯವೃತ್ತಿ ವೇತನವನ್ನು ಉಳಿಸಿಕೊಳ್ಳಲೆಬೇಕಾಗಿತ್ತು ಅಂದರೆ ಅವರು ಪ್ರಾಚೀನ ಗ್ರೀಕ್, ಲ್ಯಾಟಿನ್ ಕಾವ್ಯ ಮತ್ತು ಕಲೆಗಳನ್ನು ಅಭ್ಯಾಸ ಮಾಡಲೇಬೇಕಿತ್ತು. ಆದ್ದರಿಂದಲೆ ಐ. ಸಿ. ಎಸ್. ಪರೀಕ್ಷೆಗಾಗಿ ಮಾಡಬೇಕಾದ ಅಭ್ಯಾಸಕ್ಕೆ ಕೆಲವೊಟ್ಟಿಗೆ

ತೊಂದರೆಯಾಯಿತು. ಆದರೂ ಆ ಶಿಷ್ಯವೃತ್ತಿ ವೇತನವನ್ನು ಪಡೆಯುವ ಅರ್ಹತೆಯ ಸಂಪಾದನೆಗಾಗಿ ತಮ್ಮ ಕರ್ತವ್ಯವನ್ನು ಅನ್ಯಾದೃಶವಾಗಿ ನೆರವೇರಿಸಿದರು. ಎರಡನೆಯ ವರ್ಷದ ಕೊನೆಗೆ ಕ್ಲಾಸಿಕಲ್ ಟ್ರೈಪಾಸ್ (Classical Tripos) ನಲ್ಲಿ ಉಚ್ಚ ಮಟ್ಟದ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಜೊತೆಗೆ ಕೆಲವು ಕಾಲೇಜ್ ಬಹುಮಾನಗಳನ್ನೂ ಪಡೆದರು....ಇದಿಷ್ಟನ್ನೂ ಸಾಧಿಸುವುದಕ್ಕೆ ಬಹುಜನರಿಗೆ ಸಾಕುಬೇಕಾಗಿ ಹೋಗುತ್ತದೆ. ಆದರೆ,ಇವರು ಇದರ ಜೊತೆಗೆ ಐ. ಸಿ. ಎಸ್. ವ್ಯಾಸಂಗವನ್ನೂ ಮುಂದುವರಿಸಿಕೊಂಡು ಹೋದರೆಂಬುದು ಅವರ ಅಸಾಧಾರಣ ಪರಿಶ್ರಮ. ಶ್ರದ್ಧೆ ಸಾಮರ್ಥ್ಯಗಳನ್ನು ತೋರಿಸುತ್ತದೆ .... ಅನೇಕ ಆಂಗ್ಲ ಯುವಕರಿಗಿಂತ ಎಷ್ಟೋ ಶ್ರೇಷ್ಠ ಮಟ್ಟದ ಉತ್ತಮ ಶೈಲಿಯ ಇಂಗ್ಲೀಷ್ ಬರೆಯುತ್ತಿದ್ದರು. ......

"ಮೇಲಾಗಿ ಈ ವ್ಯಕ್ತಿಗೆ ಸಾಮರ್ಥ್ಯದ ಜೊತೆಗೆ ಸದ್ಗುಣವೂ ಇದೆ. ಕಳೆದ ಎರಡು ವರ್ಷಗಳು ಅವನಿಗೆ ಆರ್ಥಿಕವಾಗಿ ಕಾತರದ ಕಠಿಣತರವಾದ ಕಾಲವಾಗಿತ್ತು. .... ಆದರೂ ಅವರು ಶ್ರದ್ಧೆ ಮತ್ತು ಧೈರ್ಯ ಬಿಡಲಿಲ್ಲ. (ಅವರ ಆರ್ಥಿಕ ಪ್ರಾದುರ್ಭಾವವನ್ನು ಪರಿಹರಿಸಬೇಕೆಂದು) ಅವರ ತಂದೆಯವರಿಗೆ ನಾನೇ ಪತ್ರ ಬರೆದೆ. ಆದರೆ ಅದರಿಂದ ಹೆಚ್ಚು ಪ್ರಯೋಜನವಾಗಲಿಲ್ಲ. ಕೇವಲ ಇತ್ತೀಚೆಗೆ ಶ್ರೀ ಅರವಿಂದರು ಮಾಡಿದ್ದ ಕೆಲವು ಸಾಲಗಳನ್ನು ತೀರಿಸಲು ಅಲ್ಪ ಸ್ವಲ್ಪ ಹಣವನ್ನು ಅವರ ತಂದೆಯಿಂದ ತರಿಸಿಕೊಂಡೆ. ಇಲ್ಲದಿದ್ದರೆ ಶ್ರೀ ಅರವಿಂದರನ್ನು ಕೋರ್ಟಿಗೆ ಎಳೆಯುತ್ತಿದ್ದರು. ಈ ಆರ್ಥಿಕ ಅಡಚಣೆ ಶ್ರೀ ಅರವಿಂದರ ದುಂದುಗಾರಿಕೆಯಿಂದ ಆದುದಲ್ಲ. ....ಅವರ ಜೀವನ ಪದ್ಧತಿ ದುಂದುಗಾರಿಕೆಗೆ ಕೇವಲ ವಿರುದ್ಧವಾಗಿದೆ. ಅವರ ಜೀವನ ಅತ್ಯಂತ

ಸರಳ ಮತ್ತು ಕಡುಬಡತನದ್ದಾಗಿದೆ.

ಇತಿ ನಿಮ್ಮ ನಂಬುಗೆಯ
ಜಿ. ಎಂ. ಪ್ರೋಥೇರೊ

1890-91ರಲ್ಲಿ ಪ್ರೊಫೆಸರ್ ಆರ್. ಎಸ್. ಲೆಪರ್ ಎಂ. ಎ. ಎಂಬ ಐರಿಷ್ ವಿದ್ವಾಂಸರು ಕೇಂಬ್ರಿಜ್‌ನಲ್ಲಿ ಶ್ರೀ ಅರವಿಂದ ರೊಡನೆ ವ್ಯಾಸಂಗ ಮಾಡುತ್ತಿದ್ದರು. ಅವರು ಮುಂದೆ ತಿರು ವಾಂಕೂರಿನ ಮಹಾರಾಜರ ನೌಕರೀ ಸೇರಿದರು, ಅವರು ಶ್ರೀ ಅರವಿಂದರನ್ನು ಕುರಿತು ಒಂದು ಪತ್ರದಲ್ಲಿ ಹೀಗೆ ಬರೆಯು ತ್ತಾರೆ:

"ಆ ದಿನಮಾನಗಳಲ್ಲಿ ನಾನು ಅವರನ್ನು ಚೆನ್ನಾಗಿ ಬಲ್ಲೆ. ಅವರು ಮಹಾ ಪ್ರತಿಭಾಶಾಲಿಗಳು. ಪ್ರಾಚೀನ ಕಾವ್ಯ ಕಲೆಗಳಲ್ಲಿ ಘನ ವಿದ್ವಾಂಸರೂ ಎಂಬ ಮಧುರ ಸ್ಮೃತಿ ನನಗಿದೆ....ನನಗೆ ತಿಳಿದ ಮಟ್ಟಿಗೆ ಅವರು ಅತ್ಯಂತ ಸರಳ ಹಾಗೂ ಸಂಕೋಚ ಸ್ವಭಾವದ ಸಜ್ಜನರು. ಅವರನ್ನು ಬಲ್ಲವರೆಲ್ಲರೂ ಅವರನ್ನು ಮನಸಾರೆ ಪ್ರೀತಿಸುತ್ತಿದ್ದರು. ಆಗಲೆ ಅವರು ಸಂಸ್ಕೃತವನ್ನು ಕಲಿಯು ತ್ತಿದ್ದುದು........"

ಶ್ರೀ ಅರವಿಂದರ ಇನ್ನೊಬ್ಬ ಸಹಪಾಠಿಯಾಗಿದ್ದ ಆಂಗ್ಲಮಿತ್ರರು ಅವರ ಬಗ್ಗೆ ಪತ್ರ ಒಂದರಲ್ಲಿ ಈ ಕೆಳಗಿನಂತೆ ಬರೆದಿದ್ದಾರೆ:

"ಕೇಂಬ್ರಿಜ್‌ನಲ್ಲಿ ಅವರಿದ್ದಾಗ ಆಟಗಳಲ್ಲಿ ಅವರಿಗೆ ಎಳ್ಳಷ್ಟು ಆಸಕ್ತಿ ಇರಲಿಲ್ಲ. ಆದ್ದರಿಂದ ಅಲ್ಲಿ ಅವರಿಗೆ ಅಷ್ಟೇನೂ ಸಂತೋಷವಿರಲಿಲ್ಲ. ಅವರ ಆಸಕ್ತಿಯೆಲ್ಲ ಸಾಹಿತ್ಯದಲ್ಲಿಯೆ. ಗ್ರೀಕ್ ಕವಿಗಳಲ್ಲಿ ಸ್ಯಾಪ್‌ಪೊ (Sappho) ಎಂಬ ಕವಿಯ ಬಗ್ಗೆ ಉಬ್ಬುಬ್ಬಿ ಮಾತಾಡುತ್ತಿದ್ದರು. ಇಂಗ್ಲೀಷ್ ಭಾಷೆಯಲ್ಲಿ ಅಪೂರ್ವ ಸಿದ್ಧಿಯನ್ನು ಪಡೆದಿದ್ದರೂ, ಆಂಗ್ಲ ಜನಾಂಗದ ಬಗ್ಗೆ

ಅವರಿಗೆ ಅಷ್ಟೇನೂ ಆದರ ಇರಲಿಲ್ಲ. ಇಲ್ಲಿನ ಹವಾಗುಣ ಒಂಟದಿದ್ದುದು ಅವರ ಅನಾದರಣಕ್ಕೆ ಮುಖ್ಯಕಾರಣವಲ್ಲ. ನಾನು ಒಮ್ಮೆ "ಇಂಗ್ಲೆಂಡ್ ಆಧುನಿಕ ಎಥೆನ್ಸ್" ಎಂದು ಹೇಳಿದೆ. ಅದಕ್ಕವರು ಸಿಟ್ಟಿಗೆದ್ದು "ಫ್ರಾನ್ಸ್ ಎಂದರೆ ಒಪ್ಪುತ್ತದೆ. ಇಂಗ್ಲೆಂಡ್ ಎಂದಿಗೂ ಅಲ್ಲ; ಇಂಗ್ಲೆಂಡ್ ಹೇಳಿಕೇಳಿ ವ್ಯಾಪಾರಕೇಂದ್ರ ...." ಎಂದು ಹೇಳಿದರು,

ಶ್ರೀ ಅರವಿಂದರು ಕೇಂಬ್ರಿಜ್‌ನಲ್ಲಿ ಇನ್ನೂ ವಿದ್ಯಾರ್ಥಿ ಆಗಿದ್ದಾಗಲೆ ಇಂಗ್ಲೀಷ್ ವಿದ್ವಾಂಸರೆಂದು ಆಗಲೇ ಪ್ರಸಿದ್ಧರಾಗಿದ್ದ ಆಸ್ಕರ್ ಬ್ರೌನಿಂಗ್ ಎಂಬುವವರು ಶ್ರೀ ಅರವಿಂದರ ಕಾವ್ಯ ಶಕ್ತಿಯನ್ನು ಮನವಾರೆ ಮೆಚ್ಚಿದ್ದರೆಂಬುದನ್ನು ಅವರೆ ತಮ್ಮ ತಂದೆಯವರಿಗೆ ತಾ. 2-12-1890 ರಂದು ಬರೆದ ಒಂದು ಪತ್ರದಿಂದ ಸ್ಪಷ್ಟ ವಾಗುತ್ತದೆ.

"ನಿನ್ನೆ ರಾತ್ರಿ ನನ್ನನ್ನು ಒಬ್ಬರು ಕಾಫಿ ಕುಡಿಯಲು ಕರೆದಿದ್ದರು. ಅವರ ಕೊಠಡಿಯಲ್ಲಿ ಆ ದೊಡ್ಡ ವಿದ್ವಾಂಸರಾದ ಓ. ಬಿ. (ಆಸ್ಕರ್ ಬ್ರೌನಿಂಗ್) ಅವರನ್ನು ಕಂಡೆ. ಅವರು ಕಿಂಗ್ಸ್ ಕಾಲೇಜಿನ ಸರ್ವೋತ್ತಮ ವ್ಯಕ್ತಿ. ಅವರು ನನಗೆ ಹೀಗೆ ಹೇಳಿದರು:

"............ನಾನು ಹದಿಮೂರು ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆ ಪರಿಶೀಲಿಸಿದ್ದೇನೆ. ನೀವು ಬರೆದಂಥ ಶ್ರೇಷ್ಠ ಪತ್ರಿಕೆಗಳನ್ನು ನಾನು ಎಂದೂ ನೋಡಿಲ್ಲ.......... ನಿಮ್ಮ ಪ್ರಬಂಧವೊ ! ಅದ್ಭುತ ವಾಗಿತ್ತು. ಈ ಪ್ರಬಂಧವು (ಷೇಕ್ಸ್‌ಪಿಯರ್ ಮತ್ತು ಮಿಲ್ಟನ್ —ಇವರನ್ನು ಹೋಲಿಸಿ ಬರೆದದ್ದು) ಭಾವಪೂರ್ಣವಾದ ಅನೇಕ ಶ್ರೀಮಂತ ಶಬ್ದಚಿತ್ರಗಳಿಂದ ತುಂಬಿತುಳುಕುತ್ತಿದೆ. ವಿರೋಧಾಲಂಕಾರಗಳು, ಚಮತ್ಕಾರಯುಕ್ತವಾದ ನಾಟುನುಡಿ ಗಳೂ ಹೇರಳವಾಗಿದ್ದುವು. ಅವು ನನ್ನ ಅಭಿಪ್ರಾಯಗಳನ್ನೆ

ಭಾವಗಳನ್ನೆ ಓತಪ್ರೋತವಾಗಿ ಪ್ರತಿಬಿಂಬಿಸುತ್ತವೆ. ನಾನು ಶ್ರೇಷ್ಠ ಕೆಲಸ ಮಾಡಿದೆನೆಂದು ನನಗನಿಸುತ್ತದೆ. ...."

ಶ್ರೀ ಅರವಿಂದರು ಆ ಹದಿನೆಂಟು ವರ್ಷದ ಚಿಕ್ಕ ವಯಸ್ಸಿಗೇನೆ ಅಂದಿನ ಆಂಗ್ಲ ಸಾಹಿತ್ಯ ಪ್ರಪಂಚದ ಪ್ರಚಂಡ ಪಂಡಿತರ ಮೆಚ್ಚುಗೆ ಪಡೆದಿದ್ದರೆಂಬುದೆ ಈ ಮೇಲಿನ ಪತ್ರಗಳಿಂದ ಸ್ಪಷ್ಟವಾಗುತ್ತದೆ. ಆ ಚಿಕ್ಕ ವಯಸ್ಸಿಗೇ ಅಂಥ ಅನ್ಯಾದೃಶ ಅಗಾಧ ಸಾಹಿತ್ಯ ಶಕ್ತಿ ಬರಬೇಕಾದರೆ ಅವರ ಅಗಾಧವಾದ ಪ್ರತಿಭೆ ತೀಕ್ಷ್ಣಮತಿಯ ಫಲವೆಂದೇ ಹೇಳಬೇಕು. ಭಾರತೀಯ ಕಾವ್ಯಮೀಮಾಂಸಕರ ದೃಷ್ಟಿಯಲ್ಲಿ ಅದು ಸರಸ್ವತಿಯ ಕೃಪಾಕಟಾಕ್ಷದ ಫಲವೆ ಸರಿ.

ಕೇಂಬ್ರಿಜ್‌ನಲ್ಲಿದ್ದಾಗಲೆ ಅವರು ಸಂಸ್ಕೃತವನ್ನು ಕಲಿಯಲು ಪ್ರಾರಂಭಿಸಿದರು. ಆಗಲೆ ಅಲ್ಪಸ್ವಲ್ಪ ಬೆಂಗಾಲಿಯ ಪರಿಚಯ ವನ್ನೂ ಪ್ರಪ್ರಥಮವಾಗಿ ಮಾಡಿಕೊಂಡರು. ಮಿ. ಟವರ್ಸ್ ಎಂಬ ಆಂಗ್ಲ ಅಧ್ಯಾಪಕರು ಅವರಿಗೆ ಬಂಗಾಲಿ ಭಾಷೆಯನ್ನು ಹೇಳಿಕೊಡುತ್ತಿದ್ದರು. ಮಿ. ಟವರ್ಸ್ ಅವರ ಬಂಗಾಲೀ ಭಾಷಾ ಪಾಂಡಿತ್ಯವೆಂದರೆ ಈಶ್ವರ ಚಂದ್ರ ವಿದ್ಯಾಸಾಗರರು ಬರೆದ ಕೆಲವು ಬಂಗಾಲಿ ಕೃತಿಗಳ ಪರಿಚಯ ಮಾತ್ರ. ಹೆಚ್ಚೆಂದರೆ ಸಂಸ್ಕೃತ ಭೂಯಿಷ್ಠವಾದ ಗೌಡಿಶೈಲಿ! ಇಂಥ ಪಂಡಿತರಲ್ಲಿ ಶ್ರೀ ಅರವಿಂದರ ಶಿಕ್ಷಣ. ಒಮ್ಮೆ ಶ್ರೀ ಅರವಿಂದರು ಬಂಕಿಮ ಚಂದ್ರರ ಕೆಲವು ಕಾದಂಬರಿಗಳನ್ನು ಮಿ. ಟವರ್ಸ್ ಅವರಿಗೆ ತೋರಿಸಿದರಂತೆ. ಅವುಗಳ ಹಾಳೆಯನ್ನು ತಿರುವಿ ಹಾಕಿ ಶ್ರೀ ಅರವಿಂದರ ಕಡೆ ಗಂಭೀರವಾಗಿ ದೃಷ್ಟಿ ಬೀರಿ: "ಅದರೆ ಇದು ಬಂಗಾಲೀ ಭಾಷೆ ಅಲ್ಲವಲ್ಲ" ಎಂದು ಹೇಳಿಬಿಟ್ಟರಂತೆ!

೪ ದೇಶಮುಕ್ತಿ ಮಂತ್ರದೀಕ್ಷೆ

ಶ್ರೀ ಅರವಿಂದರನ್ನು ಭಾರತದಿಂದ ಕರೆತಂದು ಇಂಗ್ಲೆಂಡಿನಲ್ಲಿ ಬಿಟ್ಟಿದ್ದರ ಮುಖ್ಯ ಉದ್ದೇಶ ಅವರನ್ನು ಐ.ಸಿ.ಎಸ್ ದೊರೆಯನ್ನಾಗಿ ಮಾಡಬೇಕೆಂಬುದು. ಡಾ. ಕೃಷ್ಣಧನ ಘೋಷರ ದೃಷ್ಟಿಯಲ್ಲಿ ಮನುಷ್ಯಜೀವನದ ಸಿದ್ಧಿ. ಸಾರ್ಥಕತೆ ಆ ಪದವಿಯನ್ನು ಅಲಂಕರಿಸುವುದರಲ್ಲಿ ಇತ್ತು! ಶ್ರೀ ಅರವಿಂದರ ಪ್ರತಿಭೆ. ವಿದ್ವತ್ತು, ಜಾಣ್ಮೆ ಎಲ್ಲವೂ ತಮ್ಮ ತಂದೆಯವರ ಜೀವನದ ಇಷ್ಟಾರ್ಥ ಸಿದ್ಧಿಗೆ ಅನುಗುಣವಾಗಿಯೆ ಇತ್ತು. ಹಾಗೆ ಅವರು ಲಂಡನ್ನಿನಲ್ಲಿ ಇದ್ದಾಗಲೆ ಐ ಸಿ.ಎಸ್ ಪ್ರವೇಶ ಪರೀಕ್ಷೆಯಲ್ಲಿ ಶ್ರೇಷ್ಠ ಮಟ್ಟದಲ್ಲೇ ತೇರ್ಗಡೆ ಹೊಂದಿದರು. ಆ ತರುವಾಯ ಕೇಂಬ್ರಿಜಿನಲ್ಲಿ ಐ.ಸಿ.ಎಸ್, ಬರಹದ ಪರೀಕ್ಷೆಗಳಲ್ಲೂ ಅರ್ಹತೆ ಪಡೆದುಕೊಂಡರು. ಆದರೂ ಅವರು ಐ.ಸಿ.ಎಸ್ ಅಧಿಕಾರಿಯಾಗಲೇ ಇಲ್ಲ. ಡಾ. ಕೃಷ್ಣಧನ ಘೋಷರ ಆಸೆ ಈಡೇರಲೆ ಇಲ್ಲ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಏಕೆ? ಹೇಗೆ?

ಆಗಿನ ಕಾಲದಲ್ಲಿ ಐ.ಸಿ.ಎಸ್. ಪರೀಕ್ಷೆಯ ಲಿಖಿತ ಭಾಗಗಳಲ್ಲಿ ಉತ್ತೀರ್ಣರಾದರೂ ಕುದುರೆ ಸವಾರಿಯ ವಿದ್ಯೆಯನ್ನೂ ಕಲಿಯಬೇಕಾಗಿತ್ತು. ಲಿಖಿತ ಪರೀಕ್ಷೆಗಳಲ್ಲಿ ಪಾಸಾಗಿದ್ದ ಶ್ರೀ ಅರವಿಂದರು ಕುದುರೆ ಸವಾರಿ ಮಾಡಲು 'ವೂಲ್‌ವಿಚ್' ಎಂಬ ಪ್ರದೇಶದಲ್ಲಿ ಕುದುರೆ ಸವಾರಿ ಪರೀಕ್ಷೆಯನ್ನು ಏರ್ಪಡಿಸಿ ಅವರು ಅಲ್ಲಿಗೆ ಇಂಥ ದಿನ ಇಂಥಾ ಸಮಯಕ್ಕೆ ಹಾಜರಾಗಬೇಕೆಂದು ತಿಳಿಸಿದರು. ಶ್ರೀ ಅರವಿಂದರು ಆ ಸಮಯಕ್ಕೆ ಹೋಗಲೆ ಇಲ್ಲ. ಯಾವುದೋ ಅನಿವಾರ್ಯ ಕಾರಣದಿಂದ ಬಂದಿರಲಿಕ್ಕಿಲ್ಲ ಎಂದು

ಇನ್ನೊಂದು ಅವಕಾಶವನ್ನು ಕೊಟ್ಟಿತು. ಆ ಸಾರಿಯೂ ಪರೀಕ್ಷೆಗೆ ಹಾಜರಾಗಲೇ ಇಲ್ಲ! ಆಗಲೂ ಅಧಿಕಾರಿಗಳು, ಇನ್ನೊಂದು ಅವಕಾಶವನ್ನು ಕೊಟ್ಟು ನೋಡೋಣವೆಂದು ತೀರ್ಮಾನಿಸಿದರು. ಆ ಮೂರನೆಯ ಸಾರಿಯೂ ಶ್ರೀ ಅರವಿಂದರು ಈ ಸಾಂಪ್ರದಾಯಿಕ, ಕೇವಲ ನೆಪಮಾತ್ರದ ಪರೀಕ್ಷೆಗೆ ಹಾಜರಾಗಲೇ ಇಲ್ಲ!! ನಾಲ್ಕನೆಯ ಬಾರಿಯೂ ಅವಕಾಶ ಕೊಟ್ಟರೆಂದು ಇಂದಿಗೂ ಇಂಡಿಯಾ ಆಫೀಸ್ ಹಳೆಯ ದಾಖಲೆಗಳಲ್ಲಿ ಆಧಾರ ಸಿಕ್ಕುತ್ತದೆ. ಆ ಸಾರಿಯೂ ಹಾಜರಾಗಲಿಲ್ಲ! ಈ ಸಂದರ್ಭವನ್ನು ಕುರಿತು ಅವರೇ ಹೀಗೆ ಹೇಳುತ್ತಾರೆ:

"ಅಂದು ಅವರಿಗೆ ಇನ್ನೇನೂ ಕೆಲಸವಿರಲಿಲ್ಲ. ಆ ಕೆಲಸದ ಮೇಲಿಂದ ಅವರು ಕುದುರೆ ಪರೀಕ್ಷೆಗೆ ಹಾಜರಾಗಲಿಲ್ಲವೆಂದಲ್ಲ. ಐ.ಸಿ.ಎಸ್. ಕೆಲಸದ ಬಗೆಗೆ ಅವರಿಗೆ ಇಷ್ಟವಿರಲಿಲ್ಲ. ಆ ಬಂಧನದಿಂದ ಹೇಗಾದರೂ ಬಿಡುಗಡೆಹೊಂದಬೇಕೆಂದು ಈ ಹೊಂಚು ಹಾಕಿದರು. ಅವರೇ ಆ ಹುದ್ದೆಯನ್ನು ತಿರಸ್ಕರಿಸದೆ ಕುದುರೆ ಹತ್ತಲು ಬರುವುದಿಲ್ಲವೆಂದು (ಸಿವಿಲ್ ಸರ್ವೀಸ್ ಕಮಿಷನ್) ತಿರಸ್ಕರಿಸುವಂತೆ ನಾಟಕ ಮಾಡಿದರು."[1]

ಅಂತೂ ಕುತ್ತಿಗೆಗೆ ಸುತ್ತಿಕೊಳ್ಳಲಿದ್ದ ಐ.ಸಿ.ಎಸ್. ಅಧಿಕಾರದ ಉರುಳಿನಿಂದ ಶ್ರೀ ಅರವಿಂದರು ತಪ್ಪಿಸಿಕೊಂಡರು!

ಆದರೆ, ಅವರ ಹಿತೈಷಿಗಳಿಗೆ ಇದರಿಂದ ಅಪಾರ ನಿರಾಸೆಯಾಯಿತು. ಆದ್ದರಿಂದ ಅವರು ಶ್ರೀ ಅರವಿಂದರ ಪರವಾಗಿ,

---

1 'ಅವರು' 'ಅವರ' ಎಂದು ಇಲ್ಲಿ ಅರವಿಂದರೇ ಏಕೆ ಹೇಳಿದಾರೆಂದರೆ, ಬೇರೆಯವರು ಬರೆದ ಅವರ ಜೀವನಚರಿತ್ರೆಯನ್ನು ತಿದ್ದುವಾಗ ಅವರು ಈ ರೀತಿ ಆ ಜೀವನ ಚರಿತ್ರಕಾರರೇ ಬರೆದಂತೆ ಉತ್ತಮ ಪುರುಷ ಬಹುವಚನ ಉಪಯೋಗಿಸಿದ್ದಾರೆ.

ಕುದುರೆ ಸವಾರಿ ಪರೀಕ್ಷೆ ಇಲ್ಲದೆಯೆ ಅವರನ್ನು ಐ.ಸಿ.ಎಸ್. ಅಧಿಕಾರಕ್ಕೆ ಅರ್ಹರನ್ನಾಗಿ ಮಾಡಬೇಕೆಂದು ಬಹು ಪ್ರಯತ್ನ ಮಾಡಿದರು. ಅಂಥವರ ಪೈಕಿ ಈ ಮೊದಲೆ ಹೆಸರಿಸಿದ ಮಿ.ಜಿ.ಎಂ. ಪ್ರೊಥೇರೊ ಎಂಬುವವರೂ ಮಿ. ಜೇಮ್ಸ್ ಎಸ್. ಕಾಟನ್ ಎಂಬುವವರೂ ಪ್ರಮುಖರು. ಮಿ. ಜಿ. ಎಂ. ಪ್ರೊಥೇರೊ ಅವರು ಸಿವಿಲ್ ಸರ್ವಿಸ್ ಕಮಿಷನ್ನಿಗೆ ಬರೆದ ಪತ್ರದಲ್ಲಿ:

"ಇಂಥ ಅಸಾಧಾರಣ ಸಾಮರ್ಥ್ಯದ ವ್ಯಕ್ತಿಗೆ ಕೇವಲ ಕುದುರೆ ಹತ್ತಲು ಬರುವುದಿಲ್ಲ ಎಂಬ ಕಾರಣದಿಂದಲೊ, ನಿಯಮಿತ ವೇಳೆಗೆ ಹಾಜರಾಗಲಿಲ್ಲ ಎಂಬ ಕಾರಣದಿಂದಲೊ ಇಂಡಿಯಾ ಸರ್ಕಾರದ ಸೇವೆಗೆ ನ-ಲಾಯಕ್ ಎಂದು ಭಾವಿಸುವುದು ಅಧಿಕಾರಿಗಳ ಸಂಕುಚಿತ ದೃಷ್ಟಿಯೆಂದೇ ನನಗೆ ತೋರುತ್ತದೆ. ಅದನ್ನು ಮೀರಿಸುವಂಥ ಸಂಕುಚಿತ ಮತ್ತೊಂದಿರಲಾರದು..... ಹಾಗೂ ಕುದುರೆ ಸವಾರಿಯನ್ನು ಕಲಿಯಲು ಬೇಕಾದ ಹಣದ ಅಡಚಣೆ ಇದ್ದಿರಬಹುದು. ಹಾಗೆಯೆ 'ವೂಲ್‌ವಿಚ್' ಗೆ ಸಮಯಕ್ಕೆ ಸರಿಯಾಗಿ ಬಾರದಿರಲು ಅವರಲ್ಲಿ ಪ್ರಯಾಣದ ಖರ್ಚಿಗೆ ಸಾಕಷ್ಟು ಹಣವಿಲ್ಲದ ಕಾರಣವೆಂದು ನಾನು ನಂಬುತ್ತೇನೆ',

—ಎಂಬುದಾಗಿ ತುಂಬ ಕಳಕಳಿಯಿಂದ ಶ್ರೀ ಅರವಿಂದರ ಪರ ವಾದಿಸಿದರು. ಇದರಂತೆಯೆ ಭಾರತೀಯ ಕಾಂಗ್ರೆಸ್ಸಿನ ಸ್ಥಾಪಕ ರಾದ ಸರ್ ಹೆನ್ರಿ ಕಾಟನ್‌ರವರ ಮಕ್ಕಳಾದ ಜೇಮ್ಸ್ ಎಸ್.ಕಾಟನ್ ಅವರು ಕೂಡ ಶ್ರೀ ಅರವಿಂದರ ಪರವಾಗಿ ಶತಪ್ರಯತ್ನ ಮಾಡಿದರು. ಎಷ್ಟೊ ಸಾರಿ ಇಂಗ್ಲೆಂಡಿನಲ್ಲಿ ಸವಾರೀ ಪರೀಕ್ಷೆ ಯಲ್ಲಿ ತೇರ್ಗಡೆಯಾಗದವರಿಗೆ ವಿನಾಯಿತಿ ಕೊಟ್ಟಿದ್ದ ಉದಾಹರಣೆ ಗಳಿದ್ದುವು. ಅಂತೆಯೆ ಭಾರತಕ್ಕೆ ಬಂದು ನೌಕರೀ ಸೇರಿಕೊಂಡ

ಮೇಲೆ ಇಂತಿಷ್ಟು ವರ್ಷಗಳಲ್ಲಿ ಆ ಪರೀಕ್ಷೆಯಲ್ಲಿ ಪಾಸಾಗುವ ಸೌಲಭ್ಯ, ಅನುಕೂಲತೆ ಕೊಟ್ಟಿದ್ದರು. ಅಷ್ಟಾದರೂ ಅವಕಾಶ ಕೊಡಬೇಕೆಂದು ಜೇಮ್ಸ್ ಎಸ್. ಕಾಟನ್ ಬಹಳ ಕಳಕಳಿಯಿಂದ ಪ್ರಾರ್ಥಿಸಿದರು; ಮಾದಿಸಿದರು. ಆದರೆ ಸಿವಿಲ್ ಸರ್ವೀಸ್ ಕಮಿಷನ್ ತಮ್ಮ ನಿರ್ಧಾರವನ್ನು ಬದಲಿಸಲಿಲ್ಲ.

ಕೊನೆಗೆ, ಅಧಿಕಾರಿಗಳ ಮನಸ್ಸು ಕರಗುವಂತೆ ಮಾಡಲು ಜೇಮ್ಸ್ ಎಸ್. ಕಾಟನ್ ಮತ್ತು ವಿನಯ ಭೂಷಣ ಇಬ್ಬರೂ ಶ್ರೀ ಅರವಿಂದರನ್ನು ಒತ್ತಾಯಮಾಡಿ ಸಿವಿಲ್ ಸರ್ವೀಸ್ ಕಮೀಷನ್‌ಗೆ ಲಿಖಿತಮನವಿ ಮಾಡಿಕೊಳ್ಳುವಂತೆ ಮಾಡಿದರು. ಅಣ್ಣ ಮತ್ತು ಆಪ್ತರ ಒತ್ತಾಯಕ್ಕೆ ಕಟ್ಟು ಬಿದ್ದು ಒಂದು ಮನವಿ ಅರ್ಪಿಸಿ ಕುದುರೆಸವಾರಿಯ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ಅನ್ವಯಿಸಬಾರದೆಂಬುದಾಗಿ ವಿನಂತಿಸಿದರು. ಅದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ, ಇಂಡಿಯನ್ ಪಾರ್ಲಿ ಮೆಂಟರಿ ಅಂಡರ್ ಸೆಕ್ರೆಟರಿ ಆಗಿದ್ದ ಜಿ. ಡಬ್ಲ್ಯು. ರಸಲ್ ಎಂಬ ಮಹಾಶಯರೂ ಸರ್ವಿಸ್ ಕಮೀಷನ್ ಮುಖ್ಯಾಧಿಕಾರಿ ಮಿ. ಕಿಂಬರ್‌ಲೀ ಅವರಿಗೆ ಮನವಿ ಮಾಡಿಕೊಂಡರು. ಅವರಿಗೆ ಮಿ. ಕಿಂಬರ್‌ಲೀ ಉತ್ತರ ಬರೆಯುತ್ತಾ:

"ಇದಕ್ಕೆ ನೇರವಾಗಿ ಸಂಬಂಧವಿಲ್ಲದಿದ್ದರೂ, ಒಂದು ಮಾತು ಸೇರಿಸಬಯಸುತ್ತೇನೆ. ಮಿ. ಘೋಷರು ನಮ್ಮ ಸರ್ಕಾರದ ಸೇವಾವೃತ್ತಿಗೆ ಅಪೇಕ್ಷಣೀಯವಾದ ವ್ಯಕ್ತಿಯೇ ಎಂಬ ಬಗ್ಗೆ ನನಗೆ ತುಂಬಾ ಸಂಶಯವಿದೆ."

ಆ ಸಂಶಯಕ್ಕೆ ಆಧಾರವೇನು? ಕಾರಣವೇನು? ಈ ಪ್ರಶ್ನೆಗಳಿಗೆ ಕೊಡುವ ಉತ್ತರದಲ್ಲಿ ಅಡಗಿದೆ ಶ್ರೀ ಅರವಿಂದರ

ಕೇಂಬ್ರಿಜ್ ಜೀವನದ ಒಳಗುಟ್ಟು; ಮತ್ತು ಅವರ ಭಾವೀ ಕ್ರಾಂತಿಕಾರೀ ಜೀವನದ ಕೀಲಿಕೈ!

ಬ್ರಿಟಿಷ್ ಸರ್ಕಾರದ ಮನಸ್ಸಿಗೆ ಭಯಮಿಶ್ರಿತ ಸಂಶಯ ಉಂಟಾಗುವ ಯಾವ ಕೆಲಸವನ್ನು ಶ್ರೀ ಅರವಿಂದರು ಮಾಡಿದರು? ಅವರು ಬ್ರಿಟಿಷ್ ಸರ್ಕಾರದ ಸೇವಾವೃತ್ತಿಗೆ ಅನರ್ಹರಾಗುವಂಥ ಯಾವ 'ಅಕೃತ್ಯ' ವನ್ನು ಮಾಡಿದರು?

ಆ ಅಕೃತ್ಯ ಶ್ರೀ ಅರವಿಂದರು ಇಂಡಿಯನ್ ಮಜಲಿಸ್ ಎಂಬ ಸಂಸ್ಥೆಯ ಚಟುವಟಿಕೆಗಳಲ್ಲಿ ವಿಶೇಷವಾಗಿ ಭಾಗವಹಿಸು ತ್ತಿದ್ದುದೂ, ಅವರು "ಕಮಲ ಮತ್ತು ಕಠಾರಿ" ಎಂಬ ಗುಪ್ತ ರಾಜಕೀಯ ಸಂಸ್ಥೆಯ ಸಂಸ್ಥಾಪಕರಾಗಿದ್ದುದೂ ಆಗಿತ್ತೆಂಬುದರಲ್ಲಿ ಒಂದಿಷ್ಟೂ ಸಂಶಯವಿಲ್ಲ. ಇಂಡಿಯನ್ ಮಜಲಿಸ್ ಎಂಬುದು ಕೇಂಬ್ರಿಜ್‌ನಲ್ಲಿದ್ದ ಭಾರತೀಯ ವಿದ್ಯಾರ್ಥಿಗಳ ಒಂದು ಸಂಘ. ಅದರ ಸದಸ್ಯರು ಸಹಜವಾಗಿಯೆ ಅಂದಿನ ರಾಜಕೀಯ ಸಮಸ್ಯೆ ಗಳನ್ನು ಕುರಿತು ಚರ್ಚಿಸಿ. ಭಾರತೀಯ ಯುವಕರಲ್ಲಿ ದೇಶಪ್ರೇಮ ವನ್ನು ಹುಟ್ಟಿಸುವುದೇ ಮುಖ್ಯಗುರಿಯಾಗಿತ್ತು. ಹಾಗೂ ಇಂಗ್ಲೆಂಡಿನಲ್ಲಿ ಭಾರತದ ಸಮಸ್ಯೆಗಳ ಬಗ್ಗೆ ಸಹಾನುಭೂತಿ ಸಹಾ ಯವನ್ನು ಪಡೆಯುವುದೇ ಆಗಿತ್ತು. ಈ ಚಟುವಟಿಕೆಗಳಲ್ಲಿ 19–20 ವರ್ಷ ಪ್ರಾಯದ ಶ್ರೀ ಅರವಿಂದರು ಅತ್ಯಂತ ಆಳವಾದ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಬಹಿರಂಗ ಸಭೆಗಳಲ್ಲಿ ಅವರು ಉಗ್ರಕ್ರಾಂತಿಕಾರೀ ಪಂಥಕ್ಕೆ ಸೇರಿದವರೆಂಬುದು ಅವರ ಮಾತಿನಿಂದ. ಭಾಷಣಗಳಿಂದ. ಬರಹಗಳಿಂದ ಎಲ್ಲರಿಗೂ ತಿಳಿದಿತ್ತು. ಅಂದಮೇಲೆ ಅದು ಬ್ರಿಟಿಷ್ ಸರ್ಕಾರದ ಗಮನಕ್ಕೆ ಬಂದಿರುವುದರಲ್ಲಿ ಆಶ್ಚರ್ಯವೇನಿದೆ?

ಇದಕ್ಕಿಂತಲೂ ಅಪಾಯಕಾರಿಯಾದ 'ಅಕೃತ್ಯ' ವೆಂದರೆ ಶ್ರೀ

ಅರವಿಂದರು 'ಕಮಲ ಮತ್ತು ಕಠಾರಿ' ಎಂಬ ಗುಪ್ತ ರಾಜಕೀಯ ಕ್ರಾಂತಿಕಾರೀ ಸಂಸ್ಥೆಯನ್ನು ಕಟ್ಟಿದ್ದರೆಂಬುದೆ ಆಗಿತ್ತು! ಆ ಸಂಸ್ಥೆಯ ಹೆಸರೆ ಸೂಚಿಸುವಂತೆ ಮೇಲ್ಮೇಲೆ ನೋಡುವುದಕ್ಕೆ ಅದೊಂದು ಕಮಲದಷ್ಟು ಕೋಮಲ ಮತ್ತು ಮನೋಹರವಿರುವವರ ಸಂಸ್ಥೆ. ಆದರೆ ಅಂತರಂಗದಲ್ಲಿ ಅವರ ಕಾರ್ಯಕ್ರಮಗಳೆಲ್ಲ ಬಾಂಬುಗಳನ್ನು ತಯಾರಿಸುವುದು. ಮದ್ದುಗುಂಡುಗಳನ್ನು ಸಂಗ್ರಹಿಸುವುದು. ಸೈನ್ಯ ಶಿಕ್ಷಣ ಪಡೆಯುವುದು. ಶಸ್ತ್ರಾಸ್ತ್ರಗಳ ಪ್ರಯೋಗವನ್ನು ಕಲಿಯುವುದು ... ...ಇತ್ಯಾದಿ ಭೀಕರ ಪ್ರಯತ್ನದೆ ಅವರದಾಗಿತ್ತು. ಶ್ರೀ ಅರವಿಂದರು ಬಹಿರಂಗವಾಗಿ ಇಂಡಿಯನ್ ಮಜಲಿಸ್ ಸಭೆಗಳ ವೇದಿಕೆಯ ಮೇಲೆ ಉಗ್ರವಾಗಿ ರಾಜಕೀಯ ಚಳುವಳಿಯನ್ನು ಪ್ರತಿಪಾದಿಸುವುದು ಮಾತ್ರವಲ್ಲದೆ. ಬಹಿರಂಗವಾಗಿ ಬಾಯಲ್ಲಿ ಆಡಿದ ಮಾತುಗಳನ್ನು ಕಾರ್ಯಗತಗೊಳಿಸಲು ಅಂತರಂಗವಾಗಿ 'ಕಮಲ ಮತ್ತು ಕಠಾರಿ'ಯ ಮೂಲಕವಾಗಿ ಪ್ರಯತ್ನಿಸುತ್ತಿದ್ದರು. ಅವರ ಈ ರಹಸ್ಯ ಚಟುವಟಿಕೆಗಳೂ ಕೂಡ ಬ್ರಿಟಿಷ್ ಸರ್ಕಾರದ ಕಣ್ಣಿಗೂ ಕಿವಿಗೂ ಬಿದ್ದಿದ್ದವು. ಸಶಸ್ತ್ರ ರಕ್ತ ಕ್ರಾಂತಿ ಇಲ್ಲದೆ ಭರತಖಂಡಕ್ಕೆ ಸ್ವಾತಂತ್ರ್ಯ ಲಭಿಸುವುದಿಲ್ಲ ಎಂದು ದೃಢವಾಗಿ ನಂಬಿ. ಪ್ರತಿಪಾದಿಸುತ್ತಿದ್ದ. ಅದರಂತೆ ಮಾಡಲು ರಹಸ್ಯವಾಗಿ ಅಣಿಮಾಡಿಕೊಳ್ಳುತ್ತಿದ್ದ ಶ್ರೀ ಅರವಿಂದರನ್ನು ಗುಮಾನಿಯಿಂದ ನೋಡುವುದಕ್ಕೆ ಪ್ರಬಲ ಕಾರಣಗಳಿದ್ದುವು. ಅದನ್ನು ಅಷ್ಟು ಸ್ಪಷ್ಟ ಮಾತುಗಳಲ್ಲಿ ಹೇಳಿರುವವರೆ ಮಿ. ಕಿಂಬರ್‌ಲೀ. ಮುಂಚೆ ಆಗಿ ಮೇಲೆ ಹೇಳಿದಂತೆ ಮಿ. ರಸಲ್ ಅವರಿಗೆ ತಿಳಿಸಿದರು. ಅಂದರೆ. ಶ್ರೀ ಅರವಿಂದರು ಬ್ರಿಟಿಷ್ ಸರ್ಕಾರದ ಸೇವೆಗೆ ಸರ್ವಥಾ ಅನರ್ಹರಾಗಿದ್ದರು. ಬ್ರಿಟಿಷ್ ಸರ್ಕಾರದ ದೃಷ್ಟಿಯಲ್ಲಿ.

ಶ್ರೀ ಅರವಿಂದರಿಗೆ ಭಾರತೀಯ ಸ್ವಾತಂತ್ರ್ಯದ ಹುಚ್ಚು ಹಿಡಿಯಲು ಕಾರಣವೇನು? ಯಾವ ಡಾ. ಕೃಷ್ಣಧನ ಘೋಷರು ತಮ್ಮ ಪ್ರತಿಭಾವಂತ ಮಗ ಐ.ಸಿ.ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಜಿಲ್ಲೆಯ ಕಲೆಕ್ಟರ್ ಆಗಬೇಕೆಂದು ಬಯಸಿದ್ದರೊ ಅವರೇ ಶ್ರೀ ಅರವಿಂದರ ದೃಷ್ಟಿ ದೇಶ ಸ್ವಾತಂತ್ರ್ಯದ ಕಡೆಗೆ ಹೊರಳುವಂತೆ ಮಾಡಿದರು. ಇದು ವಿಚಿತ್ರವಾಗಿ ತೋರುತ್ತದೆ. ಆದರೆ ನಿಜ, ವಿಧಿಯ ವೈಪರೀತ್ಯ.

ಆಗ, ನೂರು ವರ್ಷಗಳ ಕೆಳಗೆ ನಾವು ಬ್ರಿಟಿಷ್ ಸಾಮ್ರಾಜ್ಯದ ದಾಸ್ಯದಲ್ಲಿದ್ದಾಗ ನಮ್ಮ ಬಾಳು ನಾಯಿ ಬಾಳಿಗಿಂತಲೂ ಕೀಳಾಗಿತ್ತು. ಕ್ಷಾಮಡಾಮರಗಳಿಂದ ಲಕ್ಷೋಪಲಕ್ಷ ಪ್ರಜೆಗಳು ಹೊಟ್ಟೆಗಿಲ್ಲದೆ ಬಿದ್ದು ಸಾಯುತ್ತಿದ್ದರು! ! ಆ ಸಾವಿಗೆ ತುತ್ತಾಗದೆ ಉಳಿದ ಪುಣ್ಯವಂತರು ಬ್ರಿಟಿಷ ನೌಕರರ ದಬ್ಬಾಳಿಕೆ. ದೌರ್ಜನ್ಯ. ಅಪಮಾನಕರವಾದ ನಡವಳಿಕೆಯ ಅಲಗಿನ ಬಾಯಿಗೆ ಸಿಕ್ಕು ಬದುಕಿದ್ದರೂ ಸತ್ತಂತೆಯೇ ಇದ್ದರು. ಅಥವಾ ಅದಕ್ಕಿಂತಲೂ ಕಡೆಯಾಗಿ ಜೀವಂತ ಹೆಣದಂತೆ ಹೀನ ಮೃಗಪಶುಗಳಂತೆ ನಿರ್ಲಜ್ಜ ಬಾಳು ಜೀವಿಸುತ್ತಿದ್ದರು. ಬ್ರಿಟಿಷ ಅಧಿಕಾರಿಗಳ ಕೈಯಿಂದ ಅವಮಾನಿತರಾದವರು ಬಡವರಲ್ಲ: ಭಿಕಾರಿಗಳಲ್ಲ: ಹೈಕೋರ್ಟ್‌ನ್ಯಾಯಮೂರ್ತಿಗಳಿರಲಿ. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿರಲಿ. ರಾಜಮಹಾರಾಜರಿರಲಿ. ದೊಡ್ಡ ಜಮೀನ್ದಾರರಿರಲಿ—ಅವರು ಯಾರೇ ಇರಲಿ—ಬಿಳಿದೊರೆಯಿಂದ ತಿರಸ್ಕಾರ ಅಪಮಾನಗಳನ್ನು ಅನುಭವಿಸಲೇ ಬೇಕು. ಅಂತಹ ಸುದ್ದಿಗಳು ಅಂದಿನ ಪತ್ರಿಕೆಗಳಲ್ಲಿ ಆಗೊಂದು ಈಗೊಂದು ತುಣುಕು ಸುದ್ದಿಗಳು ಅಚ್ಚುತಪ್ಪಿ ಕಾಣಿಸಿಕೊಳ್ಳುತ್ತಿದ್ದವು. ಅಂಥ ಒಂದು ತುಣುಕು ಸುದ್ದಿ "ಬೆಂಗಾಲಿ" ಎಂಬ ಒಂದು ಪತ್ರಿಕೆಯಲ್ಲಿ ಬಂದಿತ್ತು.

ಆ ಸುದ್ದಿಯನ್ನು ಕತ್ತರಿಸಿ ಡಾ. ಕೃಷ್ಣಧನ ಘೋಷರು ಶ್ರೀ ಅರವಿಂದರಿಗೆ ಕಳಿಸಿಕೊಟ್ಟರು. ಆ ಸುದ್ದಿಯನ್ನು ಓದಿದ ಶ್ರೀ ಅರವಿಂದರಿಗೆ ಮೈವುರಿದು ಹೋಗಿರಬೇಕು. ಅಂಥವೆ ಸುದ್ದಿಗಳನ್ನು ಅವರು ಹುಡುಕಿ ಹುಡುಕಿ ಓದಿಕೊಂಡಿರಬೇಕು. ಇದರಿಂದಾಗಿ. ಅವರು ಭಾರತದೇಶದ ಈ ದುಃಸ್ಥಿತಿಯ ಕಡೆಗೆ ಗಮನ ಹರಿಸಿದರು. ಅದರ ನಿವಾರಣೆ ಹೇಗೆಂಬುದನ್ನು ಕುರಿತು ಚಿಂತಿಸತೊಡಗಿದರು. ಹೀಗೆ ಶ್ರೀ ಅರವಿಂದರಿಗೆ ದೇಶಭಕ್ತಿ ಬಂಧಮುಕ್ತಿ ಮಂತ್ರದ ದೀಕ್ಷೆ ಉಂಟಾಯಿತು.

ಹಾಗಾದರೆ ಈ ದಾಸ್ಯದಿಂದ ಬಿಡುಗಡೆ ಹೊಂದುವ ಮಾರ್ಗ ಯಾವುದು?

ಫ್ರಾನ್ಸ್. ಅಮೆರಿಕ. ಇಟಲಿ ದೇಶಗಳ ಇತಿಹಾಸವನ್ನು ಚೆನ್ನಾಗಿ ತಿಳಿದಿದ್ದ ಅವರಿಗೆ ಭಾರತದ ವಿಮೋಚನೆಯ ಮಾರ್ಗ ಯಾವುದೆಂಬುದನ್ನು ತಿಳಿಯಲು ತಡವಾಗಲಿಲ್ಲ. ಸಶಸ್ತ್ರ ಬಂಡಾಯವೆ ದಾಸ್ಯ ವಿಮೋಚನೆಯ ಏಕಮೇವ ಮಾರ್ಗ ಎಂಬ ಬಗ್ಗೆ ಅವರಿಗೆ ಒಂದಿಷ್ಟು ಸಂಶಯ ಉಳಿಯಲಿಲ್ಲ. ಈ ಅವರ ನಂಬುಗೆ ದೃಢವಾಗುವಂತೆ ಅವರ ಕಣ್ಣೆದುರಿನಲ್ಲಿ ಐರಿಷ್ ಸ್ವಾತಂತ್ರ್ಯ ಸಂಗ್ರಾಮದ ಬೇಗೆ ಧಗಧಗ ಹತ್ತಿ ಉರಿಯುತ್ತಿತ್ತು. ಆದ್ದರಿಂದ ಶ್ರೀ ಅರವಿಂದರು ತಮ್ಮ ಮುಂದಿನ ಮಾರ್ಗವನ್ನು ಆರಿಸಿಕೊಳ್ಳುವದರಲ್ಲಿ ಯಾವ ಹೊಯ್ದಾಟವೂ ಇರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯವನ್ನು ಬುಡಮೇಲು ಮಾಡುವುದೆ ಭಾರತ ದೇಶದ ಕಲ್ಯಾಣಮಾರ್ಗ. ಅದನ್ನು ಸಾಧಿಸಬೇಕಾದರೆ ನೌಕರಿಯ ದಾಸ್ಯ ಇರಕೂಡದು. ಅದ್ದರಿಂದಲೆ ಐ.ಸಿ.ಎಸ್. ನೌಕರಿಯನ್ನು ಬೇಕಾಗಿಯೇ ತಿರಸ್ಕರಿಸಿದರು.

೫ ಗುರು-ಸಾರಸ್ವತಯೋಗಿ

1892 ಸೆಪ್ಟೆಂಬರ್ ಹೊತ್ತಿಗೆ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಶಿಕ್ಷಣ ಮುಗಿಯಿತು. ನವೆಂಬರ್ ಡಿಸೆಂಬರ್ ಹೊತ್ತಿಗೆ ಅವರ ಐ.ಸಿ.ಎಸ್. ಹಗರಣವೂ ಮುಗಿಯಿತು. ಅಲ್ಲಿಗೆ ಶ್ರೀ ಅರವಿಂದರು ಇಂಗ್ಲೆಂಡಿಗೆ ಬಂದು ಹದಿನಾಲ್ಕು ವರ್ಷಗಳೇ ಉರುಳಿಹೋಗಿದ್ದುವು. ಅವರಿನ್ನು ಅಲ್ಲಿದ್ದು ಮಾಡಬೇಕಾದ ಕೆಲಸವಾಗಲೀ, ವ್ಯಾಸಂಗವಾಗಲೀ ಏನೂ ಉಳಿದಿರಲಿಲ್ಲ. ಸ್ವದೇಶಕ್ಕೆ ಮರಳುವ ಸಿದ್ಧತೆಯಲ್ಲಿದ್ದಾಗ ಅಂದಿನ ಬರೋಡೆ ಮಹಾರಾಜರು ಲಂಡನ್ನಿಗೆ ಬಂದಿದ್ದರು. ಅವರು ಬಹಳ ಪ್ರಗತಿಶೀಲ ದೇಶಪ್ರೇಮಿ. ಪ್ರಜಾಪ್ರೇಮಿ. ದೇಶೀಯ ರಾಜರೆಂದು ಪ್ರಸಿದ್ಧರಾಗಿದ್ದರು. ಅವರು ತಮ್ಮ ರಾಜ್ಯದ ಆಡಳಿತೆಯನ್ನು ನಡೆಸಲು ಸಮರ್ಥರೂ ಪ್ರಾಮಾಣಿಕರೂ ಆದವರನ್ನು ಆರಿಸಿ ಆರಿಸಿ ನೇಮಕ ಮಾಡುತ್ತಿದ್ದರು. ಲಂಡನ್ನಿನಲ್ಲಿ ಅವರಿದ್ದಾಗ ಅವರ ಕಿವಿಯ ಮೇಲೆ ಶ್ರೀ ಅರವಿಂದರ ವಿಶೇಷ ಪ್ರತಿಭೆಯನ್ನು, ಅವರು ಐ.ಸಿ.ಎಸ್.ಗೆ ಸೇರಲಾಗದ ಸುದ್ದಿಯನ್ನು ಹಾಕಿದರು. ಅವರು ಶ್ರೀ ಅರವಿಂದರನ್ನು ತಮ್ಮ ಸಂಸ್ಥಾನದ ಸರ್ಕಾರದ ಸೇವೆಗೆ ತಿಂಗಳಿಗೆ ಇನ್ನೂರು ರೂಪಾಯಿಗಳ ಸಂಬಳದ ಮೇಲೆ ಅಲ್ಲಿಯೇ ನೇಮಕ ಮಾಡಿದರು. ಹೀಗೆ. ಶ್ರೀ ಅರವಿಂದರು ಬರೋಡೆ ಸಂಸ್ಥಾನದ ನೌಕರೀ ಸೇರಲು ಇಂಗ್ಲೆಂಡನ್ನು ಬಿಟ್ಟು 1893ರ ಜನವರಿ ಕೊನೆಯಲ್ಲಿ ಅಥವಾ ಫೆಬ್ರವರಿ ಮೊದಲನೆ ವಾರದಲ್ಲಿ ಮುಂಬಯಿಗೆ ಬಂದಿಳಿದರು.

ಆದರೆ ಅವರಿಗೆ ತಂದೆಯ ಮುಖ ನೋಡುವ ಭಾಗ್ಯವಿರಲಿಲ್ಲ. ಶ್ರೀ ಅರವಿಂದರು ಕಾರ್ಥೇಜ್ ಎಂಬ ಹಡಗು ಹತ್ತಿ ಭಾರತಕ್ಕೆ

ಬರುವುದಾಗಿ ತಂದೆಗೆ ತಿಳಿಸಿದರು. ಒಂದು ಜಹಜು ಹತ್ತಿ ಸ್ವದೇಶಕ್ಕೆ ಪ್ರಯಾಣ ಬೆಳೆಸಿದರು. ಡಾ. ಕೃಷ್ಣಧನ ಘೋಷರು ಕಾರ್ಥೇಜ್ ಇಂಗ್ಲೆಂಡ್ ಬಿಟ್ಟದ್ದು ಅದು ಪ್ರಯಾಣ ಮುಂದು ವರಿಸಿದ್ದು ಮುಂತಾದ ಸಂಗತಿಗಳನ್ನು ಗಮನಿಸುತ್ತಿದ್ದರು. ಆ ಜಹಜು ಅಘಘಾತಕ್ಕೀಡಾಗಿ ಮುಳುಗಿಹೋಯಿತು. ಹಡಗಿ ನೊಡನೆ ಅದರಲ್ಲಿದ್ದ ಪ್ರಯಾಣಿಕರೂ ಮುಳುಗಿದರೆಂಬುದಾಗಿ ಸುದ್ದಿ ಪ್ರಕಟವಾಯಿತು. ಡಾ. ಕೃಷ್ಣಧನ ಘೋಷರು ಎದೆಯೊಡೆದು 'ಅರೋ' ಎಂದು ಕೂಗಿ ಕಡೆಯುಸಿರು ಎಳೆದರು! ಆದರೆ ವಾಸ್ತವವಾಗಿ ಕಾರಣಾಂತರದಿಂದ ಶ್ರೀ ಅರವಿಂದರು ಕಾರ್ಥೇಜ್ ಜಹಜನ್ನು ಹತ್ತದೆ ಅದರ ಹಿಂದಿನಿಂದ ಹೊರಟ ಮತ್ತೊಂದು ಜಹಜಿನಲ್ಲಿ ಪ್ರಯಾಣ ಮಾಡಿ ಸ್ವದೇಶಕ್ಕೆ ಹಿಂದಿರುಗಿದರು.

ಭಾರತವನ್ನು ಬಿಟ್ಟು ಹೋದಾಗ ಬಾಲಕ ಅರವಿಂದನಿಗೆ ಈ ದೇಶದ ಬಗ್ಗೆ ಅಷ್ಟೇನೂ ತಿಳಿದಿರಲಿಲ್ಲ. ಇಂಗ್ಲೆಂಡಿನಲ್ಲಿದ್ದ ಹದಿನಾಲ್ಕು ವರ್ಷಗಳಲ್ಲಿ ಈ ಆರ್ಷೇಯ ಪುಣ್ಯ ಭೂಮಿಯ ವಿಚಾರವಾಗಿ ತುಂಬಾ ತಿಳಿದುಕೊಂಡಿದ್ದರು. ಈ ದೇಶದ ವಸ್ತು ಸ್ಥಿತಿಯನ್ನು ಪ್ರತ್ಯಕ್ಷ ಕಾಣದಿದ್ದರೂ, ಆರುಸಾವಿರ ಮೈಲು ದೂರ ದಿಂದ ಈ ದೇಶದ ಬಗ್ಗೆ ಮಾತಿಗೂ ನಿಲುಕದ ಪೂಜ್ಯ ಬುದ್ಧಿಯನ್ನು ಬೆಳೆಸಿಕೊಂಡು ಬಂದಿದ್ದರು. ಹೆಸರನ್ನು ನೆನೆದ ಮಾತ್ರಕ್ಕೇ ಹರುಷದ ಹೊನಲು ಉಕ್ಕಿ ಹರಿಯುವಂತಹ ಮಾನಸಿಕ ಸ್ಥಿತಿ ಉಂಟಾಗಿದ್ದರೆ ಆಶ್ಚರ್ಯವೇನಲ್ಲ. ಅಂಥ ಉಚ್ಚ ಭಾವನೆಯಿಂದ ಭರತಖಂಡದ ಮೇಲೆ ಮೊಟ್ಟಮೊದಲು ಕಾಲಿಟ್ಟೊಡನೆಯೆ ಅವರಿಗೊಂದು ಅಪೂರ್ವವಾದ ಅನುಭವವುಂಟಾಯಿತೆಂದು ಅವರೆ ಹೇಳಿದ್ದಾರೆ. ಆ ಅನುಭವದಿಂದ ಅವರ ಮನದಲ್ಲಿ ಅವರ್ಣನೀಯವಾದ ಪರಮಶಾಂತಿ ಬಂದಿಳಿಯಿತೆಂದೂ ಆ

ಶಾಂತಿಯು ಸುಖ—ಆನಂದ—ಅವರನ್ನು ಬಹುಕಾಲದವರೆಗೆ ಆವರಿಸಿಕೊಂಡಿತ್ತೆಂದೂ ಹೇಳಿದ್ದಾರೆ.

ಬರೋಡೆ ಸಂಸ್ಥಾನದಲ್ಲಿ ಮಾಡಬೇಕಾಗಿದ್ದ ಸೇವಾವೃತ್ತಿಗೂ ಅವರ ಬೌದ್ಧಿಕ, ಮಾನಸಿಕ, ಆತ್ಮದ ಔನ್ನತ್ಯಕ್ಕೂ ಏನು ಸಂಬಂಧ? ಅವರ ಸಾಹಿತ್ಯ ಶಕ್ತಿ, ಕಾವ್ಯರಚನಾ ಸಾಮರ್ಥ್ಯ, ಅಧ್ಯಾತ್ಮಿಕ ಅನುಭವ ಕಟ್ಟಿಕೊಂಡು ಅರಸರೇನು ಮಾಡಿಯಾರು? ಅವರ ಪ್ರತಿಭೆ ಮತ್ತು ಹೃದಯಾನುಭವದಿಂದ ಅವರಿಗೇನಾಗಬೇಕಾಗಿದೆ? ಅದನ್ನು ಗಮನಿಸುವವರು ಯಾರಿದ್ದಾರೆ? ಅವರಿಗೆ ಬೇಕಾಗಿದ್ದುದು ಒಬ್ಬ ಉದ್ಯೋಗಸ್ಥ ತಾನೆ! ಅಂಥವರೊಬ್ಬರು ಸಿಕ್ಕಾಗ ಅವರನ್ನು ಖಾಲಿಯಿದ್ದ ಜಾಗಕ್ಕೆ ಹಾಕುವುದು! ಈ ಸರ್ಕಾರಿ ನಿಯಮಾನುಸಾರವಾಗಿ ಶ್ರೀ ಅರವಿಂದರನ್ನು ಮೊದಲು ಸರ್ವೇ ಸೆಟ್ಲ್‌ಮೆಂಟ್ ಇಲಾಖೆಗೆ ಹಾಕಿದರು! ಅವರ ಲ್ಯಾಟಿನ್. ಗ್ರೀಕ್, ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯ ಜ್ಞಾನ; ಅವರ ಕಾವ್ಯರಚನಾ ಶಕ್ತಿಗೂ ಅವರಿಗೆ ವಹಿಸಿದ ಈ ನೌಕರಿಗೂ ಏನಾದರೂ ಸಂಬಂಧ ಇದೆಯೆ? ಇದೇ ಸೂತ್ರವನ್ನು ಅನುಸರಿಸಿ ಅವರನ್ನು ಸ್ಟಾಂಪ್ ಇಲಾಖೆಗೂ ಹಾಕಿದರು. ಕೊನೆಗೆ ಇವರಿಗೆ ಎಂಥಾ ಬಂಗಾರದಂಥ ಕೆಲಸವನ್ನು ಕೊಟ್ಟರೆಂದರೆ ಆಗ ಯೂರೋಪ್ ಖಂಡದಲ್ಲಿ ಬಂದುಹೋಗುವ ರೈಲುಗಳ ವೇಳಾ ಪಟ್ಟಿಯನ್ನು ಪರಿಶೀಲಿಸಿ, ಮಹಾರಾಜರ ಪ್ರವಾಸಕ್ಕೆ ಅನುಕೂಲವಾದ ವೇಳಾಪಟ್ಟಿಯನ್ನು ತಯಾರಿಸುವುದು!! ಇದರ ಜೊತೆಗೆ ಮಹಾರಾಜರು ರೆಸಿಡೆಂಟರಿಗೆ ವೈಸ್‌ರಾಯ್‌ರಿಗೆ ಬರೆಯಬೇಕಾಗಿದ್ದ ಅತಿ ಮಹತ್ವದ ಪತ್ರಗಳನ್ನು ಮನವಿಗಳನ್ನು ಬರೆದುಕೊಡುತ್ತಿದ್ದರು. ಹಾಗೆ ಎರಡು ವರ್ಷ 1895ರ ವರೆಗೆ ಆ, ಈ ಚಿಲ್ಲರೆ ಪಲ್ಲರೆ ಕೆಲಸ ಮಾಡಿಕೊಂಡಿದ್ದರು. 1895ರಲ್ಲಿ ಅವರನ್ನು ಬರೋಡಾ ಕಾಲೇಜಿನಲ್ಲಿ

ಫ್ರೆಂಚ್ ಭಾಷೆಯನ್ನು ಹೇಳಿಕೊಡಲು ಅಧ್ಯಾಪಕರೆಂದು ನೇಮಿಸಿದರು. 1899ರ ಹೊತ್ತಿಗೆ ಇಂಗ್ಲೀಷ್ ಪ್ರಾಧ್ಯಾಪಕರೆಂದು ಖಾಯಂ ಆಗಿ ನೇಮಕ ಹೊಂದಿದರು. ಕ್ರಮೇಣ ಉಪ-ಪ್ರಿನ್ಸಿಪಾಲರಾಗಿ 1906 ರಲ್ಲಿ ಸರ್ಕಾರಿ ಕಲಸಕ್ಕೆ ರಾಜೀನಾಮೆ ಕೊಟ್ಟಾಗ ಆ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು.

ಬರೋಡದಲ್ಲಿ 1893 ರಿಂದ 1906 ರವರೆಗೆ ಕಳೆದ ಹದಿಮೂರು ವರ್ಷದಲ್ಲಿ ಅವರ ಜೀವನದ ಮುಖ್ಯ ಪ್ರವಾಹಗಳನ್ನು ಈ ರೀತಿಯಾಗಿ ಗುರುತಿಸಬಹುದು:

1 ಅಧ್ಯಾಪಕ ವೃತ್ತಿ
2 ಸಾಹಿತ್ಯಾಭ್ಯಾಸ ಮತ್ತು ನಿರ್ಮಾಣ
3 ಆಧ್ಯಾತ್ಮಿಕ ಸಾಧನೆ
4 ದೇಶಸೇವೆ.

1 ಅಧ್ಯಾಪಕ ವೃತ್ತಿ

ಶ್ರೀ ಅರವಿಂದರು ಬರೋಡ ಕಾಲೇಜಿನಲ್ಲಿ ಪ್ರಾಧ್ಯಾಪಕರು, ವೈಸ್ ಪ್ರಿನ್ಸಿಪಾಲ್ ಆಗಿದ್ದಾಗ ದಿವಂಗತ ಕೆ.ಎಂ. ಮುನ್ಷಿ. ಎ.ಬಿ. ಪುರಾಣಿ ಮುಂತಾದ ಮುಂದೆ ತುಂಬಾ ಪ್ರಖ್ಯಾತರಾದ ಮಹಾಮಹಾನ್ ವ್ಯಕ್ತಿಗಳು ಅವರ ವಿದ್ಯಾರ್ಥಿಗಳಾಗಿದ್ದರು. ಅವರ ವಿದ್ಯಾರ್ಥಿಗಳಾಗಿದ್ದು ಆಮೇಲೆ ವಕೀಲರಾದ ಒಬ್ಬರು ಅವರ ಬೋಧನಾ ಕ್ರಮವನ್ನು ಕುರಿತು ಹೀಗೆ ಬರೆಯುತ್ತಾರೆ:

''ಅವರ ಬೋಧನಾ ಕ್ರಮ ನೂತನವಾಗಿತ್ತು. ಪ್ರಾರಂಭದಲ್ಲಿ ಪಠ್ಯವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಸಾಮಾನ್ಯ ಪರಿಚಯವನ್ನುಂಟುಮಾಡುವ ಕೆಲವು ಪೀಠಿಕಾ ರೂಪದ ಪ್ರಸ್ತಾಪ ಮಾಡುತ್ತಿದ್ದರು. ಆ ತರುವಾಯ ಪಾಠಗಳನ್ನು ಓದಿ ಹೇಳುತ್ತಿದ್ದರು.

ಆವಶ್ಯಕತೆ ಕಂಡಕಡೆ ಓದುವುದನ್ನು ನಿಲ್ಲಿಸಿ ಕಠಿಣ ಶಬ್ದಗಳ ಮತ್ತು ವಾಕ್ಯಗಳ ಅರ್ಥವನ್ನು ಹೇಳುತ್ತಿದ್ದರು. ಕೊನೆಗೆ ಸಾಮಾನ್ಯವಾಗಿ ಆ ಪಠ್ಯ ವಿಷಯಗಳನ್ನು ಕುರಿತು ಉಪನ್ಯಾಸ ಮಾಡುತ್ತಿದ್ದರು.

"ಅಧ್ಯಾಪಕರಾಗಿ ಕೊಡುತ್ತಿದ್ದ ಈ ಉಪನ್ಯಾಸಗಳಿಂದಲೂ ಅವರು ಹೊರಗೆ ವೇದಿಕೆಯ ಮೇಲೆ ಮಾಡುತ್ತಿದ್ದ ಭಾಷಣಗಳನ್ನು ಕೇಳುವುದು ರಸದೌತಣವಾಗಿರುತ್ತಿತ್ತು. ಅವರು ಭಾಷಣ ಮಾಡುತ್ತಾರೆಂದರೆ ಕಾಲೇಜಿನ ಕೇಂದ್ರ ಸಭಾಂಗಣ ಕಿಕ್ಕಿರಿದು ತುಂಬುತ್ತಿತ್ತು. ಅವರೇನು ದೊಡ್ಡ ಪ್ರಚಂಡ ವಾಗ್ಮಿಗಳಲ್ಲ: ಭಾಷಣಕಾಲದಲ್ಲಿ. ಆದರೆ ಬಹು ಶ್ರೇಷ್ಠ ಮಟ್ಟದ ಮಾತುಗಾರರು. ....ಅವರ ದನಿ ಸುಮಧುರವಾಗಿತ್ತು. ಕೇಳುಗರನ್ನು ಸೆರೆ ಹಿಡಿದು ನಿಲ್ಲಿಸುತ್ತಿತ್ತು. ಅವರ ಮಾತುಗಳನ್ನು ಕೇಳಿ ಐವತ್ತು ವರ್ಷಗಳ ಮೇಲಾಗಿದ್ದರೂ, ಇಂದಿಗೂ ಅವರ ರೂಪ ನನ್ನ ಕಣ್ಣಲ್ಲಿ ಕಟ್ಟಿದಂತಿದೆ. ಅವರ ಕಂಚಿನಂಥ ಕಂಠಧ್ವನಿ ಇಂದಿಗೂ ನನ್ನ ಕಿವಿಯಲ್ಲಿ ಜನುಗುತ್ತಿದೆ".

ಶಿಕ್ಷಣ ಎಂದರೆ ಪಠ್ಯಗ್ರಂಥಗಳನ್ನು ಕಂಠಪಾಠಮಾಡಿ ಪರೀಕ್ಷೆಯಲ್ಲಿ ಒಪ್ಪಿಸಿ ಪರೀಕ್ಷೆ ಪಾಸುಮಾಡುವುದಲ್ಲ ಎಂಬುದು ಅವರ ಮತ. ಜ್ಞಾನ ಪ್ರದಾನ ಮತ್ತು ಜ್ಞಾನಾರ್ಜನೆ ಶಿಕ್ಷಣದ ಗುರಿ. ಆ ಜ್ಞಾನದಿಂದ ವ್ಯಕ್ತಿ ತನ್ನ ನೈಜ ಸ್ವರೂಪದ ಅರಿವು ಪಡೆದು ತನ್ನಲ್ಲಿಯೆ ಇರುವ ಆ ದೈವತ್ವವನ್ನು ಮುಟ್ಟುವುದೆ ಶಿಕ್ಷಣದ ಗುರಿ. ಈ ಗುರಿಯನ್ನು ಮುಟ್ಟಲು ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಶ್ರೀ ಅರವಿಂದರು ಪಾಠಪ್ರವಚನ ಮಾಡುತ್ತಿದ್ದರು.

2 ಸಾಹಿತ್ಯಾಭ್ಯಾಸ ಮತ್ತು ರಚನೆ

ಶ್ರೀ ಅರವಿಂದರು ಬರೋಡೆಗೆ ಬಂದಮೇಲೆ ಸಂಸ್ಕೃತ, ಬಂಗಾಳಿ, ಗುಜರಾತಿ, ಸ್ವಲ್ಪಮಟ್ಟಿಗೆ ಮರಾಠಿ, ಭಾಷೆಗಳನ್ನು ಕಲಿಯ ತೊಡಗಿದರು. ಸಂಸ್ಕೃತವನ್ನು ಅವರು ಗುರುಮುಖೇನ ಕಲಿಯಲಿಲ್ಲ. ಬಂಗಾಳಿಯನ್ನು ಓರ್ವ ಬಂಗಾಳಿ ಸ್ನೇಹಿತನಿಂದ ಹೇಳಿಸಿಕೊಂಡರು. ಮಾತನಾಡುವ ಬಂಗಾಲಿ ಭಾಷೆಯ ವೈವಿಧ್ಯತೆಯನ್ನು, ಅದರ ಸೂಕ್ಷ್ಮವನ್ನು ಕಲಿತುಕೊಂಡರು. ಗುಜರಾತಿ ಮತ್ತು ಮರಾಠಿ ವ್ಯವಹಾರಕ್ಕೆ ತಕ್ಕಷ್ಟು ಕಲಿತರು. ಈ ಕಾಲಾವಧಿಯಲ್ಲಿ ಶ್ರೀ ಅರವಿಂದರು ಗೀತೆಯನ್ನು ವೇದ ಉಪನಿಷತ್ತುಗಳನ್ನು ಅಧ್ಯಯನ ಮಾಡಿದರು. ಇದರ ಜೊತೆಗೆ ಇಂಗ್ಲೆಂಡಿನಿಂದ ಹೊಸದಾಗಿ ಪ್ರಕಟವಾಗುತ್ತಿದ್ದ ಇಂಗ್ಲಿಷ್ ಫ್ರೆಂಚ್ ಗ್ರಂಥಗಳನ್ನು ಹೊರೆಹೊರೆ ತರಿಸಿಕೊಂಡು ವ್ಯಾಸಂಗದಲ್ಲಿ ತಲ್ಲೀನರಾಗುತ್ತಿದ್ದರು. ಅವರ ತಲ್ಲೀನತೆಯನ್ನು ಕುರಿತು ಅವರ ವಿದ್ಯಾರ್ಥಿಯಾಗಿದ್ದವರೊಬ್ಬರು ಹೀಗೆ ಬರೆಯುತ್ತಾರೆ:

"ಅವರು ಪುಸ್ತಕಗಳನ್ನು ಓದುವುದರಲ್ಲಿ ಎಷ್ಟರಮಟ್ಟಿಗೆ ತಲ್ಲೀನರಾಗುತ್ತಿದ್ದರೆಂದರೆ, ತಮ್ಮ ಸುತ್ತುಮುತ್ತ ಏನಾಗುತ್ತಿದೆ ಎಂಬುದರ ಪರಿವೆಯೆ ಇರುತ್ತಿರಲಿಲ್ಲ. ಒಂದು ಸಂಜೆ ಅವರ ಆಳು ತಟ್ಟೆಯಲ್ಲಿ ಊಟವನ್ನು ತಂದಿಟ್ಟು 'ಊಟಕ್ಕೆ ಬಡಿಸಿಟ್ಟಿದ್ದೇನೆ' ಎಂದು ಹೇಳಿದ. 'ಒಳ್ಳೇದು' ಎಂದು ಅರವಿಂದರು ಉತ್ತರಕೊಟ್ಟು ಮತ್ತೆ ತಮ್ಮ ವ್ಯಾಸಂಗದಲ್ಲಿ ಮುಳುಗಿಬಿಟ್ಟರು. ತಲೆಯನ್ನು ಮೇಲಕ್ಕೆತ್ತಲೂ ಇಲ್ಲ. ಒಂದು ಘಂಟೆಯ ನಂತರ ಆ ಆಳು ಬಂದು ನೋಡುತ್ತಾನೆ, ಊಟದ ತಟ್ಟೆ ಹಾಗೆಯೆ ಇದೆ! ಅವರ ಅಭ್ಯಾಸಕ್ಕೆ ಭಂಗವನ್ನುಂಟುಮಾಡಲು ಅಂಜಿ

ನನ್ನ ಮುಂದೆ ಹೇಳಿದ. ನಾನು ಅವರ ಕೋಣೆಗೆ ಹೋಗಿ ಊಟದ ನೆನಪು ಮಾಡಿದೆ. ಅವರು ಮುಖ ಮೇಲಕ್ಕೆತ್ತಿ, ಮುಗುಳು ನಗೆ ನಕ್ಕು ಓದು ನಿಲ್ಲಿಸಿ ಎದ್ದು ಹೋಗಿ ಕೆಲವೇ ನಿಮಿಷಗಳಲ್ಲಿ ಊಟಮುಗಿಸಿಬಂದು ಮತ್ತೆ ಓದಿನಲ್ಲಿ ಮುಳುಗಿಹೋದರು"

ಇಂಥವರನ್ನೇ ಸಾರಸ್ವತಯೋಗಿ ಎಂದು ಕರೆದಿದ್ದಾರಲ್ಲವೇ?

ಇದೇ ಕಾಲಾವಧಿಯಲ್ಲಿ ಅವರು ಆಗಾಗ ದಸರೆ ಮತ್ತು ದೀಪಾವಳಿ ಹಬ್ಬಕ್ಕೆ ಕಲ್ಕತ್ತೆಗೆ ಹೋಗುತ್ತಿದ್ದರು. ಹೋಗುವಾಗ ಅಭ್ಯಾಸಕ್ಕಾಗಿ ಎರಡು ಮೂರು ಟ್ರಂಕ್ ತುಂಬ ಪುಸ್ತಕಗಳನ್ನು ಹೊತ್ತುಕೊಂಡು ಹೋಗುತ್ತಿದ್ದರು! ಬಹುಶಃ ಅವರಿಗೆ ಗೊತ್ತಿಗೆ ಬರದ ಒಂದೇ ಕೆಲಸವೆಂದರೆ ಓದುವುದು ಬರೆಯುವುದು ಎಂದೇ ಕಾಣುತ್ತದೆ! ಈ ಕಾಲಾವಧಿಯಲ್ಲೆ ಭರ್ತೃಹರಿಯ ನೀತಿಶತಕವನ್ನೂ ಕಾಳಿದಾಸನ 'ವಿಕ್ರಮೋರ್ವಶೀಯ' 'ಋತುಸಂಹಾರ' ಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿದರು.

3 ರಾಜಕೀಯ ದ್ವಾರದಿಂದ ಆಧ್ಯಾತ್ಮ ಮಂದಿರಕ್ಕೆ

ಶ್ರೀ ಅರವಿಂದರು ಐ.ಸಿ.ಎಸ್. ಹುದ್ದೆಗೆ ಮುದ್ದಾಂ ಅನರ್ಹತೆಯನ್ನು ಸಂಪಾದಿಸಿಕೊಂಡದ್ದು ಭಾರತ ದೇಶದ ಬಂಧ ವಿಮೋಚನೆಗಾಗಿ ಎಂಬುದನ್ನು ಈ ಹಿಂದೆ ನೋಡಿದ್ದೇವೆ. ಹಾಗಾದರೆ ಭಾರತಕ್ಕೆ ಬಂದ ಮೇಲೆ ಬಡೋದಾ ಸಂಸ್ಥಾನದ ನೌಕರಿಯನ್ನು ಹಿಡಿಕೊಂಡು ಅವರು ದೇಶಕ್ಕಾಗಿ ಮಾಡಿದ ಕೆಲಸವೇನು? ಅತ್ತ ಐ.ಸಿ.ಎಸ್. ಅಧಿಕಾರದ ಲಾಭವೂ ಇಲ್ಲ: ಇತ್ತ ದೇಶಸೇವೆಯ ಪ್ರಯೋಜನವೂ ಇಲ್ಲ ಎಂಬಂತೆ ಆಗಿಹೋಯಿತೆ?

ಇಲ್ಲ. ಬಡೋದಾ ಸಂಸ್ಥಾನದ ಸೇವೆಯಲ್ಲಿದ್ದುಕೊಂಡೇ ಅವರ ಶಕ್ತಿಸಾಮರ್ಥ್ಯ, ಸನ್ನಿವೇಶ ಅನುಕೂಲಗಳಿಗೆ ಮೀರಿ ದೇಶ

ಸೇವೆಯಲ್ಲಿ ತೊಡಗಿದ ರೋಮಾಂಚನಕಾರೀ ಕಥೆಯನ್ನು ಮುಂದೆ ನೋಡಲಿದ್ದೇವೆ.

1893ರಲ್ಲಿ ಬರೋಡೆಗೆ ಬಂದ ಸ್ವಲ್ಪ ಸಮಯಾನಂತರ, ಮುಂಬಯಿಯಲ್ಲಿ ಒಂದು ದ್ವಿಭಾಷಾ ಪತ್ರಿಕೆ "ಇಂದು ಪ್ರಕಾಶ" ವನ್ನು ನಡೆಸುತ್ತಿದ್ದ ಅವರ ಕೇಂಬ್ರಿಜ್ ಸಹಪಾಠಿ ಶ್ರೀ ಕೆ. ಜಿ. ದೇಶಪಾಂಡೆ ಎಂಬ ಗೆಳೆಯರು, ತಮ್ಮ ಪತ್ರಿಕೆಗೆ ಪ್ರಚಲಿತ ರಾಜಕೀಯ ಪರಿಸ್ಥಿತಿಯನ್ನು ಕುರಿತು ಲೇಖನಗಳನ್ನು ಬರೆದು ಕೊಡಬೇಕೆಂದು ಪ್ರಾರ್ಥಿಸಿದರು. ಶ್ರೀ ಅರವಿಂದರು 1893ನೆ ಜುಲೈನಿಂದ. 1894ನೆಯ ಫೆಬ್ರುವರಿ ವರೆಗೆ "ಹಳೆಯ ಲಾಂದ್ರಕ್ಕೆ ಬದಲು ಹೊಸ ಲಾಂದ್ರಗಳು" ಎಂಬ ಸ್ಥಿರ ಶೀರ್ಷಿಕೆಯ ಕೆಳಗೆ, "ಪೂರ್ವ ಬಂಗಾಳಿ" ಎಂಬ ಗುಪ್ತ ನಾಮಾಂಕಿತದಿಂದ ಲೇಖನ ಗಳನ್ನು ಬರೆದರು. ಆ ಲೇಖನಗಳಲ್ಲಿ ಅಂದಿನ ಕಾಂಗ್ರೆಸ್ ನೀತಿ ಯನ್ನು ಅವರ ಮುಖಂಡತ್ವವನ್ನು ನಿರ್ದಾಕ್ಷಿಣ್ಯವಾಗಿ ಅತ್ಯಂತ ಕಠೋರವಾದ ಮಾತುಗಳಲ್ಲಿ ಖಂಡಿಸತೊಡಗಿದರು. ಅಂದು ಕಾಂಗ್ರೆಸ್ ಅನುಸರಿಸುತ್ತಿದ್ದ ಮನವಿ ರೂಪದ ಭಿಕ್ಷಾಯಾಚನೆಯ (mendicant policy of prayers and petitions) ದುರ್ಬಲ ದುರ್ನೀತಿಯನ್ನು ಖಂಡಿಸತೊಡಗಿದರು. ಅದರ ಗುರಿ ಭಾರತದೇಶಕ್ಕೆ ಸ್ವಾತಂತ್ರ್ಯ ಸಂಪಾದನೆ ಮಾಡುವುದಾಗಿರಲಿಲ್ಲ. ಕೇವಲ ಕೆಲವು ನೌಕರಿ ಗಿಟ್ಟಿಸಿಕೊಳ್ಳುವ ಅಲ್ಪ ಸ್ವಲ್ಪ ಆಡಳಿತೆಯಲ್ಲಿ ಪಾಲ್ಗೊಳ್ಳಲು ಅವಕಾಶಕೊಡಬೇಕೆಂಬ ಅತಿದೀನ ಗುರಿ ಕಾಂಗ್ರೆಸ್ಸಿನದಾಗಿತ್ತು. ಸ್ವರಾಜ್ಯವೆ ನಮ್ಮ ಗುರಿಯಾಗಬೇಕೆಂದು ಮೊಟ್ಟ ಮೊದಲು ಸಾರಿದ ಪ್ರಥಮ ರಾಜಕೀಯ ಮುತ್ಸದ್ದಿಯೇ ಶ್ರೀ ಅರವಿಂದರು. ಅವರ ಮಾತನ್ನೆತ್ತಿಕೊಂಡೇ ಲೋಕ ಮಾನ್ಯ ತಿಲಕರು "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು; ಅದನ್ನು

ಪಡೆದೇ ತೀರುತ್ತೇನೆ" ಎಂಬುದಾಗಿ ಸಾರಿ "ಭಾರತದ ಅಶಾಂತಿಯ ಮೂಲಪುರುಷ" (Father of Indian unrest) ಎಂಬ ಹೆಸರಿಗೆ ಪಾತ್ರರಾದರು!

ಅಂದು ಸ್ವರಾಜ್ಯದ ಗುರಿ ಕಾಂಗ್ರೆಸಿನ ಕನಸುಮನಸಿನಲ್ಲೂ ಇರಲಿಲ್ಲ. ಆ ಅಲ್ಪ ಲಜ್ಜಾಸ್ಪದ ಗುರಿಯನ್ನು ಮುಟ್ಟಲು ಅವಲಂಬಿಸಿದ ರೀತಿಯೂ ಇನ್ನೂ ಲಜ್ಜಾಸ್ಪದವಾಗಿತ್ತು. ಬ್ರಿಟಿಷ್ ಸರ್ಕಾರದ ಮುಂದೆ ಕೈಯೊಡ್ಡಿ ಸೆರಗೊಡ್ಡಿ ಬೇಡಿಕೊಳ್ಳುವ ದೀನಪತೆ! ಈ ಅಲ್ಪ ಗುರಿಯನ್ನು ಮುಟ್ಟಲು ಅನುಸರಿಸಿದ ದೀನಧೋರಣೆಯನ್ನು ಹಾಕಿಕೊಟ್ಟ ಮುಖಂಡರು ಶುದ್ಧ ಅಪ್ರಯೋಜಕರು ಅಶಕ್ತರು ಎಂಬುದಾಗಿ ಅವರು "ಇಂದು ಪ್ರಕಾಶ"ದಲ್ಲಿ ನಿರ್ಭಯವಾಗಿ ಟೀಕಿಸಿದರು. ಆಗ ಅವರಿಗೆ ಕೇವಲ ಇಪ್ಪತ್ತೊಂದು ವರ್ಷ ತುಂಬಿ ಇಪ್ಪತ್ತೆರಡರಲ್ಲಿ ನಡೆಯುತ್ತಿತ್ತು. ಈಗಿನ ಕಾಲದ ಶೇಕಡಾ 99.999ರಷ್ಟು ಆ ವಯಸ್ಸಿನ ಯುವಕರು ಮಾಡುತ್ತಿರುವ ಚಿಂತನೆ, ಯೋಜನೆ, ಕೃತ್ಯ, ರೀತಿ ನೀತಿಗಳನ್ನು ಗಮನಿಸಿದರೆ ಶ್ರೀ ಅರವಿಂದರ ರಾಜಕೀಯ ಪರಿಜ್ಞಾನ ಯಾವ ಮಟ್ಟದಲ್ಲಿತ್ತು ಎಂಬುದನ್ನು ಸ್ವಲ್ಪಮಟ್ಟಿಗಾದರೂ ತಿಳಿಯಬಹುದು!

ಶ್ರೀ ಅರವಿಂದರ ಈ ಉಗ್ರಲೇಖನಗಳನ್ನು ಓದಿದ ಅಂದಿನ ದೊಡ್ಡ ರಾಜಕೀಯ ಮುಖಂಡರೂ ಮತ್ತು ಸಾಮಾಜಿಕ ಕಾರ್ಯಕರ್ತರೂ ಆಗಿದ್ದ ಗೋವಿಂದ ಮಹದೇವ ರಾನಡೆ ಎಂಬ ಮಹಾನುಭಾವರು(ಅವರು ಮುಂದೆ ಮುಂಬೈ ಹೈಕೋರ್ಟಿನ ನ್ಯಾಯಮೂರ್ತಿಗಳಾದರು) "ಇಂದು ಪ್ರಕಾಶ"ದ ಸಂಪಾದಕ ಶ್ರೀ ದೇಶಪಾಂಡೆಯವರನ್ನು ಕರೆದು: "ಇಂಥ ಉಗ್ರ ಲೇಖನಗಳನ್ನು ಪ್ರಕಟಿಸಿದರೆ ನಿಮ್ಮ ಪ್ರೆಸ್ಸು, ಪೇಪರನ್ನು ಸರ್ಕಾರ ಮುಟ್ಟುಗೋಲು ಹಾಕೀತು; ಕಂತಾಬಟ್ಟೆ ಜಾಮೀನು ಠೇವಣಿ ಕೊಡಬೇಕಾದೀತು" ಎಂದು ಎಚ್ಚರಿಸಿದ

ರಂತೆ!! ಶ್ರೀ ದೇಶಪಾಂಡೆ ಈ ಮಾತನ್ನು ಶ್ರೀ ಅರವಿಂದರಿಗೆ ತಿಳಿಸಿದರಂತೆ. ಈ ಮಾತು ಕೇಳಿ ಶ್ರೀ ಅರವಿಂದರು "ನನಗೆ ರಾಜಕೀಯ ಲೇಖನಗಳನ್ನು ಬರೆಯುವ ಉತ್ಸಾಹವೆ ಕುಗ್ಗಿ ಹೋಯಿತು. ಗೆಳೆಯರ ಮುಲಾಜಿಗಾಗಿ ಕೆಲವು ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು (ಬಂಕಿಮ ಚಂದ್ರ ಚಟರ್ಜಿಯ ಬಗ್ಗೆ) ಬರೆದು ಕೊಟ್ಟೆ." ಎಂದರು. ಕ್ರಮೇಣ ಆ ಲೇಖನ ಮಾಲೆಯನ್ನು ನಿಲ್ಲಿಸಿಯೇಬಿಟ್ಟರು.

ಅಂದರೆ ಅವರ ರಾಜಕೀಯ ಚಟುವಟಿಕೆಯೆ ನಿಂತು ಹೋಯಿತೆಂದಲ್ಲ. ಶ್ರೀ ಅರವಿಂದರು ಭಾರತದ ಬಂಧವಿಮೋಚನೆಗಾಗಿ ತಮ್ಮದೆ ಆದ ರೀತಿನೀತಿಗಳನ್ನು ರೂಪಿಸಿದ್ದರು. "ಭವಾನಿ ಮಂದಿರ" ಎಂಬ ಹೆಸರಿನ ಒಂದು ಗುಪ್ತ ಸಂಸ್ಥೆಯನ್ನು ಕಟ್ಟಿ, ಒಂದು ಸಶಸ್ತ್ರ ಸೈನ್ಯ ಪಡೆಯನ್ನು ಸೇರಿಸಿ, ಸಶಸ್ತ್ರ ಹೋರಾಟವನ್ನು ಹೂಡಿ, ಬಂಡಾಯದ ಮೂಲಕ ಬ್ರಿಟಿಷ್ ಸರ್ಕಾರವನ್ನು ಬುಡಮೇಲು ಮಾಡಬೇಕೆಂದು ಬಹುದೊಡ್ಡ ಯೋಜನೆಯೊಂದನ್ನು ರೂಪಿಸಿದ್ದರು. ಅವರ ಆ ಅಭಿಪ್ರಾಯವನ್ನು ಬರೆದು ಮುದ್ರಿಸಿ ರಹಸ್ಯವಾಗಿ ಅದನ್ನು ತಮ್ಮ ಆಪ್ತೇಷ್ಟರಲ್ಲಿ ಹಂಚಿದರು. ಈ ಯೋಜನೆಯ ಪ್ರಕಾರ, ಈ ದೇಶದ ಬಿಡುಗಡೆ ಆಗಬೇಕಾದರೆ ಸನ್ಯಾಸಿಗಳಂಥ ನಿಸ್ವಾರ್ಥ ದೇಶ ಸೇವಕರು ಬೇಕು. ಹೆಂಡತಿ ಮಕ್ಕಳು ಮನೆ ಮಠ ಎಲ್ಲವನ್ನೂ ಬಿಟ್ಟು ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧರಾದ ಜನ ಬೇಕು. ಅವರು ಸನ್ಯಾಸಿಗಳಂತೆ ಜೀವಿಸುವವರಾಗಬೇಕು. ಸನ್ಯಾಸಿಗಳೆಂದಮೇಲೆ ಒಬ್ಬ ಆರಾಧ್ಯ ದೇವತೆ ಬೇಕಲ್ಲವೇ? ಶ್ರೀ ಅರವಿಂದರು ಸಾರಿದರು: "ಭರತ ಮಾತೆಯೇ ಆ ಆರಾಧ್ಯ ದೇವತೆ. ಆಕೆಯೇ ನಮ್ಮ ಭವಾನಿ" ಎಂದು. ಭಾರತದೇಶದ ಕೇಂದ್ರ ಸ್ಥಳವಲ್ಲಿ ಒಂದು ಗುಪ್ತ ಮಂದಿರ

ವನ್ನು ಸ್ಥಾಪಿಸುವುದು; ಆ ಮಂದಿರದ ನೆಪದಿಂದ ಸನ್ಯಾಸಿಗಳ ಸೋಗಿನ ದೇಶಭಕ್ತರನ್ನು ಸೇರಿಸುವುದು; ಸಾಕಷ್ಟು ಸಂಖ್ಯೆ ಬೆಳೆದು ಶಕ್ತಿ ಸಂಪಾದನೆ ಆದಮೇಲೆ ಸಶಸ್ತ್ರ ಬಂಡಾಯ ಏಳುವುದು. ....ಹೀಗೆಲ್ಲ ಒಂದು ಯೋಜನೆಯನ್ನು ರೂಪಿಸಿದರು.

ಶ್ರೀ ಅರವಿಂದರ ಈ ಯೋಜನೆ ಬರೀ ಕಾಗದದ ಮೇಲಿಂದ ಉಳಿಯಲಿಲ್ಲ. ಅವರ ತಮ್ಮ ಬಾರೀಂದ್ರ ಘೋಷ್ ಬರೋಡೆಗೆ ಬಂದು ಅವರ ಸಲಹೆಯನ್ನು ಬೇಡಿದ. ಅವರು, ತಮ್ಮ ಅಭಿಪ್ರಾಯವನ್ನು ಅವನ ಮುಂದಿಟ್ಟರು. ಬಾರೀಂದ್ರ ತಲೆಮಾಸಿದ **ಹೋರಾಟಗಾರ!** ಅವನಿಗೆ ಭಯ ಎಂಬುದು ಇರಲೇ ಇಲ್ಲ. ಅಣ್ಣನ ಈ ಸಲಹೆಯನ್ನು ಕಾರ್ಯಗತಮಾಡಲು. ಒಂದು ಗುಪ್ತ ಸ್ಥಳವನ್ನು ಗೊತ್ತು ಹಚ್ಚಲು ವಿಂಧ್ಯಾ ಪರ್ವತಕ್ಕೆ ನಡೆದೇಬಿಟ್ಟ. ಅಲ್ಲಿ ಕೆಲವಾರು ತಿಂಗಳ ಕಳೆದು ಕೊನೆಗೂ ಯಾವುದೊ ಒಂದು ಸ್ಥಳವನ್ನು ನಿಗದಿಮಾಡಿದ. ಆ ಪರ್ವತಾರಣ್ಯಗಳಲ್ಲಿ ಅಲೆದಾಡಿ ವಾಪಸು ಬಂದಮೇಲೆ ಅವನಿಗೆ ಒಂದು ಬಗೆಯ ವಿಚಿತ್ರವಾದ ಜ್ವರ ಅಂಟಿಕೊಂಡಿತು. ಏನು ಮಾಡಿದರೂ ಆ ಸುಡುಗಾಡು ಜ್ವರ ಬಿಡಲೆ ಇಲ್ಲ. ಆ ಜ್ವರದಿಂದಲೆ ಸತ್ತು ಹೋಗುತ್ತಾನೊ ಎಂಬ ಶಂಕೆ ಮೂಡಿತು. ಆಗ ಬರೋಡೆಗೆ ಒಬ್ಬ ನಾಗಾ ಸನ್ಯಾಸಿ ಬಂದ. ಅವನಿಗೆ ಈ ವಿಚಿತ್ರ ರುಜೆ ಏನೆಂದು ತೋರಿಸಿದರು. ಆ ಸನ್ಯಾಸಿ ಒಂದು ಗಾಜಿನ ಲೋಟದಲ್ಲಿ ನೀರನ್ನು ಮಂತ್ರಿಸಿ, ಬಾರೀಂದ್ರನಿಗೆ ಕುಡಿಸಿದ. ಆಶ್ಚರ್ಯದ ಮಾತೆಂದರೆ ಆ ಜ್ವರ ಮರುದಿನವೇ ಬಿಟ್ಟು ಹೋಯಿತು! ಶ್ರೀ ಅರವಿಂದರಿಗೆ ಇದನ್ನು ನೋಡಿ ಪರಮಾಶ್ಚರ್ಯವಾಯಿತು. ಅಂದೂ, ಯಾವುದೋ ಒಂದು ಅತೀತ ಶಕ್ತಿಯೊಂದಿದೆ. ಅದನ್ನು

ವಶಪಡಿಸಿಕೊಂಡರೆ ಎಂಥ ಕಷ್ಟದ ಕೆಲಸವನ್ನಾದರೂ ಮಾಡಬಹುದು — ಎಂಬುದು ಪ್ರತ್ಯಕ್ಷವಾಗಿ ಕಣ್ಣಾರೆ ಕಂಡರು. ಅಲ್ಲಿಂದ ಅವರು ತೀರ್ಮಾನಿಸಿದರು: "ಆಧ್ಯಾತ್ಮಿಕ ವಿದ್ಯೆಯನ್ನು ಕೈವಶಮಾಡಿಕೊಂಡರೆ ಅಲೌಕಿಕ ಅತೀತ ಶಕ್ತಿಗಳು ಸಿದ್ಧಿಸುತ್ತವೆ. ಆ ಸಿದ್ಧಿಗಳನ್ನು ನನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಏಕೆ ಪ್ರಯೋಗಿಸಬಾರದು?" ಎಂದು ಭಾವಿಸಿದರು. ಈ ಯೋಚನೆ ಬಂದದ್ದೇ ತಡ—ಅದರಂತೆ ಆಚರಿಸತೊಡಗಿದರು. ಆಧ್ಯಾತ್ಮಿಕ ವಿದ್ಯೆಯನ್ನು ರಾಜಯೋಗದಿಂದ ಸಾಧಿಸಬಹುದೆಂದು ಅವರಿಗೆ ಗೊತ್ತಿತ್ತು. ರಾಜಯೋಗ ಮಾರ್ಗದ ಪ್ರಥಮ ಹೆಜ್ಜೆ ಪ್ರಾಣಾಯಾಮ. ಅಂದಮೇಲೆ ಶ್ರೀ ಅರವಿಂದರು ದಿನಂಪ್ರತಿ ಪ್ರಾಣಾಯಾಮ ಮಾಡಲು ಪ್ರಾರಂಭಿಸಿದರು. ದಿನಕ್ಕೆ ಒಂದೆರಡು ಘಂಟೆಗಳ ಕಾಲ ಪ್ರಾಣಾಯಾಮದಲ್ಲಿ ಕಳೆಯುತ್ತಿದ್ದರು. ಅದರ ಶೀಘ್ರಶುಭ ಫಲಗಳನ್ನು ಕುರಿತು ಶ್ರೀ ಅರವಿಂದರೆ ಹೀಗೆ ಹೇಳಿದ್ದಾರೆ:

"ನನ್ನ ಮೆದುಳು ಪ್ರಕಾಶಮಾನವಾಗ ತೊಡಗಿತು. ನೆನಪಿನ ಶಕ್ತಿ ಅಗಾಧವಾಯಿತು. ಯಾವುದನ್ನು ನೆನಪಿಟ್ಟುಕೊಳ್ಳಲು ಕಷ್ಟವಾಗಿತ್ತೋ, ಅದಕ್ಕಾಗಿ ತುಂಬ ಶ್ರಮಪಡಬೇಕಾಗಿತ್ತೋ ಅದನ್ನು ಸುಲಭವಾಗಿ ನೆನೆಯಲು ಸಾಧ್ಯವಾಯಿತು. ನನ್ನ ಕಾವ್ಯಶಕ್ತಿಯೂ ಅತ್ಯದ್ಭುತವಾಗಿ ಬೆಳೆಯಿತು. ದಿನಕ್ಕೆ ಹತ್ತಿಪ್ಪತ್ತು ಸಾಲುಗಳಷ್ಟು ಕವಿತೆಯನ್ನು ಮೊದಲು ಬರೆಯುತ್ತಿದ್ದೆ. ಯೋಗಾಭ್ಯಾಸಕ್ಕೆ ತೊಡಗಿದ ಮೇಲೆ ದಿನಕ್ಕೆ ನೂರಾರು ಸಾಲು ಕವಿತೆಯನ್ನು ಸರಾಗವಾಗಿ ಬರೆಯುವ ಸಾಮರ್ಥ್ಯ ಬಂತು. ಹೃದಯದಲ್ಲಿ ಶಾಂತಿ ನೆಲೆಸಿತು. ಮುಂದಾಗುವುದನ್ನು ಕಾಣುವ ಭವಿಷತ್ ಜ್ಞಾನವುಂಟಾಯಿತು. ಒಮ್ಮೆ ಬರೋಡೆಯಲ್ಲಿ ಕುದುರೆಗಾಡಿಯಲ್ಲಿ ಹೋಗು

ತ್ತಿದ್ದಾಗ. ಅಪಘಾತ ಸಂಭವಿಸಬಹುದೆಂದು ನನಗೆ ಗೊತ್ತಾಯಿತು. ಅದನ್ನು ತಪ್ಪಿಸಿದೆ ....”

ಯೋಗಾಭ್ಯಾಸ ಮಾಡುವುದರಿಂದ ಅಲೌಕಿಕ, ಅತೀತ ಶಕ್ತಿಗಳು ಕೈವಶವಾಗುತ್ತವೆ ಎಂದು ಕೇಳಿದ್ದು, ತಿಳಿದದ್ದು ವಾಸ್ತವವಾಗಿದ್ದನ್ನು ಶ್ರೀ ಅರವಿಂದರು ಅನುಭವಿಸಿದರು. ಅವರಂತೆಯೇ ನಾವು ನೀವು ಯಾರು ಬೇಕಾದರೂ ಮಾಡಿ ಆ ಅಲೌಕಿಕ ಶಕ್ತಿಗಳನ್ನು ಪಡೆಯಬಹುದೆಂಬುದರಲ್ಲಿ ಸಂದೇಹವೇನಿದೆ?

ಶ್ರೀ ಅರವಿಂದರು ತಮಗೆ ತಾವೆ ಯೋಗಾಭ್ಯಾಸವನ್ನು ಪ್ರಾರಂಭಿಸಿದ ಮೇಲೆ, ತಾವು ಮಾಡುತ್ತಿದ್ದ ರೀತಿ ಪದ್ಧತಿ ಸರಿಯೇ ತಪ್ಪೆ ಎಂಬುವನ್ನು ದೃಢಪಡಿಸಿಕೊಳ್ಳಲು. ಸಾಧ್ಯವಾದರೆ ಸರಿಯಾದ ದಾರಿತಿಳಿಯಲು ಬಲ್ಲವರೊಬ್ಬರನ್ನು ಕೇಳಿ ತಿಳಿಯುವ ಕುತೂಹಲವುಂಟಾಗಿ. ಬಾರೀಂದ್ರನಿಗೆ ತಮ್ಮ ಇಚ್ಛೆಯನ್ನು ತಿಳಿಸಿದರು. ಅವನು, ಲೇಲೆ ಎಂಬ ಒಬ್ಬ ಸಾಧಕರ ಪರಿಚಯಮಾಡಿಕೊಂಡು ಅವರನ್ನು ಶ್ರೀ ಅರವಿಂದರಿಗೆ ಭೇಟಿ ಮಾಡಿಸಿದ. ಆ ಲೇಲೆ ಎಂಬ ಮಹಾಶಯರು ಶ್ರೀ ಅರವಿಂದರು ಅಲ್ಲಿಯವರೆಗೆ ಅನುಸರಿಸಿದ ಮಾರ್ಗವನ್ನು ತಿಳಿದುಕೊಂಡು, ಸರಿಯಾದ ಮಾರ್ಗದಲ್ಲೆ ಮುಂದುವರಿಯುತ್ತಿದ್ದಾರೆಂದು ದೃಢಪಡಿಸಿದರು. ಹಾಗೂ ಶ್ರೀ ಅರವಿಂದರನ್ನು ಒಂದು ಕೊಠಡಿಗೆ ಕರೆದೊಯ್ದು ತಮ್ಮೆದುರಿಗೆ ಕೂಡಿಸಿಕೊಂಡು:

“ಮನವನ್ನೆಲ್ಲ ಬರಿದು ಮಾಡಿಬಿಡಿ. ಮನದಲ್ಲೇಳುವ ಆಲೋಚನೆಗಳನ್ನೆಲ್ಲಾ ಹೊರಗೆ ತಳ್ಳಿಬಿಡಿ”

—ಎಂಬುದಾಗಿ ಹೇಳಿದರು. ಶ್ರೀ ಅರವಿಂದರು ಅವರ ಸೂಚನೆಯಂತೆಯೇ ಮಾಡಿದರು. ಅದರ ಪರಿಣಾಮವೇನಾಯಿತೆಂಬುದನ್ನು ಶ್ರೀ ಅರವಿಂದರೆ ಹೀಗೆ ಹೇಳುತ್ತಾರೆ:

"ನನ್ನ ಮನಸ್ಸು ಸುಮ್ಮನೆ ಬರಿದಾಗಿ ಹೋಯಿತು. ಮನದಲ್ಲೇಳುವ ಭಾವನೆಗಳು ಹೊರಗಿನಿಂದ ಒಳನುಗ್ಗುವ ಯಾವುದೊ ಅನ್ಯವಸ್ತು ಎಂಬಂಥ ಅನುಭವವಾಗತೊಡಗಿತು. ಒಂದು ಅವರ್ಣನೀಯ ಶಾಂತಿ ನನ್ನ ಮನವನ್ನು ಆವರಿಸಿತು."

ಹೀಗೆ ಶ್ರೀ ಅರವಿಂದರು, ರಾಜಕೀಯ ಬಾಗಿಲಿನಿಂದ ಆಧ್ಯಾತ್ಮಿಕ ಮಂದಿರದ ಪ್ರವೇಶಮಾಡಿ ತಮ್ಮ ಹೃದಯ ಗರ್ಭಗುಡಿಯಲ್ಲಿ ಸದಾ ನೆಲೆಸಿರುವ ಆ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದರು. ಅವರೊಮ್ಮೆ ನರ್ಮದಾ ನದಿಯ ತೀರಕ್ಕೆ ಹೋದಾಗ ಅವರಿಗೆ ತಾಯಿ ದುರ್ಗೆ ಅಥವಾ ಭವಾನಿ, ಅಥವಾ ಕಾಳೀಮಾತೆಯ ಸ್ವರೂಪ ಪ್ರತ್ಯಕ್ಷವಾಯಿತಂತೆ! ಇನ್ನೊಮ್ಮೆ ಮಹಾರಾಜರೊಡನೆ ಕಾಶ್ಮೀರಕ್ಕೆ ಹೋಗಿದ್ದಾಗ, ಶಂಕರಾಚಾರ್ಯರ ಬೆಟ್ಟದ ಮುಂದೆ ನಿಂತಾಗ ಅವರಿಗೆ ನಿರ್ವಿಕಲ್ಪ ಸಮಾಧಿ ಉಂಟಾಯಿತಂತೆ !!

ರಾಜಕೀಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿಕೊಂಡ ಅವರ ಈ ನಿಲುವು, ಅವರ ಇಡೀ ಆಧ್ಯಾತ್ಮಿಕ ದರ್ಶನ, ಯೋಗ ಪದ್ಧತಿಗೆ ಅನುಗುಣವಾಗಿಯೆ ಇದೆ. ದೈವದ ಸಾಕ್ಷಾತ್ಕಾರ ಪಡೆದಮಾತ್ರಕ್ಕೆ ಇಹದ ಸಂಬಂಧವನ್ನು ತೊರೆಯಬೇಕಾಗಿಲ್ಲ ಎಂಬುದು ಅವರ ಆಧ್ಯಾತ್ಮಿಕ ದೃಷ್ಟಿಯ ತಳಹದಿ. ತದ್ವಿರುದ್ಧವಾಗಿ ದೈವಸಾಕ್ಷಾತ್ಕಾರ ಪಡೆದು, ಅದರಿಂದ ಹೊಂದಿದ ಅತಿಮಾನಸ, ಚೇತನದಿಂದಲೆ ಈ ಇಹಲೋಕದಲ್ಲಿ (ಚೇತನ) ಅತಿಮಾನಸ ಬಾಳನ್ನು ಬಾಳಬೇಕು. ಈ ಅವರ ಅಭಿಪ್ರಾಯಕ್ಕೆ ಅನುಗುಣವಾಗಿಯೆ ಅವರು ಇಹ-ಪರಗಳ ಸಮನ್ವಯ ಸಿದ್ಧಾಂತವನ್ನು ಲೋಕದ ಮುಂದೆ ಚಿತ್ರಿಸಿದರು. ಇದೇ ಕಾರಣದಿಂದಲೆ ಅವರು ರಾಜಕೀಯ ಚಳವಳಿಯನ್ನು ಕೈಬಿಡದೆ ಭವಾನಿ ಮಂದಿರದ ಕಾ

ಇದೇ ಕಾಲಾವಧಿಯಲ್ಲಿ ಅವರು ಬಂಗಾಳದಿಂದ ಬಂದಿದ್ದ ಕೆಲವು ಯುವಕರನ್ನು (ಜತೀಂದ್ರನಾಥ್ ಅವರಲ್ಲಿ ಪ್ರಮುಖರು) ಬರೋಡಾ ಸೈನ್ಯದಲ್ಲಿ ಸೈನ್ಯ ಶಿಕ್ಷಣ ಕಲಿಯಲು ಸೇರಿಸಿದರು. ಮಾಧವ ಜಾಧವ ಎಂಬ ಯುವಕನನ್ನು ಯೂರೋಪಿಗೆ ಕಳುಹಿಸಿ ಮದ್ದು ಗುಂಡು ಬಂದೂಕುಗಳನ್ನು ರಹಸ್ಯವಾಗಿ ಕೊಂಡು ತರುವ ವ್ಯವಸ್ಥೆ ಮಾಡಿದರು. ಸರ್ಕಾರಿ ನೌಕರರನ್ನೂ 'ಭವಾನಿಮಂದಿರ'ಕ್ಕೆ ಸೇರಿಸಿಕೊಂಡರು. ಅಂಥವರಲ್ಲಿ ಢಾಕಾ ಕಲೆಕ್ಟರ್ ಆಗಿದ್ದ ಚಾರುಚಂದ್ರ ದತ್ ಎಂಬ ಐ.ಸಿ.ಎಸ್. ಅಧಿಕಾರಿಯೂ ಒಬ್ಬರು. ಅದೇ ಕಾಲಾವಧಿಯಲ್ಲಿ ಬಾಲಗಂಗಾಧರ ತಿಲಕರ ನಿಕಟ ಪರಿಚಯ ಮಾಡಿಕೊಂಡರು. ಸೋದರಿ ನಿವೇದಿತಳೊಂದಿಗೆ ಒಮ್ಮೆ ಬರೋಡದಲ್ಲಿ ವಿಚಾರ ವಿನಿಮಯ ಮಾಡಿದರು.

ಇಷ್ಟೇ ಅಲ್ಲದೆ. ಬಂಗಾಳದಲ್ಲಿ ನಡೆಯುತ್ತಿದ್ದ ರಾಜಕೀಯ ಆಂದೋಳನಕ್ಕೆ ಶ್ರೀ ಅರವಿಂದರು ಮಾರ್ಗದರ್ಶನ. ಪ್ರೋತ್ಸಾಹ ಕೊಡುತ್ತಿದ್ದರು. ಬಂಗಾಳದಲ್ಲಿ ಅನೇಕ ರಾಜಕೀಯ ಪಕ್ಷಗಳು ಹುಟ್ಟಿಕೊಂಡು. ಒಂದೊಂದೂ ತಮ್ಮ ತಮ್ಮ ರೀತಿಯಲ್ಲೇ ಕಾರ್ಯಪ್ರವೃತ್ತವಾಗಿದ್ದುವು. ಶ್ರೀ ಅರವಿಂದರು ಇವುಗಳನ್ನೆಲ್ಲಾ ಕೇಂದ್ರೀಕರಿಸಿ. ಬಾರೀಂದ್ರ ಮತ್ತು ಮಿತ್ತರ್ ಎಂಬ ಇನ್ನೊಬ್ಬ ಯುವಕರ ಮುಖಂಡತ್ವದಲ್ಲಿ ಕೆಲಸಮಾಡುವಂತೆ ಏರ್ಪಡಿಸಿದರು. "ಪಲ್ಲಿ ಸಮಿತಿ" ಎಂಬ ಹಳ್ಳಿಗಳ ಸಮಿತಿಗಳನ್ನು ರಚಿಸಿ. ರಾಜಕೀಯ. ಸಾಮಾಜಿಕ. ಆರ್ಥಿಕ ಸ್ವಸಂಪೂರ್ಣತೆಯನ್ನು ಸಾಧಿಸಿಕೊಳ್ಳುವ ಏರ್ಪಾಟು ಮಾಡಿದರು.

ಇಷ್ಟೆಲ್ಲ ರಾಜಕೀಯ ಆಂದೋಳನದಲ್ಲಿದ್ದರೂ ಮೇಲಿನ ನೋಟಕ್ಕೆ ಅವರು ಕೇವಲ ಶುದ್ಧ ಸಾತ್ವಿಕ. ಸೌಮ್ಯ ನಡವಳಿಕೆಯ. ಶಿಕ್ಷಣವೇತ್ತರು. ಘನವಿದ್ವಾಂಸರು ಎಂಬ ಭಾವನೆ ದೊಡ್ಡ ದೊಡ್ಡ ಸರ್ಕಾರಿ

ನೌಕರರ ನಂಬುಗೆ ಆಗಿದ್ದು. ಆಗ ಬರೋಡೆಯ ಅಸಿಸ್ಟೆಂಟ್ ಪೋಲೀಸ್ ಕಮಿಷನರ್ ಆಗಿದ್ದ ಪುದುಕೋಟೆಯ ಡಿ.ಕೃಷ್ಣಸ್ವಾಮಿ ಅಯ್ಯರ್ ಅವರ ಈ ರೀತಿ ಹೇಳುತ್ತಿದ್ದರು:

"1898 ರಿಂದ 1900 ರವರೆಗೆ ಮೂರು ವರ್ಷ ನಾನು ಬರೋಡ ಅಸಿಸ್ಟೆಂಟ್ ಪೋಲೀಸ್ ಕಮಿಷನರ್ ಆಗಿದ್ದಾಗ ಶ್ರೀ ಅರವಿಂದರನ್ನು ಆಗಾಗ ನೋಡಿದ್ದೆ. ಅವರ ಹೆಸರೂ ಕೇಳಿದ್ದೆ. ಅವರನ್ನು ನೋಡಿದರೆ ಸರಳ, ಸೌಮ್ಯ, ಮುಗ್ಧ ಸ್ವಭಾವದವರೆಂದು ಎದ್ದು ಕಾಣುತ್ತಿತ್ತು. ಅವರು ಬುಡಮೇಲು ಕೃತ್ಯವಲ್ಲಿ ತೊಡಗುವಂಥ ಜ್ವಾಲಾಮುಖಿಯಾಗಿ ಕಾಣುತ್ತಲೇ ಇರಲಿಲ್ಲ. ಅವರು ಮುಂದೆ ಕ್ರಾಂತಿಕಾರೀ ರಾಜಕೀಯ ಮುಖಂಡರೆಂದು ಅಲೀಪುರದ ಬಾಂಬ್ ಕೇಸಿನಲ್ಲಿ ಮೊಕದ್ದಮೆ ಹಾಕಿದಾಗ, ಅದನ್ನು ನಂಬುವುದೆ ಕಷ್ಟವಾಯಿತು. ಅವರು ರಾಜಕೀಯ ಮುಖಂಡರೊಡನೆ ಸಹವಾಸ ಮಾಡಿದ್ದರಿಂದ ಅವರ ಮೇಲೆ ಸಂದೇಹ ಬಂದು ಇಂಥ ಹೀನವಾದ ಕೇಸು ಹಾಕಿರಬಹುದೆಂದು ನಾನು ಭಾವಿಸಿದೆ"

---

* ಶ್ರೀ ಕೃಷ್ಣಸ್ವಾಮಿ ಅಯ್ಯರ್ ಅವರು ಮೊದಲು ಬರೋಡಾದ ದಿವಾನರಾಗಿದ್ದ ಶ್ರೀ ವಿಜಯರಾಘವ ಅಯ್ಯಂಗಾರ್ ಅವರ ಆಪ್ತ ಕಾರ್ಯದರ್ಶಿ ಆಗಿ ಹೋದರು. ಆಮೇಲೆ ಬರೋಡಾ ಅ ಪೋಲಿಸ್ ಕಮಿಷನರ್ ಆಗಿ 1848 ರಿಂದ 1900 ರವರೆಗೆ ಕೆಲಸ ಮಾಡಿದರು. ಅವರ ಮಕ್ಕಳಾದ ಶ್ರೀ ಕೆ. ನಾಗರಾಜನ್ (80) ಅವರು ಪುದುಕೋಟೆಯಲ್ಲಿ ಈಗಲೂ ವಕೀಲರಾಗಿದ್ದಾರೆ. ಅವರನ್ನು ಈ ಲೇಖಕ ಇಪ್ಪತ್ತೈದು ವರ್ಷಗಳಿಂದ ಬಲ್ಲ. ನಾನು ಪಾಂಡಿಚೇರಿಗೆ ಹೋಗಿ ಬರುವ ಆಸಕ್ತಿಯನ್ನು ನೋಡಿ ಅವರೆ ಈ ವಿಚಾರ ತಿಳಿಸಿದರು

ಹೀಗೆ ಅವರು ಮೇಲುನೋಟಕ್ಕೆ ಬಹು ಸೌಮ್ಯ, ಸಾಧು ವ್ಯಕ್ತಿಯಾಗಿ ತೋರಿದರೂ ಅಂತರಂಗದಲ್ಲಿ ಬಹು ಕ್ರಾಂತಿಕಾರಿಯಾಗಿ ಅಪಾಯಕಾರಿಯಾದ ರಾಜಕೀಯ ಚಟುವಟಿಕೆಯಲ್ಲಿ ತೊಡಗಿದ್ದರು. ಈ ಅಭಿಪ್ರಾಯ ನೂರಕ್ಕೆ ನೂರರಷ್ಟು ನಿಜ ಎಂಬುದಕ್ಕೆ ಇಂಗ್ಲೆಂಡಿನಲ್ಲಿ ಸರ್ವೀಸ್ ಕಮಿಷನ್ ವಶದಲ್ಲಿದ್ದ ಪುರಾವೆಗಳು, ಮುಂದೆ ಅವರು ಬಂಗಾಳದಲ್ಲಿ ಕೈಕೊಂಡ ಪ್ರಚಂಡ ಬಿರುಗಾಳಿಯಂಥ ರಾಜಕೀಯ ಚಟುವಟಿಕೆಗಳೆ ಆಧಾರ.

ಹೀಗಿರುತ್ತಿರಲಾಗಿ, 1905 ರಲ್ಲಿ ಲಾರ್ಡ್‌ಕರ್ಝನ್ ಬಂಗಾಳ ಪ್ರಾಂತ್ಯವನ್ನು ಪೂರ್ವ ಪಶ್ಚಿಮ ಎಂದು ವಿಭಜಿಸಿ ಎರಡು ಪ್ರಾಂತ್ಯಗಳನ್ನಾಗಿ ಮಾಡಲು ಶಾಸನ ಮಂಜೂರು ಮಾಡಿಸಿದರು. ಅವರ ಉದ್ದೇಶ ರಾಷ್ಟ್ರೀಯ ಚಳುವಳಿಯ ಬಲವನ್ನು ಕುಂದಿಸುವುದೆ ಆಗಿತ್ತು. ಪೂರ್ವಬಂಗಾಳದಲ್ಲಿ ಮುಸ್ಲಿಂ ಜನರೆ ಬಹು ಸಂಖ್ಯೆಯಲ್ಲಿದ್ದರು. ಅಲ್ಲಿಂದಲೆ ಬಹುತೇಕ ರಾಷ್ಟ್ರೀಯಮುಖಂಡರು ಹುಟ್ಟಿಬಂದಿದ್ದರು. ಆ ಪೂರ್ವ ಬಂಗಾಳವನ್ನು ಪ್ರತ್ಯೇಕಪಡಿಸಿದರೆ ಈ ಚಳವಳಿಯ ಬೆನ್ನೆಲಬು ಮುರಿದಂತಾಗುತ್ತದೆ ಎಂದು ಈ ಮಸಲತ್ತು ಮಾಡಿದರು. ಆದರೆ ಇಡೀ ಬಂಗಾಳ ಪ್ರಾಂತ, ಉತ್ತರಭಾರತದ ಕೆಲವು ಪ್ರಾಂತಗಳಲ್ಲಿ ವಂಗಭಂಗ ವಿರೋಧಕ್ಕಾಗಿ ಭಯಂಕರವಾದ ಆಂದೋಳನವನ್ನು ಎಬ್ಬಿಸಿದರು. ಶ್ರೀ ಅರವಿಂದರು ಆ ಚಳುವಳಿಯಲ್ಲಿ ಭಾಗವಹಿಸಲು ತವಕಿಸುತ್ತಿದ್ದರು. ಈ ಉದ್ದೇಶಕ್ಕಾಗಿ ಶ್ರೀ ಅರವಿಂದರು 1906ರ ಮಧ್ಯದಲ್ಲಿ ಒಂದುವರ್ಷ ಸಂಬಳವಿಲ್ಲದೆ ರಜೆ ಪಡೆದು ಕಲ್ಕತ್ತೆಗೆ ಬಂದರು. ಅವರು ಕಲ್ಕತ್ತೆಯಲ್ಲಿದ್ದಾಗ ರಾಜ ಸುಬೋಧ ಮಲ್ಲಿಕ್ ಎಂಬ ಆಗರ್ಭ ಶ್ರೀಮಂತರು ಕಲ್ಕತ್ತೆಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸಿ ಅದಕ್ಕೆ ಶ್ರೀ ಅರವಿಂದರನ್ನು ಪ್ರಿನ್ಸಿಪಾಲರಾಗಿ ನೇಮಕ ಮಾಡಿ

ದರು. ಈ ಕಾರಣದಿಂದ ಶ್ರೀ ಅರವಿಂದರು ಬರೋಡಾ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆಗೆ ರಾಜೀನಾಮೆ ಕೊಟ್ಟು ಕಲ್ಕತ್ತೆಯಲ್ಲಿ ನಿಂತರು.

೭ ಸೆರೆಮನೆಯೋ ಗುರುಮನೆಯಾಯಿತು

ಶ್ರೀ ಅರವಿಂದರು ಕಲ್ಕತ್ತೆಗೆ ಬಂದಾಗ ಅವರ ತಮ್ಮ ಬಾರೀಂದ್ರ ಕುಮಾರ "ಯುಗಾಂತರ" ಎಂಬ ಪತ್ರಿಕೆಯನ್ನು ನಡೆಸುತ್ತಿದ್ದ. ಅದರಲ್ಲಿ ಶ್ರೀ ಅರವಿಂದರು ಗುಪ್ತನಾಮಾಂಕಿತದಿಂದ ಲೇಖನಗಳನ್ನು ಬರೆಯುತ್ತಿದ್ದರು. ಅದೇ ವರ್ಷ ಆಗಸ್ಟ್ 6 ರಂದು ಬಿಪಿನ ಚಂದ್ರ ಪಾಲರು "ವಂದೇಮಾತರಂ" ಎಂಬ ದೈನಿಕ ಆಂಗ್ಲ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಶ್ರೀ ಅರವಿಂದರನ್ನು ನೆರವು ನೀಡಬೇಕೆಂದು ಕೇಳಿದರು. ಶ್ರೀ ಅರವಿಂದರಿಗೆ ಸುವರ್ಣಾವಕಾಶ ಸಿಕ್ಕಿತು. ಈ ಎರಡೂ ಪತ್ರಿಕೆಗಳಲ್ಲಿ ತಮ್ಮ ರಾಜಕೀಯ-ಸಾಮಾಜಿಕ ಅಭಿಪ್ರಾಯಗಳನ್ನು ಪ್ರಚಾರ ಮಾಡತೊಡಗಿದರು. ಜನತೆಯಲ್ಲಿ ವಂಗಭಂಗ ವಿರೋಧದ ದಾವಾನಲ ಹೊತ್ತಿ ಉರಿಯುತ್ತಿತ್ತು. ಅದಕ್ಕೆ ಶ್ರೀ ಅರವಿಂದರ ಲೇಖನಗಳು ತುಪ್ಪವನ್ನು ಸುರಿದಂತಾಗಿ. ಉರಿಯುತ್ತಿದ್ದ ಜ್ವಾಲೆ ಧಗಧಗ ಹೊತ್ತಿಕೊಂಡು ನಭೋಮಂಡಲವನ್ನೆ ತಾಗುವಂತೆ ಹಬ್ಬತೊಡಗಿತ್ತು ! ಅವರ ತೀಕ್ಷ್ಣತೆಯನ್ನು ಈಗಿನ ಜನಗಳಿಗೆ ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ! ಅವರ ಕಾವ್ಯ. ಪ್ರಖರತೆಯನ್ನು ಅರಿಯುವಂಥ ಕಲ್ಪನಾಶಕ್ತಿಯೂ.. ಆಸಕ್ತಿಯೂ ಬಹುಜನರಿಗೆ ಈಗಿಲ್ಲ. ನಾವೆಷ್ಟೇ ಹೇಳಿದರೂ ಆ ಪ್ರಸಂಗದ ಉದ್ವೇಗದ ವ್ಯಾಪಕತೆ. ಪ್ರಖರತೆ. ಭೀಕರ ಪರಿಣಾಮಗಳನ್ನು ಊಹಿಸಿಕೊಳ್ಳುವುದೂ ಕಷ್ಟ. ಆದರೂ ಆ ಚಳವಳಿಯ ಸ್ವರೂಪದ ಸೂಕ್ಷ್ಮ ಪರಿಚಯ ಅಗತ್ಯವೆಂದು ಕಾಣುತ್ತದೆ.

"ವಂಗಭಂಗ ಶಾಸನ" ಮಂಜೂರಾಯಿತು ಅದರ ಜಾರಿಯಲ್ಲಿ

ಬಂದಿರಲಿಲ್ಲ. ಅದು ಜಾರಿಯಲ್ಲಿ ಬರಕೂಡದೆಂದು ಬಂಗಾಲದ ಜನತೆ ಬಂಡೆದ್ದಿತು! ಅಕ್ಷರಶಃ ಲಕ್ಷೋಪಲಕ್ಷ ಜನರು ಬೀದಿಯಲ್ಲಿ ಮೆರವಣಿಗೆ ತೆಗೆದು ವಂಗಭಂಗ ಕೂಡದೆಂದು ಘೋಷಣೆಗಳನ್ನು ಕೂಗಿ ಜನರ ಅತೃಪ್ತಿಯನ್ನು ಸಾರಿ ಹೇಳಿದರು. ಸಾವಿರಾರು ವೇದಿಕೆಗಳ ಮೇಲಿನಿಂದ ಲಕ್ಷೋಪಲಕ್ಷ ಜನರು ವಂಗಭಂಗವನ್ನು ವಿರೋಧಿಸಿ ಠರಾವುಗಳನ್ನು ಮಂಜೂರು ಮಾಡಿದರು. ಕಲ್ಕತ್ತೆಯಲ್ಲಿ ಲಕ್ಷೋಪಲಕ್ಷ ಜನರು ಸೇರಿ "ಐಕ್ಯ ವಂಗ" ಪ್ರಮಾಣ ವಚನವನ್ನು ಸ್ವೀಕರಿಸಿ, "ರಾಖೀಬಂಧನ" (ರಕ್ಷಣಾಬಂಧನ)ವನ್ನು ಧರಿಸಿದರು. "ಐಕ್ಯ ಬಂಗಾಳ" ಎಂಬ ಒಂದು ಬೃಹತ್ ಭವನವನ್ನು ನಿರ್ಮಿಸಲು ಸಾರ್ವಜನಿಕರು ಚಂದಾ ಹಣ ಎತ್ತಲು ಪ್ರಾರಂಭಿಸಿದರು. ಈ ಚಳವಳಿ ಯಾವ ಸ್ವರೂಪ ತಾಳಿತೆಂದರೆ ಹತ್ತು ವರ್ಷದ ಶಾಲಾ ಬಾಲಕ ಬಾಲಕಿಯರಿಂದ ಹಿಡಿದು, ಎಪ್ಪತ್ತು ಎಂಭತ್ತು ವರ್ಷದ ಮುಪ್ಪಿನ ಮುದುಕರ ವರೆಗೆ ಬಂಗಾಲದ ಜನತೆ ಬೀದಿಗಿಳಿದು ಚಳವಳಿಯಲ್ಲಿ ಪಾಲ್ಗೊಂಡರು. "ವಂದೇಮಾತರಂ" ಎಂಬ ಜಯ ಘೋಷದಿಂದ ಲಂಡನ್ನಿನ ಬ್ರಿಟಿಷ್ ಪಾರ್ಲಿಮೆಂಟಿನ ಬುನಾದಿಯೆ ಗಡಗಡ ನಡುಗುವಂತೆ ಮಾಡಿದರು !! ಎದೆಯೊಡೆದ ಪ್ರಭುತ್ವ "ವಂದೇಮಾತರಂ" ಘೋಷಣೆ ಮಾಡಕೂಡದೆಂದು ನಿಷೇಧಾಜ್ಞೆಯನ್ನು ಹೊರಡಿಸಿದರು. ಆ ನಿಷೇಧಾಜ್ಞೆಯನ್ನು ಉಲ್ಲಂಘಿಸುವುದೆ ಚಳವಳಿಯ ಸ್ವರೂಪ ತಾಳಿತು. ಹಿಂದೆ ಒಂದು ಬಾಯಿ ಕೂಗುತ್ತಿದ್ದ "ವಂದೇ ಮಾತರಂ" ಘೋಷಣೆಯನ್ನು ಆ ಮೇಲೆ ಸಾವಿರ ಸಾವಿರ ಬಾಯಿ ಕೂಗತೊಡಗಿದುವು. ಅದರಲ್ಲೂ ಶಾಲಾ ಬಾಲಕರಂತೂ ಜೀವನದ ಹಂಗು ತೊರೆದು ಈ ಚಳವಳಿಯಲ್ಲಿ ಧುಮ್ಮಿಕ್ಕಿದ್ದರು !!

ಚಳವಳಿ ಈ ಘೋರ ಪ್ರಸಂಗ ಹೊಂದಲು "ವಂದೇಮಾತರಂ" ಪತ್ರಿಕೆಯೆ ಕಾರಣವೆಂದು ಬಗೆದು ಅದನ್ನು, ಅದರ ಪ್ರಕಾಶಕರನ್ನು, ಸಂಪಾದಕರನ್ನು ರಾಜದ್ರೋಹದ ಅಪಾದನೆಗಾಗಿ ವಿಚಾರಣೆಗೆ ಗುರಿಪಡಿಸಿದರು. ನ್ಯಾಯಾಲಯದಲ್ಲಿ ಶ್ರೀ ಅರವಿಂದರ ವಿರುದ್ಧ ಕೇಸು ವಿಚಾರಣೆಗೆ ಆಗುತ್ತಿತ್ತು. ನ್ಯಾಯಾಲಯದ ಹೊರಗೆ, ಸಾವಿರಾರು ಬಾಲಕರು, ಯಾವ 'ವಂದೇಮಾತರಂ' ಘೋಷಣೆ ಮಾಡಬಾರದೆಂದು ನಿಷೇಧಿಸಿದ್ದರೊ ಅದೇ ಘೋಷಣೆಯನ್ನು ಸಾವಿರಾರು ಕಂಠಗಳ ಒಕ್ಕೊರಲಿನಿಂದ ಕೂಗತೊಡಗಿದರು. ಇದು ಪ್ರಭುತ್ವದ ಅಧಿಕಾರವನ್ನು ನೇರವಾಗಿ ಸಣ್ಣ ಸಣ್ಣ ಬಾಲಕರೇ ಆಹ್ವಾನಿಸುವಂಥಘೋರಕೃತ್ಯವಾಗಿ ಸರ್ಕಾರದ ಕಣ್ಣಿನಲ್ಲಿಕಾಣಿಸಿತು. ಆದ್ದರಿಂದ ಘೋಷಣೆ ಮಾಡುತ್ತಿದ್ದ ಬಾಲಕರ ಮೇಲೆ ಹಲ್ಲೆ ನಡೆಸಿದರು. ಮೊಕದ್ದಮೆ ಹಾಕಿದರು. ಈ ಬಾಲಕರ ಮೇಲಿನ ಮೊಕದ್ದಮೆಗಳನ್ನು ವಿಚಾರಿಸುತ್ತಿದ್ದ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕಿಂಗ್ಸ್ ಫೋರ್ಡ್ ಎಂಬುವವರು ಶಿಕ್ಷೆವಿಧಿಸುವುದರಲ್ಲಿ ತಾರತಮ್ಯ ಪರಿಜ್ಞಾನವೆ ಇಲ್ಲದಂತೆ ವರ್ತಿಸುತ್ತಿದ್ದರು. ಏಳೆಂಟು ಹತ್ತು ಹದಿನೈದರ ಬಾಲಕರಿಗೆ ಛಡೀ ಏಟಿನ ಶಿಕ್ಷೆಯನ್ನು ವಿಧಿಸುತ್ತಿದ್ದರು. ಛಡೀ ಏಟಿನ ಶಿಕ್ಷೆಯೆಂದರೆ ಉಟ್ಟಿದ್ದ ಬಟ್ಟೆಯನ್ನು ಬಿಚ್ಚಿಹಾಕಿ. ಕುಂಡೆ ಮೇಲೆ ಚಡಿಯೇಟು ಕೊಡುವುದು! ಹೊಡೆದಲ್ಲಿಗೆ ಹೊಡೆಯುವುದರಿಂದ ರಕ್ತ ಹೆಪ್ಪುಗಟ್ಟಿ. ಒಮ್ಮೊಮ್ಮೆ ಚರ್ಮ ಸುಲಿದು ರಕ್ತ ಹೊರಚಿಮ್ಮುತ್ತಿತ್ತು !! ಆದರೂ ವಿಧಿಸಿದ್ದಷ್ಟು ಏಟು ಕೊಡದೆ ಬಿಡುತ್ತಿರಲಿಲ್ಲ. ಕೈಕಾಲುಗಳನ್ನು ಕಟ್ಟಿ ಏಟು ಕೊಡುತ್ತಿದ್ದಾಗ ಮೂರ್ಛೆಹೋದದ್ದೂ ಉಂಟು! ಆದರೂ ಏಟುಗಳನ್ನು ಪೂರ್ಣಗೊಳಿಸಿಯೆ ಕೈಕಾಲು ಕಟ್ಟುಗಳನ್ನು ಬಿಚ್ಚು

ತ್ತಿದ್ದರು !! ಅಂದರೆ ಛಡೀ ಏಟಿನ ಶಿಕ್ಷೆಯೆಂದರೆ ಎಂಥಾದ್ದೆಂಬುದನ್ನು ಊಹಿಸಿಕೊಳ್ಳಬಹುದು!

ಇಂಥ ಛಡೀಏಟಿನ ಶಿಕ್ಷೆಗೆ ಒಳಗಾಗಿದ್ದ ಎಷ್ಟೋ ಶಾಲಾ ಬಾಲಕರಿದ್ದರು. ಪ್ರಫುಲ್ಲ ಛಾಕಿ ಮತ್ತು ಖುದಿರಾಂ ಬೋಸ್ ಎಂಬ ಇಬ್ಬರು ಹುಡುಗರಿದ್ದರು. ಅವರ ಹೃದಯದಲ್ಲಿ ಭಯಂಕರ ಸೇಡಿನ ಹೆಡೆ ಎದ್ದು ನಿಂತಿತು! ಆ ಪ್ರೆಸಿಡೆನ್ಸೀ ಮ್ಯಾಜಿಸ್ಟ್ರೇಟರ ಮೇಲೆ ಬಾಂಬೆಸೆದು ಪ್ರಾಣತೆಗೆಯಬೇಕೆಂದು ಹುಡುಗರಿಬ್ಬರೂ ಹೊಂಚು ಹಾಕಿದರು! ಕಿಂಗ್ಸ್ ಫೋರ್ಡ್ ಸಾಧಾರಣವಾಗಿ ಬರುತ್ತಿದ್ದ ಹೊತ್ತಿಗೆ ಸರಿಯಾಗಿ ಹೊಂಚುಹಾಕಿ ಕೊಂಡಿದ್ದು ಒಂದು ದಿನ ಈ ಇಬ್ಬರು ಬಾಲಕರು ಕೋಚ್ ಗಾಡಿಯ ಮೇಲೆ ಕೈಬಾಂಬು ಎಸೆದು ಓಡಿಹೋದರು. ದುರ್ದೈವವಶಾತ್ ಆ ಗಾಡಿಯಲ್ಲಿದ್ದವರು ಕಿಂಗ್ಸ್ ಫೋರ್ಡ್ ಆಗಿರಲಿಲ್ಲ. ಕೆನೆಡಿ ಎಂಬ ಆಂಗ್ಲ ಮನೆತನದ ಆಂಗ್ಲಮಹಿಳೆ ಬಾಂಬ್ ಸ್ಫೋಟದಿಂದ ಸ್ಥಳದಲ್ಲೇ ಪ್ರಾಣ ಬಿಟ್ಟಳು.

ಬಾಂಬ್ ಎಸೆದು ಓಡುತ್ತಿದ್ದ ಇಬ್ಬರನ್ನು ಪೋಲೀಸರು ಬೆನ್ನು ಹತ್ತಿದರು. ಖುದಿರಾಮ್ ಬೋಸ್ ಪೋಲೀಸರ ಕಣ್ಣು ತಪ್ಪಿಸಿ ಮಟನಾಯವಾಗಿ ಬಿಟ್ಟ. ದುರ್ದೈವದಿಂದ ಪ್ರಫುಲ್ಲ ಛಾಕಿ ಸಿಕ್ಕುಬಿದ್ದ. ತನ್ನನ್ನು ಚಿತ್ರಹಿಂಸೆಗೆ ಗುರಿಪಡಿಸಿ, ಮೆತ್ತಗೆಮಾಡಿ, ಅಪಮಾನಗೊಳಿಸಿ, ಬಾಯಿಬಿಡುವಂತೆ ಮಾಡಿ ತನ್ನಿಂದ ಏನಾದರೂ ಸುದ್ದಿಯನ್ನು ಪಡೆದಾರೆಂದು ಭಾವಿಸಿ ಛಾಕೀ ತನ್ನಲ್ಲಿದ್ದ ರಿವಲ್ವಾರಿನಿಂದ ತಲೆಗೆ ಗುಂಡಿಟ್ಟುಕೊಂಡು ಸತ್ತುಹೋದ! ! ಖುದಿರಾಮ ಆ ತರುವಾಯ ಎಲ್ಲಿಯೊ ಕೈಗೆ ಸಿಕ್ಕ. ಅವನನ್ನು ವಿಚಾರಣೆಗೆ ಗುರಿಪಡಿಸಿ ಮರಣದಂಡನೆ ವಿಧಿಸಿದರು ! "ವಂದೇ ಮಾತರಂ" ಎಂಬ ಮಂತ್ರೋಚ್ಚಾರ ಮಾಡುತ್ತಾ ವಧಾಸ್ತಂಭವನ್ನು ಹತ್ತಿನಿಂತ.

ಕೊತ್ತಿಗೆಗೆ ಉರುಳು ಸುತ್ತಿದಾಗಲೂ "ವಂದೇಮಾತರಂ" ಎಂದು ಘೋಷಿಸಿದ. ಪಟಿಗಾರ ನೇಣನ್ನು ಎಳೆದಾಗಲೂ ಖುದಿರಾಮ್ "ವಂದೇ ಮಾತರಂ" ಎಂದು ಜಪಿಸಿ ಅಮರನಾದ!!

ಒಂದುಕಡೆ ಕಿಂಗ್ಸ್‌ಫೋರ್ಡ್ ಹತ್ಯೆಗೆ ಈ ಇಬ್ಬರು ಹುಡುಗರು ಹೀಗೆ ಪ್ರಯತ್ನ ನಡೆಸುತ್ತಿದ್ದಾಗ ಅತ್ತ ಇನ್ನೊಂದು ಕಡೆ ದೊಡ್ಡವರು ಅಂದಿನ ಗವರ್ನರ್ ಅವರನ್ನು ಗುಂಡಿಕ್ಕಿ ಕೊಲ್ಲುವ ಪ್ರಯತ್ನ ಮಾಡುತ್ತಿದ್ದರು. ಗವರ್ನರ್ ಹತ್ಯೆಗೆ ಮೂರು ಬಾರಿ ಪ್ರಯತ್ನ ಮಾಡಿದರೂ ಒಂದೆರಡು ನಿಮಿಷಗಳಲ್ಲೇ ಗುರಿತಪ್ಪಿ ಎಸೆದ ಬಾಂಬಿಗೆ ಮತ್ತಾರೋ ತುತ್ತಾಗಿ ಆಪತ್ತಿ ಆಗುತ್ತಿದ್ದರು! ಇದರಿಂದಾಗಿ ಪ್ರಭುತ್ವ ತುಂಬಾ ಜಿಜ್ಞಾಸೆಗೆ ಈಡಾಯಿತು. ಉನ್ನತಾಧಿಕಾರಿಗಳ ಪ್ರಾಣ ರಕ್ಷಣೆಯ ಬಗ್ಗೆ ತುಂಬ ಕಳವಳ, ಹೆದರಿಕೆ ಉಂಟಾಯಿತು. ಭಯೋತ್ಪಾದಕ ಚಟುವಟಿಕೆಗಳ ಈ ಉಪದ್ರವವನ್ನು ಉಗ್ರವಾದ ಕ್ರಮದಿಂದಲೇ ದಮನಮಾಡಲು ಪ್ರಭುತ್ವ ನಿಶ್ಚಯಿಸಿತು. ಈ ನಿಶ್ಚಯಕ್ಕೆ ಅನುಗುಣವಾಗಿ ಕಲ್ಕತ್ತ, ಢಾಕಾ ಮುಂತಾದ ಶಹರಗಳಲ್ಲಿ ಗುಮಾನಿ ಸ್ಥಳಗಳಲ್ಲಿ ಏಕಕಾಲಕ್ಕೆ ವ್ಯಾಪಕವಾದ ಶೋಧನೆ ನಡೆಸಿದರು. ಬಾರೀಂದ್ರ ಕುಮಾರ್ ಘೋಷರ ವಶದಲ್ಲಿದ್ದ ಮಾಣಿಕ್ ತೊಲಾ ತೋಟದ ಮನೆಯಲ್ಲಿ ಅಪಾರವಾದ ಶಸ್ತ್ರಾಸ್ತ್ರಗಳು, ಮದ್ದು ಗುಂಡು, ಬಂದೂಕ ಮತ್ತು ರಿವಾಲ್ವರ್ ಮುಂತಾದ ಆಯುಧಗಳೂ, ಅನೇಕ ಕಾಗದ ಪತ್ರಗಳೂ ಪೋಲೀಸರ ಕೈಗೆ ಸಿಕ್ಕುವು. ಈ ಕಾರಣದ ನೆಪದಿಂದ ಶ್ರೀ ಅರವಿಂದರನ್ನು ಕೈದುಮಾಡಿದರು. ಬಾರೀಂದ್ರ ಕುಮಾರ್, ಜತೀಂದ್ರನಾಥ, ನಳಿನೀಕಾಂತ ಗುಪ್ತ ... ಮುಂತಾದ 34 ಜನರನ್ನು ಹಿಡಿದು ಅವರೆಲ್ಲರ ಮೇಲೆ ಕೇಸು ಹಾಕಿದರು. ಅವರಲ್ಲಿ 15 ಜನರನ್ನು ಮಾತ್ರ ಸೆಷನ್ಸ್ ವಿಚಾ

ರಣೆಗೆ ಗುರಿಪಡಿಸಿದರು. ಅವರಲ್ಲಿ ನರೇಂದ್ರನೆಂಬ ಒಬ್ಬ ಆರೋಪಿ ತಪ್ಪೊಪ್ಪಿಕೊಂಡು ಪ್ರಾಸಿಕ್ಯೂಷನ್ ಪರ ಸಾಕ್ಷಿಹೇಳಲು ಅಪ್ರೂವರ್ ಆಗಿಬಿಟ್ಟ. ಅವನು ಸಾಕ್ಷಿ ಹೇಳಿದರೆ ದೇಶದಲ್ಲಿ ನಡೆದಿದ್ದ ವಿಶಾಲವಾದ ಬಂಡಾಯದ ಕಥೆಯೆಲ್ಲ ಬಯಲಿಗೆ ಬೀಳುವುದರಲ್ಲಿ ಸಂಶಯವಿರಲಿಲ್ಲ. ಅವನ ಸಾಕ್ಷಿ ನುಡಿಯದಂತೆ ಮಾಡುವುದೊಂದೆ ಉಪಾಯವಾಗಿತ್ತು. ಆದಕಾರಣ, ಸತ್ಯೇಂದ್ರ ಮತ್ತು ಕನ್ನಯ್ಯಲಾಲ್ ಎಂಬ ಇಬ್ಬರು ಆ ನರೇಂದ್ರನನ್ನು ಸೆರೆಮನೆಯಲ್ಲೆ ಗುಂಡಿಕ್ಕಿ ಕೊಂದುಹಾಕಿದರು. ಅವರಿಬ್ಬರ ವಿಚಾರಣೆಯೂ ಆಗಿ ಅವರಿಗೆ ಮರಣದಂಡನೆ ಆಯಿತು.

ಉಳಿದವರ ಮೇಲೆ ವಿಚಾರಣೆ ಮುಂದುವರಿಯಿತು. ಒಟ್ಟು 126 ದಿನಗಳು ಸತತ ವಿಚಾರಣೆ ನಡೆಯಿತು. 777 ಜನ ಸಾಕ್ಷಿ ಹೇಳಿದರು. 4,000 ದಸ್ತಾವೇಜುಗಳನ್ನು 500 ಕೇಸಿಗೆ ಸಂಬಂಧಿಸಿದ ಬಾಂಬ್ ರಿವಾಲ್ವರ್ ಮದ್ದುಗುಂಡು ಮುಂತಾದ ಉಪಯುಕ್ತ ವಸ್ತುಗಳನ್ನೂ ಹಾಜರು ಮಾಡಲಾಯಿತು. ಸೆಷನ್ಸ್ ಕೋರ್ಟಿನಲ್ಲಿ ಶ್ರೀ ಅರವಿಂದರ ಪರ ವಕಾಲತ್ತು ವಹಿಸಿದ್ದ ದೇಶಬಂಧು ಚಿತ್ತರಂಜನ ದಾಸರು, ಸತತ ಒಂಬತ್ತು ದಿನ ವಾದಿಸಿದರು. 1909 ಮೇ 6 ರಂದು ಸೆಷನ್ಸ್ ಜಡ್ಜ್ ಬೀಚ್‌ಕ್ರಾಫ್ಟ್ ತಮ್ಮ ತೀರ್ಪು ಕೊಟ್ಟು ಶ್ರೀ ಅರವಿಂದರು ನಿರ್ದೋಷಿಗಳೆಂದು ಬಿಡುಗಡೆಮಾಡಿದರು. ಆದರೆ ಅವರ ತಮ್ಮ ಬಾರೀಂದ್ರ ಮತ್ತು ಉಲ್ಲಾಸ್ಕರ್ ದತ್ತ ಎಂಬಿಬ್ಬರಿಗೆ ಮರಣ ದಂಡನೆ ವಿಧಿಸಿದರು. ಸರ್ಕಾರ ಶ್ರೀ ಅರವಿಂದರ ಬಿಡುಗಡೆಯ ತೀರ್ಪಿನ ವಿರುದ್ಧ ಹೈಕೋರ್ಟಿಗೆ ಅಪೀಲು ಮಾಡಿಕೊಂಡಿತು. ಆ ಅಪೀಲನ್ನು ಚಿತ್ತರಂಜನ ದಾಸರು 48 ದಿನಗಳ ಕಾಲ ವಾದಮಾಡಿ ಕೊನೆಗೂ ಗೆದ್ದರು. ಬಾರೀಂದ್ರ ಮತ್ತು

ಉಲ್ಲಾಸ್ಕಾರ್ ಮೇಲೆ ವಿಧಿಸಿದ್ದ ಮರಣ ದಂಡನೆಯನ್ನು ತಪ್ಪಿಸಿ ಜೀವಾವಧಿ ಶಿಕ್ಷೆ ವಿಧಿಸಿದರು.

ಇಷ್ಟೆಲ್ಲ ಘನಘೋರ ವ್ಯಾಜ್ಯ ಕೋರ್ಟಿನಲ್ಲಿ ನಡೆಯುತ್ತಿದ್ದರೂ ಶ್ರೀ ಅರವಿಂದರು ತಮಗೇನೂ ಸಂಬಂಧವಿಲ್ಲದವರಂತೆ ಕೇವಲ ಅನಾಸಕ್ತವಾಗಿದ್ದುಬಿಟ್ಟರು. ತಮ್ಮ ವಕೀಲರಿಗೆ ರಕ್ಷಣೆಯ ಬಗ್ಗೆ ಸೂಚನೆ ಕೊಡಬೇಕೆಂದು ಮನಸ್ಸಿನಲ್ಲಿ ಆಲೋಚನೆ ಬಂತು. ಆದರೆ ಅದಾವುದೊ ಒಂದು ಅಶ್ರುತವಾಣಿ 'ನೀನೇನೂ ಸೂಚನೆ ಕೊಡಬೇಕಾದ ಅಗತ್ಯವಿಲ್ಲ. ನಿನ್ನನ್ನು ರಕ್ಷಿಸಲು ನಾನಿದ್ದೇನೆ' ಎಂದು ಹೇಳಿದಂತಾಯಿತು. ಈ ಎದೆಯ ದನಿಯನ್ನು ಕೇಳಿ ಅವರು ವಕೀಲರೊಡನೆ ಕೇಸಿನ ಬಗ್ಗೆ ಯಾವ ವಿಚಾರವನ್ನೂ ಮಾತನಾಡಲಿಲ್ಲ.

ಶ್ರೀ ಅರವಿಂದರು ಕೇಸಿನ ವಿಚಾರಣೆಯಾಗುವಾಗ ಸೆರೆಮನೆಯಲ್ಲಿ ಕಳೆದ ಆ ಒಂದು ವರ್ಷ ಶ್ರೀ ಅರವಿಂದರ ಜೀವನದಲ್ಲಿ ಅತ್ಯಂತ ಮಹತ್ವದ ಬದಲಾವಣೆಯನ್ನು ತಂದಿತು. ಆ ಸೆರೆಮನೆವಾಸ ಗುರುಮನೆ ವಾಸವೆ ಆಯಿತು. ಅವರ ಆಧ್ಯಾತ್ಮಿಕ ಸಾಧನೆಗೆ ಸಹಾಯಕವಾಯಿತು. ಅವರು ಗೀತೆ, ಉಪನಿಷತ್ತುಗಳನ್ನು ಅಭ್ಯಾಸಮಾಡಿದರು. ಸಾಧನೆ ಮಾಡಿದರು. ತಪಸ್ಸನ್ನು ಆಚರಿಸಿದರು. ಇದರ ಫಲವಾಗಿ ಅವರಿಗೆ ಅನೇಕ ಸಿದ್ಧಿಗಳು ಲಭಿಸಿದವು. ಗರಿಯಂತೆ ಹಗುರವಾಗುವ ಲಘಿಮಾ, ಆನೆಯಷ್ಟು ಭಾರವಾಗುವ ಗರಿಮಾ, ಕೂತಲ್ಲಿಯೇ ಸಾವಿರಮೈಲಿಗಳಾಚೆ ನಡೆಯುವುದನ್ನು ನೋಡುವ, ಆಡುವ ಮಾತು ಕೇಳುವ.........ಇತ್ಯಾದಿ ಸಿದ್ಧಿಗಳು ಲಭಿಸಿದವು. ಆ ಎಲ್ಲ ಅನುಭವಗಳಿಗಿಂತಲೂ ಸಿದ್ಧಿಗಿಂತಲೂ ಉನ್ನತವಾದ ಅನುಭವವೆಂದರೆ ಶ್ರೀ ಸ್ವಾಮಿ ವಿವೇಕಾನಂದರ ವಾಣಿ ಸತತ ಹದಿನೈದು ದಿನ ಸೆರೆಮನೆಯ ಏಕಾಂತವಲ್ಲಿ

ಸುಸ್ಪಷ್ಟವಾಗಿ ಕೇಳಿಸುತ್ತಿತ್ತು. ಆ ವಾಣಿ ಆಧ್ಯಾತ್ಮಿಕ ಅನುಭವದ ಅತಿ ಮುಖ್ಯ ಕ್ಷೇತ್ರವನ್ನು ಕುರಿತು ನುಡಿಯುತ್ತಿತ್ತು. ಅದು ಹೇಳಬೇಕಾದುದನ್ನೆಲ್ಲ ಹೇಳಿ ಮುಗಿಸಿದ ಮೇಲೆ ವಾಣಿ ಸುಮ್ಮನಾಯಿತು. ಶ್ರೀ ಅರವಿಂದರೆ ತಮ್ಮ ಸೆರೆ ಮನೆವಾಸದ ಅನುಭವವನ್ನು ಹೀಗೆ ಹೇಳಿದ್ದಾರೆ:

"ನನ್ನನ್ನು ದಸ್ತಗಿರಿ ಮಾಡಿದ ಆಗಿನ ನನ್ನ ಜೀವನದಲ್ಲಿ ಒಂದು ಅಧ್ಯಾಯ ಮುಗಿದು ಮತ್ತೊಂದು ಅಧ್ಯಾಯ ಪ್ರಾರಂಭ ವಾಗುವುದೆಂದು ನಾನು ನೆನಸಿರಲಿಲ್ಲ. ಒಂದು ವರ್ಷದ (4–5–1908 ರಿಂದ 5–5–1909ರ ವರೆಗೆ) ಮಾನವರ ಸಂಪರ್ಕ ವಿಲ್ಲದೆ ಪಂಜರದಲ್ಲಿ ಹಾಕಿದ ಮೃಗದಂತೆ ಕಳೆದ ಆ ಕಾಲ ಎಂಥಾದ್ದು! ಹಿಂದಿನ ಅರವಿಂದ ಘೋಷ್ ಸಂಪೂರ್ಣ ಬದಲಾವಣೆ ಹೊಂದಿ, ಮತ್ತೊಬ್ಬ ಹೊಸ ಮನುಷ್ಯನಾಗಿ ಹೊರಬರುತ್ತೇನೆಂದು ನಾನು ಎಣಿಸಿರಲಿಲ್ಲ. ಆ ಅಲೀಪುರದ ಆಶ್ರಮದಿಂದ ನೂತನ ಕಾರ್ಯ ಕ್ಷೇತ್ರಕ್ಕೆ ಹಣೆಯಾಗಿ ಹೊರಬಂದೆ. ಈ ಬ್ರಿಟಿಷ್ ಸೆರೆಮನೆಯೆಂಬ ಗುರುಮನೆಯಲ್ಲಿ ನನಗೆ ಪುರುಷೋತ್ತಮನ ದರ್ಶನವಾಯಿತು ...."

೬ ಪಾಂಡಿಚೇರಿಗೆ ಪ್ರಯಾಣ

ಶ್ರೀ ಅರವಿಂದರು ಸೆರೆಮನೆಯಿಂದ ಹೊರಬಂದಾಗ ಬಂಗಾಳದ ರಾಜಕೀಯ ಪರಿಸ್ಥಿತಿ ತೀರಾ ನಿರಾಶಾಜನಕವಾಗಿತ್ತು. ಪ್ರಭುತ್ವ ನಡೆಸಿದ ದಬ್ಬಾಳಿಕೆಯಿಂದ ಜನ ದಂಗುಬಡಿದು ಹೋಗಿದ್ದರು. ಉಗ್ರಗಾಮಿಗಳನೇಕರು ಸೆರೆಮನೆಯಲ್ಲಿದ್ದರು. ಕೈದಾಗದೆ ಉಳಿದವರು ಭೂಗತರಾಗಿದ್ದರು. ಮಂದಗಾಮಿಗಳು ಪ್ರಭುತ್ವಕ್ಕೆ ಹೆದರಿ ಬಾಲ ಮುದುರಿಕೊಂಡು ತೆಪ್ಪಗಾಗಿದ್ದರು. ಇಂಥ ನಿರಾಶೆ ಕವಿದಿದ್ದರೂ ಶ್ರೀ ಅರವಿಂದರು ಪ್ರತಿವಾರವೂ ಬಹಿರಂಗ ಸಭೆಗಳನ್ನು ಕರೆದು ಜನರನ್ನು ಹುರಿದುಂಬಿಸಲು ಪ್ರಯತ್ನಿಸಿದರು. "ಧರ್ಮ" ಮತ್ತು "ಕರ್ಮಯೋಗಿ" ಎಂಬ ಎರಡು ಪತ್ರಿಕೆಗಳನ್ನು ಪ್ರಾರಂಭಿಸಿದರು. ಮೊದಲನೆಯದು ಬಂಗಾಳಿ; ಎರಡನೆಯದು ಇಂಗ್ಲೀಷ್. ಅವೆರಡೂ ಕೆಲವೆ ದಿನಗಳಲ್ಲಿ ಅತ್ಯಧಿಕ ಪ್ರಸಾರವನ್ನು ಪಡೆದವು. ಮೂಲೆಗುಂಪಾಗಿದ್ದ ಉಗ್ರಗಾಮಿಗಳನ್ನು ಮತ್ತೆ ಒಂದೆಡೆಗೆ ತಂದು "ಬಂಗಾಳ ರಾಷ್ಟ್ರೀಯ ಸಂಘ" ಎಂಬ ರಾಜ್ಯ ಮಟ್ಟದ ಒಂದು ನೂತನ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಒಮ್ಮೆ ಸ್ವಯಂ ಆಳ್ವಿಕೆ (Home rule) ಚಳವಳಿಯನ್ನು ಪ್ರಾರಂಭಿಸಬೇಕೆಂದು ಪ್ರಯತ್ನಿಸಿದರು. ಇನ್ನೊಮ್ಮೆ ಸತ್ಯಾಗ್ರಹ ಚಳವಳಿ (Passive resistance) ಯನ್ನು ಹೂಡುವ ಹೊಂಚು ಹಾಕಿದರು. ಆದರೆ ಇದುವರೆಗೆ ಪ್ರಚಂಡ ಉಗ್ರವಾದಿಯಾಗಿದ್ದ ಅವರಿಗೆ ಇಂಥ ಉಪ್ಪುಕಾರವಿಲ್ಲದ ಚಳವಳಿಯನ್ನು ನಡೆಸಲು ಇಷ್ಟಬರಲಿಲ್ಲ. ಆದ್ದರಿಂದ ಅನಿವಾರ್ಯ

ವಾಗಿ ಶ್ರೀ ಅರವಿಂದರು ಪತ್ರಿಕಾ ಪ್ರಚಾರ ಕಾರ್ಯವನ್ನೇ ತೀಕ್ಷ್ಣಗೊಳಿಸಿದರು.

ಶ್ರೀ ಅರವಿಂದರನ್ನು ಸೆಷನ್ಸ್ ಕೋರ್ಟ್ ಮತ್ತು ಹೈಕೋರ್ಟು ನಿರಪರಾಧಿ ಎಂದು ಕೈಬಿಟ್ಟಮೇಲೆ, ಅವರನ್ನು ಸೆರೆಮನೆಗೆ ಮತ್ತೆ ಅಟ್ಟುವ ದಾರಿ ಯಾವುದೆಂದು ಸರ್ಕಾರ ಯೋಚಿಸುತ್ತಲೇ ಇತ್ತು. ಸರ್ಕಾರದ ಸರ್ವದೃಷ್ಟಿಯೂ ಶ್ರೀ ಅರವಿಂದರ ಮೇಲೆಯೆ ಇದ್ದದ್ದು. ಈಗ ಶ್ರೀ ಅರವಿಂದರು ಪತ್ರಿಕಾ ಪ್ರಚಾರದ ಮೂಲಕ ರಾಜಕೀಯರಂಗಕ್ಕೆ ಧುಮ್ಮಿಕ್ಕಿದುದು ಸರಕಾರಕ್ಕೆ ಒಂದು ನೆಪ ಸಿಕ್ಕಂತಾಯಿತು. ಅವರ ಆ ಬರವಣಿಗೆ ರಾಜ ದ್ರೋಹಕಾರಕವಾದುದೆಂದು ಅವರ ಮೇಲೆ ಕೇಸುಹಾಕುವ ಪ್ರಯತ್ನ ಮಾಡಿತು ಸರ್ಕಾರ. ಅವರ ಒಂದು ಲೇಖನ ರಾಜದ್ರೋಹ ಕಾರಣವಲ್ಲವೆಂದು ನ್ಯಾಯಾಲಯದಲ್ಲಿ ತೀರ್ಮಾನ ವಾಯಿತು. ಅದೇ ಲೇಖನ ಇನ್ನೊಂದು ಪತ್ರಿಕೆಯಲ್ಲಿ ಪ್ರಕಟ ವಾದಾಗ ಆ ಪತ್ರಿಕೆಯ ಸಂಪಾದಕರನ್ನು ವಿಚಾರಣೆಗೆ ಗುರಿಪಡಿಸಿ ಅವರು ತಪ್ಪಿತಸ್ಥರೆಂದು ಸೆರೆಮನೆಗೆ ದೂಡಿಸಿದರು. ಪ್ರಭುತ್ವದ ಈ ನೀತಿಯನ್ನು ಖಂಡಿಸಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಲೇಬರ್ ಪಕ್ಷದ ಮುಖಂಡ ಮಿ. ರ್‍ಯಾಮ್ಸೇ ಮ್ಯಾಕ್‌ಡೊನಾಲ್ಡ್ ಅತ್ಯಂತ ಪ್ರಬಲವಾಗಿ ಮಾತನಾಡಿದರು. ಹಾಗೂ ಶ್ರೀ ಅರವಿಂದರನ್ನು ಕೆ. ಡಿ. (Known depredent ಎಂಬ ಇಂಗ್ಲೀಷ್ ಶಬ್ದಗಳ ಪ್ರಥಮಾಕ್ಷರಗಳಾದ K. D. ಎಂಬಿವು ಕನ್ನಡದಲ್ಲಿ ಕೇಡಿ— ಕೇಡನ್ನು ಮಾಡುವವ ಎಂಬರ್ಥದಲ್ಲಿ ಉಪಯೋಗವಾಗುತ್ತಿದೆ) ಲಿಸ್ಟಿಗೆ ಸೇರಿಸಿ. ವಿಚಾರಣೆಯಿಲ್ಲದೆಯೆ ದ್ವೀಪಾಂತರವಾಸಕ್ಕೆ ಕಳಿಸುವ ಒಂದು ನ್ಯಾಯಬಾಹಿರ ಪ್ರಯತ್ನ ಸರ್ಕಾರದಲ್ಲಿ ನಡೆಯುತ್ತಿತ್ತು. ಇದನ್ನು ಬಯಲಿಗೆಳೆದ ರಾಮ್ಸೇ ಮ್ಯಾಕ್‌ಡೊ

ನಾಲ್ಸ್ ಅವರು 28-4-1910ರಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಒಂದು ಸವಾಲನ್ನು ಎತ್ತಿದರು:

"ಈ ತಿಂಗಳ ಏಳನೆಯ ತಾರೀಕು ಟೈಮ್ಸ್ ಪತ್ರಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಗಿದೆ. ಕಳೆದ ವರ್ಷ ಡಿಸೆಂಬರ್ 25ರ "ಕರ್ಮಯೋಗಿ" ಪತ್ರಿಕೆಯ ಸಂಚಿಕೆಯಲ್ಲಿ ಬರೆದ ಒಂದು ಲೇಖನದ ಕಾರಣದಿಂದ ಶ್ರೀ ಅರವಿಂದ ಘೋಷರನ್ನು ಹಿಡಿಯಬೇಕೆಂಬ ಒಂದು ವಾರಂಟ್ ಹುಟ್ಟಿದೆ ಎಂಬುದಾಗಿ ಆ ಸುದ್ದಿ ತಿಳಿಸುತ್ತದೆ. ಈ ಸುದ್ದಿ ನಿಜವೆ ಎಂಬುದಾಗಿ ನಾನು ಮೂರುಸಾರಿ ಅಧೀನ-ಕಾರ್ಯದರ್ಶಿಗಳನ್ನು ಕೇಳಿದ್ದೇನೆ. ಮೂರುಸಾರಿಯೂ ಉತ್ತರ ಕೊಟ್ಟಿಲ್ಲ. ನಾಲ್ಕನೆ ಬಾರಿ ಕೇಳಿದ ಅದೇ ಪ್ರಶ್ನೆಗೆ "ಇಂಡಿಯನ್ ಪೀನಲ್ ಕೋರ್ಟ್ 124(A)ಸೆಕ್ಷನ್ ಕೆಳಗೆ ರಾಜ ದ್ರೋಹಕ್ಕಾಗಿ ಒಂದು ಅರೆಸ್ಟ್ ವಾರೆಂಟ್ ಹುಟ್ಟಿದೆ" ಎಂಬುದಾಗಿ ಉತ್ತರ ಕೊಟ್ಟಿದ್ದಾರೆ.

"ಶ್ರೀ ಅರವಿಂದರ ಮೇಲಿರುವ ಕೇಸುಗಳ ಬಗ್ಗೆ ಪ್ರಶ್ನೆ ಕೇಳಿದಾಗ. ಅವುಗಳ ಬಗ್ಗೆ ಯಾವ ಪೂರ್ವಭಾವೀ ಅಭಿಪ್ರಾಯವನ್ನು ಕೊಡಲಾಗದು ಎಂದು ನನ್ನ ಮಾನ್ಯ ಮಿತ್ರರು ಉತ್ತರ ಕೊಟ್ಟರು.

"ಈಗಾಗಲೇ ಎಲ್ಲರಿಗೂ ಗೊತ್ತಾಗಿರುವಂತೆ ಅವರು (ಶ್ರೀ ಅರವಿಂದರು) ಸಾರ್ವಜನಿಕ ಜೀವನದಿಂದ ಸಂಪೂರ್ಣ ನಿವೃತ್ತರಾಗಿದ್ದಾರೆ. ಈ ಲೋಕದ ಪ್ರಾಪಂಚಿಕ ವ್ಯವಹಾರಗಳ ಬಗ್ಗೆ ಅವರಿಗೆ ಏನೊಂದೂ ಆಸಕ್ತಿಯಿಲ್ಲವೆಂಬುದೂ ಎಲ್ಲರಿಗೂ ಗೊತ್ತಿದೆ. ಹಾಗೂ ಅವರು ದೈವನೊಡನೆ ಅನುಸಂಧಾನಮಾಡಿ ಶಾಂತಿಯನ್ನು ಪಡೆಯಲು ಅವರು ಈ ಪ್ರಪಂಚವನ್ನು ಬಿಟ್ಟಿದ್ದಾರೆಂದು ನನಗೆ ತಿಳಿದುಬಂದಿದೆ. ಹೀಗೆ ಅವರು ರಾಜಕೀಯ

ಜೀವನದಿಂದ ನಿವೃತ್ತರಾದ ಮೇಲೂ ಅವರ ಮೇಲೆ ಕ್ರಮ ಕೈಗೊಳ್ಳಬೇಕಾದರೆ ಅವರ ವಿರುದ್ಧವಾಗಿ ಯಾವುದೊ ಒಂದು ಆಳವಾದ ದುರುದ್ದೇಶದಿಂದ ಕೂಡಿದ ರಾಜಕೀಯ ಮಸಲತ್ತು ನಡೆದಿದೆಯೆಂದೆ ನನಗೆ ಅನಿಸುತ್ತದೆ."

ಮತ್ತೆ ಮಿ. ಮ್ಯಾಕ್‌ಡೊನಾಲ್ಡ್ ಆ ರಾಜದ್ರೋಹ ಕಾರಕವೆಂದು ಭಾವಿಸಿದ ಲೇಖನವಿದ್ದ ಪತ್ರಿಕೆಯ ಸಂಚಿಕೆಯನ್ನು ಬರಬರನೆ ಬಿಚ್ಚಿ ಒಂದು ವಾಕ್ಯವನ್ನು ಓದಿದರು. ಅವನ್ನು ಕೇಳಿದ ಅಧೀನ ಕಾರ್ಯದರ್ಶಿಗಳು:

"ಆ ಲೇಖನ ಬಂಗಾಳಿ ಭಾಷೆಯಲ್ಲಿಲ್ಲವೋ? ಆ ಲೇಖನ ಬರೆದ ಲೇಖಕರಾದ ಶ್ರೀ ಅರವಿಂದ ಘೋಷರು ಬಂಗಾಳೀ ಮನುಷ್ಯರಲ್ಲವೋ?"

—ಎಂದು ಪ್ರಶ್ನೆಕೇಳಿದರಂತೆ, ಅದಕ್ಕೆ ಮಿ. ಮ್ಯಾಕ್‌ಡೊನಾಲ್ಡ್

"ನಾನು ಬೆಂಗಾಲಿಯಲ್ಲಿ ಬರೆಯಲು ಎಷ್ಟು ಸಮರ್ಥನೊ ಶ್ರೀ ಅರವಿಂದ ಘೋಷರು ಅಷ್ಟೇ ಸಮರ್ಥರು. ಈ ಲೇಖನ ಬಂಗಾಳಿಯಲ್ಲಿಲ್ಲ; ಶುದ್ಧವಾದ ಇಂಗ್ಲೀಷಿನಲ್ಲಿದೆ."

ಈ ಚರ್ಚೆಯ ವಿಷಯವನ್ನಿಲ್ಲಿ ಪ್ರಸ್ತಾಪಿಸುವ ಉದ್ದೇಶವೇನೆಂದರೆ ಬ್ರಿಟಿಷ್ ಸರ್ಕಾರ ಶ್ರೀ ಅರವಿಂದರನ್ನು ಹೇಗಾದರೂ ಮಾಡಿ ಹಿಡಿದು ಸೆರೆಮನೆಗೆ ತಳ್ಳಬೇಕೆಂದು ಎಂಥ ನಿರಾಧಾರ, ಕ್ಷುಲ್ಲಕ ಕಾರಣಗಳಿಂದ ಪ್ರಯತ್ನಿಸುತ್ತಿತ್ತು ಎಂಬುದು ಗೊತ್ತಾಗುತ್ತದೆ. ಈ ಚರ್ಚೆ ಆದದ್ದು ಶ್ರೀ ಅರವಿಂದರು ಕಲ್ಕತ್ತೆಯನ್ನು ಬಿಟ್ಟು ಪಾಂಡಿಚೇರಿ ತಲುಪಿದ ಮೇಲೆ. ಅವರೆ ಪ್ರಭುತ್ವದ ಈ ದುರುದ್ದೇಶ ಶ್ರೀ ಅರವಿಂದರಿಗೆ ಸೋದರಿ ನಿವೇದಿತಾ ಅವರಿಂದ 1910ನೇ ಫೆಬ್ರುವರಿಯಲ್ಲಿ ಗೊತ್ತಾಯಿತು. ಆಗ ಅವರು ಕರ್ಮಯೋಗಿ ಕಛೇರಿಯಲ್ಲಿದ್ದರು. ಅವರನ್ನು ಅರೆಸ್ಟ್

ಮಾಡಲು ಸರ್ಕಾರ ಹೊಂಚು ಹಾಕಿದೆ ಎಂಬುದು ಗೊತ್ತಾದೊಡನೆ. ಶ್ರೀ ಅರವಿಂದರಿಗೆ ಒಂದು ವಾಣಿ ಕೇಳಿಸಿತು. "ಭಾರತದಿಂದ ತೊಲಗು". ಒಂದುಮಾತು ಯೋಚನೆ ಮಾಡದೆ, ಶ್ರೀ ಅರವಿಂದರು ಚಂದ್ರನಗರಕ್ಕೆ ಹೊರಟೇ ಬಿಟ್ಟರು. ಒಂದು ತಿಂಗಳ ಮೇಲ್ಪಟ್ಟು ಅಲ್ಲಿದ್ದು ಶ್ರೀ ಅರವಿಂದರು 1910ರ ಏಪ್ರಿಲ್ 1 ರಂದು ಬೆಳಗಿನ ಜಾವ ಕಲ್ಕತ್ತೆಯ ಬಂದರಿನಿಂದ ಒಂದು ಹಡಗು ಹತ್ತಿ ಪಾಂಡಿಚೇರಿಗೆ ಹೊರಟು, 4-4-1910ರಂದು ಪಾಂಡಿಚೇರಿ ತಲುಪಿದರು. ಇಲ್ಲಿಗೆ ಶ್ರೀ ಅರವಿಂದರ ರಾಜಕೀಯ ಜೀವನವು ಮುಗಿಯಿತು. ಇನ್ನು ಬದುಕಿದ್ದರೂ ಮುಂದಿನ ನಾಲ್ವತ್ತು ವರ್ಷಗಳು, 1950ನೆ ಡಿಸೆಂಬರ್ 5ರ ವರೆಗೆ ಅವರು ಆಧ್ಯಾತ್ಮಿಕ ಲೋಕದಲ್ಲಿಯೇ ಸಂಪೂರ್ಣವಾಗಿ ತಲ್ಲೀನರಾದರು.

ಅವರು ರಾಜಕೀಯದಿಂದ ನಿವೃತ್ತರಾದರೂ ಬ್ರಿಟಿಷ್ ಪೋಲೀಸ್ ಸಿಬ್ಬಂದಿಯವರು ಶ್ರೀ ಅರವಿಂದರ ಮೇಲೆ ಕಣ್ಣಿಟ್ಟಿದ್ದರು. ಶ್ರೀ ಅರವಿಂದರನ್ನು ಪಾಂಡಿಚೇರಿಯಿಂದ ಅಪಹರಿಸಿಕೊಂಡು ಹೋಗುವ ಹೊಂಚನ್ನು ಹಾಕಲಾಗಿತ್ತು. ಅದು ಸಾಧ್ಯವಾಗದಿದ್ದುದರಿಂದ ಲಾರ್ಡ್ ಕಾರ್ ಮೈಕೇಲ್ ಎಂಬ ಆಂಗ್ಲ ಬ್ರಿಟಿಷ್ ಅಧಿಕಾರಿಗಳು, ಶ್ರೀ ಅರವಿಂದರು ಬ್ರಿಟಿಷ್ ಇಂಡಿಯಾಕ್ಕೆ ಬಂದು ನೆಮ್ಮದಿಯಿಂದ ಜೀವಿಸಬಹುದೆಂದು ಆಹ್ವಾನಿಸಿದರು. ಆದರೆ ಶ್ರೀ ಅರವಿಂದರು ಆ ಕುಣಿಗೆ ಬೀಳಲು ನಿರಾಕರಿಸಿದರು. ಇನ್ನೊಂದುಕಡೆ ಭಾರತೀಯ ರಾಜಕಾರಣಿಗಳು ಶ್ರೀ ಅರವಿಂದರನ್ನು ಪ್ರತ್ಯಕ್ಷ ರಾಜಕೀಯರಂಗಕ್ಕೆ ಎಳೆದು ತರಬೇಕೆಂದು ಪ್ರಯತ್ನಿಸಿದರು: ಸ್ವತಃ ಲೋಕಮಾನ್ಯ ತಿಲಕರು 1920ರಲ್ಲಿ ಅವರು ತೀರುವ ಕೆಲವೇ ತಿಂಗಳು ಮೊದಲು—ಜನವರಿ 1920ರಲ್ಲಿ—ಶ್ರೀ ಅರವಿಂದರು ಮುಂಬಯಿಗೆ ಬಂದು ಒಂದು ಪತ್ರಿಕಾ ಸಂಪಾದಕತ್ವ

ವಹಿಸಬೇಕೆಂದು ಒಬ್ಬ ಸ್ನೇಹಿತರನ್ನು—ಜೋಸೆಫ್ ಬ್ಯಾಪ್ಟಿಸ್ಟಾ—ಕಳಿಸಿದ್ದರು. ಅವಕ್ಕೆ ಉತ್ತರವಾಗಿ ಶ್ರೀ ಅರವಿಂದರು ಈ ರೀತಿ ಪತ್ರ ಬರೆದರು:

ಪಾಂಡಿಚೇರಿ
ಜನವರಿ 5, 1920

"ಪ್ರಿಯ ಬ್ಯಾಪ್ಟಿಸ್ಟಾ,

"ಪಾಂಡಿಚೇರಿ ನನ್ನ ಶಾಂತಿಧಾಮ; ತಪಸ್ಸಿನ ಗುಹೆ. ನನ್ನ ಈ ತಪಸ್ಸು ಇಹಲೋಕ ತಿರಸ್ಕಾರದ ವಿರಾಗಿಯಂತಹದಲ್ಲ; ನನ್ನದೇ ಆದ ಒಂದು ಹೊಸಬಗೆಯ ತಪಸ್ಸು. ಅದನ್ನು ನಾನು ಮುಗಿಸಬೇಕು. ಬಹಿರಂಗಕ್ಕೆ ಬರುವ ಮೊದಲು ನಾನು ಸಾಕಷ್ಟು ಶಕ್ತಿ ಸಂಗ್ರಹ ಮಾಡಬೇಕು.

ಎರಡನೆಯದಾಗಿ,ರಾಜಕಾರಣವನ್ನು, ರಾಜಕೀಯ ಕೆಲಸವನ್ನು ಕೀಳೆಂದಾಗಲೀ,ನನ್ನ ಯೋಗ್ಯತೆಗೆ ತಕ್ಕದ್ದಲ್ಲವೆಂದಾಗಲೀ ನಾನೆಂದೂ ಭಾವಿಸಿಲ್ಲ. .... ಆದರೆ ನನ್ನ ರಾಜಕೀಯ ಚಟುವಟಿಕೆ ಈಗ ಚಲಾವಣೆಯಲ್ಲಿರುವ ರಾಜಕೀಯ ಚಟುವಟಿಕೆಗಿಂತ ತೀರಾ ಭಿನ್ನವಾಗಿದೆ. .... ಈಗ ಸ್ವಾತಂತ್ರ್ಯವನ್ನು ಪಡೆಯಲೇ ಬೇಕೆಂಬ ಇಚ್ಛೆ ಜನಮನದಲ್ಲಿ ಬೇರೂರಿದೆ, ಅಮೃತಸರ ಕಾಂಗ್ರೆಸ್ಸಿನ ಗೊತ್ತುವಳಿ ಆ ಇಚ್ಛೆಗೆ ತನ್ನ ಒಪ್ಪಿಗೆಯ ಮುದ್ರೆಯ ನೊತ್ತಿದೆ. ....ಅದನ್ನು ಈಡೇರಿಸಲು ಸಶಕ್ತ ಮುಖಂಡರೂ ಈಗ ಅನೇಕರು ಮುಂದೆ ಬಂದಿದ್ದಾರೆ. ಸ್ವಾತಂತ್ರ್ಯ ಅನತಿ ದೂರದಲ್ಲೇ ಸಿದ್ಧಿಸುವುದು. ಆದರೆ ನನ್ನ ಮನಸ್ಸನ್ನು ತುಂಬಿರುವ ಪ್ರಶ್ನೆ ಎಂದರೆ ದೊರೆಯಲಿರುವ ಆ ಸ್ವಾತಂತ್ರ್ಯವನ್ನು ಹೇಗೆ ಉಪಯೋಗಿಸಬೇಕು, ನಮ್ಮ ಭವಿಷ್ಯತ್ತನ್ನು ಹೇಗೆ ರೂಪಿಸಬೇಕು ಎಂಬುದೇ ಆಗಿದೆ.

ಹೊರಗೆ ಬಂದು ನೀವು ಏಕೆ ಸಹಾಯ ಮಾಡಬಾರದೆಂದು ನೀವು ಕೇಳಬಹುದು........ನಿಮ್ಮ ಪಕ್ಷದ ಗುರಿ ಸಮಾಜವಾದೀ ಪ್ರಜಾರಾಜ್ಯವೆಂದು ಬರೆದಿದ್ದೀರಿ. ನಾನೂ ಅಂತಹದೇ ಆದರ್ಶ ವನ್ನು ಇಟ್ಟುಕೊಂಡಿದ್ದೇನೆ. ಆದರೆ ಅದು ಈಗ ಪ್ರಚಾರದಲ್ಲಿರುವ ಯಾವ ಪದ್ಧತಿಗಿಂತಲೂ ಭಿನ್ನವಾಗಿದೆ. ಯೂರೋಪ್ ಖಂಡ ದಲ್ಲಿ ಈಗ ಆಚರಣೆಯಲ್ಲಿರುವ ಸಾಮ್ಯವಾದದ ಬಗ್ಗೆ ನನಗೇನೂ ಆಕರ್ಷಣೆಯಿಲ್ಲ. ಭಾರತ ತನ್ನ ಸಂಸ್ಕೃತಿ, ನಾಗರಿಕತೆಗೆ ಅನುಗುಣವಾದ ಒಂದು ವಿಚಿತ್ರ ಕಾರ್ಯವನ್ನು ಈ ಲೋಕದಲ್ಲಿ ಈಡೇರಿಸಬೇಕಾಗಿದೆ. ... ಯೂರೋಪ್ ತುಳಿದ ಹಾದಿಯಲ್ಲೇ ಭಾರತ ಮುನ್ನುಗ್ಗಬಾರದು, ಮುಗ್ಗರಿಸಬಾರದು. ಭಾರತ ತನ್ನದೇ ಆದ ರೀತಿಯಲ್ಲಿ ಅಭಿವೃದ್ಧಿ ಹೊಂದಲೆಂದು ಜನ ಮಾತನಾಡುತ್ತಾರೆ. ಆದರೆ ಹೇಗೆ ಎಂಬ ಬಗ್ಗೆ ಸ್ಪಷ್ಟವಾದ ಕಲ್ಪನೆಯಿದ್ದಂತೆ ಕಾಣುವುದಿಲ್ಲ. ಈ ವಿಚಾರವಾಗಿ ನಾನು ಕೆಲವೊಂದು ನಿರ್ದಿಷ್ಟವಾದ ಅಭಿಪ್ರಾಯಗಳನ್ನೂ ಆದರ್ಶಗಳನ್ನೂ ತಳೆದಿದ್ದೇನೆ. ಅವುಗಳನ್ನು ಅನುಸರಿಸುವ ಜನ ಈಗ ತುಂಬಾ ವಿರಳ. .... ಆದ್ದರಿಂದ ಪ್ರಚಾರಕ್ಕಾಗಲಿ, ಕೆಲಸಕ್ಕಾಗಲಿ ನಾನೀಗ ಸಿದ್ಧನಿಲ್ಲ .... ಇನ್ನೂ ಬಹುಕಾಲದವರೆಗೆ ನಾನು ಏಕಾಂಗಿಯಾಗಿಯೇ ಇರಲು ಬಯಸುತ್ತೇನೆ.

ಇಂತು ನಿಮ್ಮ ವಿಶ್ವಾಸಿ.
ಅರವಿಂದ ಘೋಷ್.

೯ ಬಾಳೆಲ್ಲ ಯೋಗ ; ಭೂಮಿಯೇ ಸ್ವರ್ಗ

ಹಾಗಾದರೆ ಅವರು ಪಾಂಡಿಚೇರಿಯಲ್ಲಿ ನಾಲ್ವತ್ತು ವರ್ಷ ಕುಳಿತು ಮಾಡಿದ್ದೇನು?

"ನಾನಿಲ್ಲಿ ಕುಳಿತುಕೊಂಡು ಕೇವಲ ಗಡ್ಡ ಬೆಳೆಸಿದನೆಂದು ತಿಳಿದಿದ್ದೀಯ?" ಎಂದು ಒಮ್ಮೆ ಒಬ್ಬ ಶಿಷ್ಯನಿಗೆ ಅವರು ಬರೆದಿದ್ದಾರೆ. ಆ ನಾಲ್ವತ್ತು ವರ್ಷಗಳಲ್ಲಿ ಕಣ್ಣಿಗೆ ಕಾಣುವ ಬದಲಾವಣೆ ಆದದ್ದು ಅವರು ಬೆಳೆಸಿದ ಗಡ್ಡ ಎಂಬುದೇನೋ ನಿಜ! ಆದರೆ ಅದಕ್ಕಿಂತ ಘನತರವಾದ ಕಣ್ಣಿಗೆ ಕಾಣದ ಕೆಲಸವೂ ಆಯಿತು. ಫ್ರಾನ್ಸ್ ದೇಶದಿಂದ ಪಾಂಡಿಚೇರಿಗೆ ಮಾರ್ಚ್ 1914ರಲ್ಲಿ ಬಂದ ಶ್ರೀಮತಿ ಮೀರಾ ರಿಚರ್ಡ್(ಎನಿಸಿದ್ದ ಆಶ್ರಮದ ಅಧಿದೇವತೆ ಶ್ರೀ ಮಾತಾಜಿ) ಬಂದಮೇಲೆ "ಆರ್ಯ" ಎಂಬ ಒಂದು ಮಾಸಪತ್ರಿಕೆ ಮೂಲಕ ಆರು ವರ್ಷ ಆಧ್ಯಾತ್ಮಿಕ ಸಾಹಿತ್ಯ ರಚನೆ ಮಾಡಿದರು. ಇದು ಗಡ್ಡದಷ್ಟು ಸ್ಪಷ್ಟವಾಗಿ ಧಡ್ಡರ ಕಣ್ಣಿಗೆ ಕಾಣುವ ಕೆಲಸವಲ್ಲದಿದ್ದರೂ, ಅದಕ್ಕಿಂತ ಶ್ರೇಷ್ಠವಾದ ಕೆಲಸ ಭೌತಿಕ ಪ್ರಪಂಚದಲ್ಲಿ ಮಾಡುವುದು ಇನ್ನೇನೂ ಇರಲಾರದು. ಏಕೆಂದರೆ, ಶ್ರೀ ಅರವಿಂದರ ಭೌತಶರೀರ, ಅದರೊಡನೆಯೆ ಅವರ ಗಡ್ಡ ಮೀಸೆ ಎಲ್ಲವೂ ಕಣ್ಮರೆಯಾದರೂ, ಅವರ ವಾಕ್ಶರೀರವಾದ ಅವರ "ಲೈಫ್ ಡಿವೈನ್", "ಸಾವಿತ್ರಿ", "ಗೀತಾ ಪ್ರಬಂಧಗಳು", "ಯೋಗಸಮನ್ವಯ", "ಮಾನವ ಐಕ್ಯತೆ"ಮುಂತಾದ ಮಹತ್ ಕೃತಿಗಳು ಅಕ್ಷರಶಃ ಸೂರ್ಯ ಚಂದ್ರರು ಇರುವವರೆಗೂ ಲೋಕವನ್ನು ಬೆಳಗುತ್ತವೆ. ಗೀತೆಯನ್ನು ರಚಿಸಿದ ವ್ಯಾಸ ಮಹರ್ಷಿ ಯಾವ ಕೆರೆ ಕಾಲುವೆ ಸೇತುವೆ ಆಸ್ಪತ್ರೆ

ಶಾಲಾಕಟ್ಟಡವನ್ನೂ ಕಟ್ಟಿಸಲಿಲ್ಲ. ವಾಲ್ಮೀಕಿ ಮಹರ್ಷಿ ಒಂದು ದಿನವೂ ಬೀದಿಯಲ್ಲಿ ಮೆರವಣಿಗೆ ತೆಗೆಯಲಿಲ್ಲ. ಹಾಗೆಯೆ ನಮ್ಮ ಉಪನಿಷತ್ತುಗಳನ್ನು ರಚಿಸಿದ ಋಷಿವರ್ಯರೂ ಯಾವ ರೋಗಿಯ ಶುಶ್ರೂಷೆಯನ್ನೂ ಮಾಡಿ ಜನತಾ 'ಸೇವೆ' ಮಾಡಿದ್ದಿಲ್ಲ. ಎಂದರೆ, ವ್ಯಾಸಮಹರ್ಷಿ, ವಾಲ್ಮೀಕಿಮಹರ್ಷಿ, ಉಪನಿಷತ್ಕಾರರೂ ಏನೂ ಕೆಲಸಮಾಡಲಿಲ್ಲವೆಂದು ಹೇಳಬಹುದೆ? ಆದ್ದರಿಂದ ಶ್ರೀ ಅರವಿಂದರು ವ್ಯಾಸ ವಾಲ್ಮೀಕಿ ಮಹಾಕವಿಗಳು ಮಾಡಿದಂಥ ಮಹತ್ ಕಾರ್ಯವನ್ನು ಮಾಡಿದರು. ಅವರನ್ನು ಆಧುನಿಕ ಜಗತ್ತಿನ ವ್ಯಾಸ ಮಹರ್ಷಿಗಳೆಂದು ಕರೆಯಬಹುದು.

ಕಾವ್ಯರಚನೆಯು ಮಹತ್ಕಾರ್ಯವೆಂದು ಒಪ್ಪಿಕೊಂಡರೂ, ಅದಕ್ಕೆ ನಾಲ್ವತ್ತು ವರ್ಷ ಬೇಕಾದೀತೆ? 1921ನೆ ಇಸವಿಯ ಹೊತ್ತಿಗೇ—ಸಾವಿತ್ರಿಯ ಹೊರತಾಗಿ—ಅವರು ಎಲ್ಲ ಮಹತ್ಕೃತಿಗಳೂ ರಚನೆಯಾಗಿದ್ದುವು.* 1921ರಿಂದ 50ರ ವರೆಗೆ ಮೂವತ್ತು ವರ್ಷ ಅವರು ಅಲ್ಲಿ ಮಾಡಿದ್ದೇನು?

"ಅವರ ಜೀವನವು ಸಾರ್ವಜನಿಕ ದೃಷ್ಟಿಗೆ ದುಷ್ಪ್ರವೇಶ್ಯವಾದ ಶೈಲ ನೀರವತಾ ಯವನಿಕೆಯ ಮರೆಯಲ್ಲಿ ನಿಗೂಢವಾಗಿದೆ. ....ಏನಾಯಿತು ? ಏನು ನಡೆಯಿತು? ಯಾವುದೂ ಗೊತ್ತಿಲ್ಲ. ಅವರು ತಮ್ಮ ಪೂರ್ಣಯೋಗ ಸಾಧನೆಯ ಭಗೀರಥ ಸಾಹಸದಲ್ಲಿ ಅಹೋರಾತ್ರಿಯೂ ನಿಮಗ್ನರಾಗಿದ್ದರೆಂದು ಅವರ ಕೆಲವು ಕವನಗಳಿಂದ ಊಹಿಸಬಹುದಷ್ಟೆ. ಯೋಗಶಕ್ತಿಯಿಂದ ಜಗತ್ತಿನ ಸ್ವರೂಪ ಸ್ವಭಾವಗಳಲ್ಲಿಯೇ ಪರಿವರ್ತನೆಯನ್ನುಂಟು

* 'ಲೈಫ್ ಡಿವೈನ್' ಗ್ರಂಥದ ಕೊನೆಯ ಅಧ್ಯಾಯವನ್ನು ದ್ವಿತೀಯ ಜಾಗತಿಕ ಯುದ್ಧ ಪ್ರಾರಂಭವಾದ ಮೇಲೆ ಬರೆದರು.

ಮಾಡುವ ಸಾಮಾನ್ಯ ಮಾನವನ ಊಹೆಗೂ ಅತಿ ಭೀಕರವಾಗಿ ತೋರುವ ಮತ್ತು ಮೇಧಾವಿಗಳ ಆಲೋಚನೆಗೂ ಅಸಾಧ್ಯ ವಾಗಿ ಅಸಂಭವನೀಯವಾಗಿರುವ ಅಘಟನಘಟನಪಟೀಯವಾದ ಅಧ್ಯಾತ್ಮಿಕ ವಿಜ್ಞಾನದ ಪ್ರಯೋಗ ಶಾಲೆಯಲ್ಲಿ ಅಭಿನವ ವಿಶ್ವಾ ಮಿತ್ರನೆಂಬಂತೆ ಲೋಕನೇತ್ರಗಳಿಗೆ ಅತೀತರಾಗಿದ್ದರು. ...." *

ಶ್ರೀ ಅರವಿಂದರು ಕೈಕೊಂಡ ಯೋಗ ಅವರ ವೈಯಕ್ತಿಕ ಮುಕ್ತಿಗಾಗಿ ಅಲ್ಲವೇ ಅಲ್ಲ. ಆ ಮುಕ್ತಿ ಅವರಿಗೆ ಎಂದೊ ಲಭಿಸಿತ್ತು. ನಿರ್ವಾಣ, ನಿರ್ವಿಕಲ್ಪ ಸಮಾಧಿಯೆ ಮುಕ್ತಿಯ ಲಕ್ಷಣ ಎಂಬುದಾದರೆ, ಅವರು ಭರತಭೂಮಿಯ ಮೇಲೆ ಕಾಲಿಟ್ಟ ಆ ಕ್ಷಣವೆ ಅವರಿಗೆ ಆ ಅತೀತಾವಸ್ಥೆಯ ಅನುಭವವಾಗಿತ್ತು. ಅದರಿಂದ ತಪ್ಪಿಸಿಕೊಳ್ಳಬೇಕೆಂದರೂ ಸಾಧ್ಯವಿಲ್ಲದಷ್ಟು ಪ್ರಬಲ ವಾಗಿ ಆ ನಿರ್ವಿಕಲ್ಪ ಸಮಾಧಿಭಾವ ಅವರನ್ನು ಅಮರಿಕೊಂಡಿತ್ತು. ಆ ತರುವಾಯ ಕಾಶ್ಮೀರಕ್ಕೆ ಹೋಗಿದ್ದಾಗ ಅದ್ವೈತ ಸಿದ್ಧಾಂತದ ತುಟ್ಟ ತುದಿಯ ಫಲ ನಿರ್ವಿಕಲ್ಪ ಸಮಾಧಿಯ ಅನುಭವವೂ ಆಗಿತ್ತು. ದೈವದ ಸಾಕಾರ ರೂಪದ ಸಾಕ್ಷಾತ್ಕಾರವೆ ಅವರ ಗುರಿ ಆಗಿದ್ದರೆ ಅದೂ ಅವರಿಗೆ ಲಭಿಸಿತ್ತು. ನರ್ಮದಾ ನದಿಯ ದಂಡೆಯ ಮೇಲೊಂದು ದಿನ ತಾಯಿ ಅವರಿಗೆ ಪ್ರತ್ಯಕ್ಷಳಾಗಿದ್ದಳು. ಅಲೀಪುರದ ಸೆರೆಮನೆಯಲ್ಲಿ ಶ್ರೀ ಕೃಷ್ಣನನ್ನು ಕಣ್ಣಾರೆ ಕಂಡು ಕೃತಾರ್ಥರಾಗಿದ್ದರು. ಆ ವಾಸುದೇವ ಸಾಕ್ಷಾತ್ಕಾರದಿಂದ ಅಕ್ಷರಶಃ 'ಸರ್ವಂ ವಾಸುದೇವಮಯಂ ಜಗತ್' ಎಂಬುದು ಅವರ ಸ್ವಾನು ಭವವಾಗಿತ್ತು. ಹಾಗಾದರೆ ಆ ಪಾಂಡಿಚೇರಿಯ ಸ್ವಯಂಕೃತ ಸೆರೆ

---

* ಶ್ರೀ ಅರವಿಂದರು, ಕುವೆಂಪು, "ವಿಭೂತಿಪೂಜೆ"ಯ ಪು. 118.

ಮನೆಯ ಗುಹೆಯಲ್ಲಿ ಕುಳಿತು ಅವರು ನಾಲ್ವತ್ತು ವರ್ಷ ಮಾಡಿದ ಯೋಗಸಾಧನೆ ಏತಕ್ಕಾಗಿ?

ಅವರೇ ಹೇಳುತ್ತಾರೆ: "ನನ್ನ ಯೋಗದ ಗುರಿ, ನನ್ನ ವೈಯಕ್ತಿಕ ಮುಕ್ತಿ ಅಲ್ಲವೆ ಅಲ್ಲ. ನನ್ನ ಯೋಗ ಜಗತ್ತಿಗಾಗಿ; ಲೋಕಕ್ಕಾಗಿ", ಎಂಬುದಾಗಿ. ಈ ಲೋಕವೇ ಮುಕ್ತಿ ಪಡೆಯಬೇಕು. ಆ ಮುಕ್ತಿ ಯೆಂಬುದು ಈ ಲೋಕವನ್ನು ತ್ಯಜಿಸುವುದರಲ್ಲಿ ಇಲ್ಲವೆ ಇಲ್ಲ. ಭೂಲೋಕವನ್ನು ಬಿಟ್ಟು ಸ್ವರ್ಗವೆಂಬುದು ಎಲ್ಲಿಯೊ ಹಿಮಾಲಯದ ತುತ್ತತುದಿಯಲ್ಲಿ ಇಲ್ಲ. ಮುಕ್ತಿಯೆಂಬುದು ಸತ್ತ ಮೇಲೆ ಸಿಗುವ ಸ್ಥಿತಿಯಲ್ಲ. ಅಂದರೆ ಈ ಭೂಲೋಕದಲ್ಲಿಯೆ ಸ್ವರ್ಗಸ್ಥಾಪನೆಯನ್ನು ಬದುಕಿರುವಾಗಲೆ ಮಾಡಬೇಕು. ಆದ್ದರಿಂದ ಬಾಳೆಲ್ಲವೂ ಯೋಗವಾಗಬೇಕು, ಎಂಬುದು ಅವರ ಯೋಗದ ಗುರಿ. ಈ ಗುರಿ ಈಡೇರಿದಾಗ ಈ ಲೋಕವೆ ಸ್ವರ್ಗವಾಗುತ್ತದೆ. ಅಂಥ ಸ್ವರ್ಗ ಸ್ಥಾಪನೆಗೆ "ದಿವ್ಯ ಜೀವನ"ವನ್ನು ಬಾಳುವಂತಹ ಅತಿಮನಸ್ಸಿನ ಮಾನವರು ಹುಟ್ಟಿಬರಬೇಕು. ಆ ದಿವ್ಯ ಜೀವನ ವನ್ನು ಪಡೆಯುವ ಬಗೆ ಹೇಗೆ? ಈ ಪ್ರಾಪಂಚಿಕ ಜಂಜಡದಲ್ಲಿಯೆ ಬಿದ್ದು ಹೊರಳಾಡುವ ಹಂದಿಯ ಜೀವನದಿಂದ ಆ ದಿವ್ಯ ಜೀವನ ಸಾಧ್ಯವಿಲ್ಲ. ಆದ್ದರಿಂದ ಮಾನವ ಈ ಮಲಕೂಪದಿಂದ ಮೇಲೆದ್ದು ಆ ಅತೀತ ಶಕ್ತಿಯನ್ನು ಆರೋಹಣ ಕ್ರಮದಿಂದ ಮುಟ್ಟಿ ಆ ಶಕ್ತಿಯನ್ನು ಪಡೆಯಬೇಕು. ಹಾಗೆ ದೈವೀಮುಖವಾದ ಮನಸ್ಸು ಆರೋಹಣ ಕ್ರಮದಿಂದ ಏರಿಮುಟ್ಟಿದ ಆ ಸ್ಥಿತಿಯಲ್ಲೆ ತಲ್ಲೀನರಾಗಿ ಈ ಲೋಕವನ್ನು ಮರೆತುಬಿಡುವುದು ಸಾಲದು. ಆರೋಹಣ ಕ್ರಮದಿಂದ ಪಡೆದ ಆ ಶಕ್ತಿಸಂಪನ್ನ ಮನವನ್ನು ಅವರೋ ಹಣ ಕ್ರಮದಿಂದ ಕೆಳಗಿಳಿದುಬಂದು. ಅದೇ ಅತಿಮಾನಸ ಚೇತನದಿಂದಲೇ ಬುವಿಯ ಮೇಲೆ ಬಾಳಬೇಕು. ಇಂದ್ರಾದಿ

ದೇವತೆಗಳು ಎಲ್ಲಿಯೊ ದೇವಲೋಕದಲ್ಲಿ ಇದ್ದಾರೆಂದು ಈಗ ಜನ ಭಾವಿಸಿದ್ದಾರಲ್ಲ, ಅಂಥ ದೇವತೆಗಳು ಈ ಲೋಕದಲ್ಲಿಯೇ ವಾಸ್ತವವಾಗಿ ಅಸಂಖ್ಯಾತವಾಗಿ ಜೀವಿಸಬೇಕು. ಆಗಲೇ ಈ ಜಗತ್ತಿನಲ್ಲಿ 'ದಿವ್ಯ ಜೀವನ', ಸ್ವರ್ಗ ಸಾಮ್ರಾಜ್ಯ ನೆಲಸುತ್ತದೆ ಎಂಬುದಾಗಿ ಶ್ರೀ ಅರವಿಂದರು ತಮ್ಮ ಗ್ರಂಥಗಳಲ್ಲಿ ಪ್ರಪಾದಿಸಿದರು.

ಆದರೆ ಪುಸ್ತಕದಲ್ಲಿ ಪ್ರತಿಪಾದಿಸಿದ ಈ ದಿವ್ಯ ಜೀವನ, ಅತಿಮಾನಸ ಸಿದ್ಧಿ, ಭೂಮಿಯ ಮೇಲೆ ಸ್ಥಾಪಿಸುವ ಸ್ವರ್ಗ.... ವಾಸ್ತವವಾಗುವುದು ಸಾಧ್ಯವೇ? ಸಾಧ್ಯ ಎಂಬುದನ್ನು ಪ್ರತಿಪಾದಿಸಿದ ಈ ಪ್ರವಾದಿಯೆ ತನ್ನ ಜೀವನದಲ್ಲಿಯಾದರೂ ಮಾಡಿ ತೋರಿಸಬೇಕಲ್ಲವೆ? ತಾನು ಯಾವುದನ್ನು ಮಾಡಲರಿಯನೊ, ಮಾಡಲಾರನೊ ಅದನ್ನು ಇತರರು ಮಾಡುವಂತೆ ಹೇಳುವುದು ಹಾಸ್ಯಾಸ್ಪದವೆ ಸರಿ. ಆದ್ದರಿಂದ ಶ್ರೀ ಅರವಿಂದರು, ತಾವು ಯಾವ ದಿವ್ಯ ಜೀವನವನ್ನು ಕುರಿತು ಬರೆದರೊ ಅದನ್ನು ತಾವು ಪಡೆಯಲು ಮಾಡಿದ ಮಹಾಸಾಹಸ ಯಾತ್ರೆಯೆ ಅವರು ಮಾಡಿದ ಮಹತ್ಕಾರ್ಯ!

ಭೂಮಿಯ ಮೇಲೆ ದಿವ್ಯ ಜೀವನವನ್ನು ತಂದಿಳಿಸುವುದು ಶ್ರೀ ಅರವಿಂದರ ಗುರಿಯಾಗಿತ್ತು. ಆ ಗುರಿಯನ್ನು ಸೇರಲು ಪೂರ್ಣಯೋಗ ಮಾರ್ಗವನ್ನು ಅನುಸರಿಸಬೇಕೆಂಬುದು ಅವರು ತೋರಿದ ದಾರಿ. ಈ ಮಾರ್ಗಾವಲಂಬಿಗಳು ಇಹಲೋಕ ತ್ಯಾಜ್ಯ ಮಾಡದೆಯೆ ಪರಲೋಕದ ಸಕಲ ಸುಖವನ್ನೂ ಅನುಭವಿಸಬಹುದು. ಹಾಗೆ ಪೂರ್ಣಯೋಗವನ್ನು ಆಚರಿಸುವವರು ಇಹದ ಯಾವ ಕರ್ಮವನ್ನೂ ತ್ಯಜಿಸಬೇಕಾಗಿಲ್ಲ. ದೈವಕ್ಕೆ ಸರ್ವ ಸಮರ್ಪಣೆ ಮಾಡಿಕೊಂಡು ಬಿಟ್ಟರೆ ಕರ್ಮಾಚರಣೆಯೇನೂ ಬಾಧಕವಲ್ಲ; ಕೋಟಲೆಯಲ್ಲ. ಇದು ಶ್ರೀ ಅರವಿಂದರ ಸಿದ್ಧಾಂತ.

ಎಂದರೆ, ಎರಡು ಅಂಶ ಜಲಜನಕ ಒಂದಂಶ ಆಮ್ಲಜನಕ ಸೇರಿದರೆ ನೀರಾಗುತ್ತದೆ ಎಂಬ ಸೂತ್ರದಂತೆ. ಎರಡು ಗಾಳಿಗಳು ಸೇರಿದರೆ ನೀರು ಉಂಟಾಗುತ್ತದೆ ಎಂದು ವಿಜ್ಞಾನಿ ಹೇಳಿದರೆ ನಮ್ಮ ಹಳ್ಳಿಯ ಜನ ಸುಮ್ಮನೆ ನಕ್ಕುಬಿಟ್ಟಾರು! ಹಾಗೆ ಲಘುವಾಗಿ ಕಾಣಲು ಹಿಂಜರಿಯುವವರು ಇದು ಸಾಧ್ಯವೆ ಎಂದು ಶಂಕಿಸಿ ಯಾರು. ಅದು ನಿಜ ಎಂಬುದನ್ನು ವಿಜ್ಞಾನಿಯು ಎರಡು ಗಾಜಿನ ಪಾತ್ರೆಗಳಲ್ಲಿ ಆಯಾ ಗಾಳಿಯನ್ನು ತಕ್ಕ ಪ್ರಮಾಣದಲ್ಲಿ ಕೂಡಿಸಿ ಆಮೇಲೆ ಆ ಎರಡೂ ವಿಧದ ಗಾಳಿಗಳನ್ನು ಒಂದುಗೂಡಿಸಿ ನೀರನ್ನು ಮಾಡಿ ತೋರಿಸುತ್ತಾನೆ. ಹಾಗೆಯೆ ಶ್ರೀ ಅರವಿಂದರು ತಮ್ಮ ಸಿದ್ಧಾಂತವನ್ನು ಪ್ರಯೋಗ ಮಾಡಿ ತೋರಿಸಲು ನಾಲ್ವತ್ತು ವರ್ಷ ಪ್ರಯತ್ನಿಸಿದರು. ತಾವು ದಿನಕ್ಕೆ ಹದಿನೆಂಟು ಘಂಟೆಯಷ್ಟು ಸಮಯವನ್ನು ಪತ್ರ ಬರೆಯುವುದರಲ್ಲಿ, ದರ್ಶನ ನೀಡುವುದರಲ್ಲಿ, ಸಂಭಾಷಣೆಯಲ್ಲಿ,ಸರಸ ವಿನೋದದಲ್ಲಿ ಕಳೆದರೂ ಸದಾ ಸದಾಶಿವನ ಧ್ಯಾನದಲ್ಲಿಯೆ—ಹಲ್ಲುನೋವಾದವನು ಏನೇ ಮಾಡುತ್ತಿದ್ದರೂ ನೋವಾದ ತನ್ನ ಹಲ್ಲಿನ ಕಡೆಗೇ ತನ್ನ ಗಮನವಿರುವಂತೆ—ಇರು ತ್ತಿದ್ದರು. ಆ ದಿವ್ಯ ಜ್ಞಾನವನ್ನು ಪಡೆದ ಮೇಲೂ ಈ ಇಹದ ಪ್ರಜ್ಞೆ ಶೂನ್ಯವಾಗುತ್ತಿರಲಿಲ್ಲ. ಇದು ಅವರೊಬ್ಬರ ಜೀವನದಲ್ಲಿ ಮಾತ್ರ ಸಾಧ್ಯವಾಗುವಂತಹ. ಅವರಂಥವರಿಗೆ ಮಾತ್ರ ಸಿದ್ಧಿಸುವ ದಯಾದವಲ್ಲ ಎಂಬುದು ಶ್ರೀ ಅರವಿಂದರ ಮತ. ಒಬ್ಬರಿಗೆ ಸಾಧ್ಯ ವಾದುದ್ದು ಇನ್ನೊಬ್ಬರಿಗೆ ಸಾಧ್ಯವಾಗಲೇ ಬೇಕು. ಒಂದು ಲೋಟ ಉಪ್ಪು ನೀರನ್ನು ಶುದ್ಧಿಮಾಡಿ ಕುಡಿಯುವ ನೀರನ್ನಾಗಿ ಪರಿವರ್ತಿ ಸುವುದು ಸಾಧ್ಯವಾದರೆ, ಒಂದು ಕೊಪ್ಪರಿಗೆ ಉಪ್ಪು ನೀರನ್ನು ಕುಡಿಯುವ ಸಿಹಿನೀರನ್ನಾಗಿ ಮಾರ್ಪಡಿಸುವುದೇನೂ ಅಸಾಧ್ಯದ ಮಾತಲ್ಲ. ಹಾಗೆಯೆ ಒಬ್ಬರಿಗೆ ಸಾಧ್ಯವಾದ ಆ ದಿವ್ಯ ಜೀವನ

ಬಹುಜನರಿಗೆ ಸಾಧ್ಯವಾಗಲೆ ಬೇಕು, ಸಾಧ್ಯವಾಗಿಯೆ ಆಗುತ್ತದೆ. ಅದು ಸಾಧ್ಯವಾಗಬೇಕಾದರೆ ಆ ದೈವದ ಅವತರಣಿಕೆ ಭೂಮಿಯು ಮೇಲಾಗಬೇಕು. ಅದನ್ನು ತಿರೆಗೆಳೆದು ತಂದು ಈ ಪರಿವರ್ತನಾ ಕಾರ್ಯಕ್ಕೆ ಅಣಿಗೊಳಿಸಬೇಕು—ಎಂಬುದು ಶ್ರೀ ಅರವಿಂದರ ಭೀಮಸಾಹಸ! ಅದನ್ನು ಶ್ರೀ ಅರವಿಂದರು ಮಾಡಿ ತೋರಿಸ ಲೆಂದು ಘನಘೋರ ತಪಸ್ಸನ್ನು ಆಚರಿಸಿದರು. ಕೊನೆಗೆ 24ನೆ ನವೆಂಬರ್ 1928ರಲ್ಲಿ ಶ್ರೀ ಅರವಿಂದರು ಆ ದಿವ್ಯ ಶಕ್ತಿ ಯನ್ನು ತಿರಿಗೆಳೆದು ತಂದರು ಎಂಬುದಾಗಿ ಹೇಳುತ್ತಾರೆ. ಅದು ಸಿದ್ಧಿಯ ದಿನವೆಂದು ಈಗಲೂ ಶ್ರೀ ಅರವಿಂದಾಶ್ರಮದಲ್ಲಿ ಪ್ರತಿ ನವಂಬರ್ 24 ರಂದು "ಸಿದ್ಧಿ ದಿನಾಚರಣೆ" ಮಾಡುತ್ತಾರೆ.

ಆ ದಿವ್ಯಶಕ್ತಿ ಕಣ್ಣಿಗೆ ಕಾಣುವುದಿಲ್ಲ; ನಾವು ಉಸಿರಾಡುವ ಗಾಳಿಯೂ ನಮ್ಮ ಕಣ್ಣಿಗೆ ಕಾಣದಿರುವಂತೆ. ಆದರೆ ಗಾಳಿ ಬೀಸಿ ದಾಗ ಎಲೆ ಅಲುಗಿದರೆ, ನಾವು ಒಳಕ್ಕೆಳೆದುಕೊಂಡರೆ ಗಾಳಿಯು ಅನುಭವವಾಗುತ್ತದೆ. ಹಾಗೆಯೇ ಆ ದಿವ್ಯ ಶಕ್ತಿಯು ಅವತರಣಿಕೆ ಆದದ್ದರ ಕುರುಹೇನು? ಅದೇ ಶ್ರೀ ಅರವಿಂದಾಶ್ರಮದಲ್ಲಿ ಅರಳುತ್ತಿರುವ ದಿವ್ಯಜೀವಿಗಳ ಪ್ರತ್ಯಕ್ಷ ಜೀವನ. ಶ್ರೀ ಅರವಿಂದರು ಪಡೆದ ಸಿದ್ಧಿಯ ಪರಿಣಾಮ ಅಂದು ಆಶ್ರಮವಾಸಿಗಳಿಗೆ ಅನು ಭವವಾಯಿತಂತೆ! ಆಶ್ರಮದಲ್ಲಿಲ್ಲದಿದ್ದರೂ ಸಿದ್ಧವಾದ ಹೃದಯು ಗಳಿಗೂ ಅವರೆಲ್ಲಿದ್ದರೂ ಅವರಿಗೆ ಅನುಭವವಾಯಿತಂತೆ!! ಇದು ಅಂತೆ ಕಂತೆಯ ಸುದ್ದಿಯಲ್ಲ ಎಂಬುದಕ್ಕೆ ಅರವಿಂದಾಶ್ರಮದ ಮಾತಾಜಿಯೆ ಸಾಕ್ಷಿ. ಅಲ್ಲಿರುವ ಸಾಧಕರೇ ಸಾಕ್ಷಿ. ಅಲ್ಲಿ ನಿಂತಿರುವ ಆಶ್ರಮವೆ ಸಾಕ್ಷಿ! ಶ್ರೀ ಅರವಿಂದರು ಮಾಡಿದ ಕಾರ್ಯ ಅಂಥಾದ್ದು. ಅದನ್ನು ಅರಿತ, ಅನುಭವಿಸಿದ ಜೀವಿಗಳೆ ಧನ್ಯ!

ಶ್ರೀ ಅರವಿಂದರು ಇಂಥ ಕೇವಲ ಮಾನವನ ಅಂತರಂಗಕ್ಕೇ

ಸಂಬಂಧಿಸಿದ ಗುಹ್ಯವಿದ್ಯೆಯನ್ನು ಅರಿತು, ಅರುಹಿ, ಆಚರಿಸಿದರೂ ಲೋಕದ ಆಗುಹೋಗುಗಳ ಬಗ್ಗೆ ತಿರೋಹಿತರಾಗಿರಲಿಲ್ಲ. ಜಗತ್ತಿನ ಮಹತ್ವದ ಘಟನೆಗಳು ಸಂಬಂಧಿಸಿದಾಗ ಅವರು ತಮ್ಮ ಪಾಲಿನ ಕೆಲಸವನ್ನು ನೆರವೇರಿಸಿದರು. ದ್ವಿತೀಯ ಜಾಗತಿಕ ಯುದ್ಧದ ಕಾಲದಲ್ಲಿ, ಹಿಟ್ಲರ್–ಟೋಜೋ– ಮುಸಲೋನಿಗಳ ರಾಕ್ಷಸೀ ಮಹತ್ವಾಕಾಂಕ್ಷೆಗೆ ಲೋಕ ಬಲಿಯಾಗಬಾರದೆಂದು ಅವರು ಇಚ್ಛಿಸಿದ್ದರು. ಅವರ ಇಚ್ಛೆ ಈಡೇರಲೆಂದು ಹಾರೈಸುವುದು ಮಾತ್ರವಲ್ಲದೆ ಈ ದೇಶದ ಜನರೂ ಸಕ್ರಿಯವಾಗಿ ಬ್ರಿಟಿಷ್ ಯುದ್ಧ ಸಿದ್ಧತೆಗೆ ನೆರವಾಗಬೇಕೆಂದು ಅವರು ಪ್ರತಿಪಾದಿಸಿದರು. ಅದರಂತೆ ಅವರು ಆಚರಿಸಿದರು. ಬ್ರಿಟಿಷರ ಆಜನ್ಮ ಶತ್ರುಗಳಾದ ಶ್ರೀ ಅರವಿಂದರು ಅಂದಿನ ಇಡೀ ಜನತೆಯ ಒಲವಿನ ವಿರುದ್ಧವಾಗಿ ಬ್ರಿಟಿಷರ ಬೆಂಬಲಕ್ಕೆ ನಿಂತುದು ಈ ಲೇಖಕ ನನ್ನೊಳಗೊಂಡು ಅನೇಕರ ಮನಸ್ಸಿಗೆ ಬರಲಿಲ್ಲ. ಆದರೆ ಶ್ರೀ ಅರವಿಂದರಿಗೆ ಗೊತ್ತಿತ್ತು: ಹಿಟ್ಲರ್ ವಿಜಯಿಯಾದರೆ ಈ ಲೋಕ ಮತ್ತೆ ಕತ್ತಲೆಯ ಕೊಳ್ಳಕ್ಕೆ ಬೀಳುತ್ತದೆ ಎಂಬುದಾಗಿ.

ಆ ತರುವಾಯ ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳಾಗಿ ಕ್ರಿಪ್ಸ್ ಮಹಾಶಯರು ಭಾರತಕ್ಕೆ ಬಂದಾಗ, ಅವರ ಸೂಚನೆಗಳನ್ನು ಕಾಂಗ್ರೆಸ್ ನಾಯಕರು ಒಪ್ಪಬೇಕೆಂದು ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ಸಾರಿದ್ದಲ್ಲದೆ, ತಮ್ಮ ಆಪ್ತ ಶಿಷ್ಯರಾದ ಮದರಾಸಿನ ಶ್ರೀ ಎಸ್. ದೊರೆಸ್ವಾಮಿ ಅಯ್ಯರ್ ಅವರನ್ನು ದೆಹಲಿಯಲ್ಲಿದ್ದ ಕಾಂಗ್ರೆಸ್ ನಾಯಕರ ಬಳಿಗೆ ಕಳಿಸಿಕೊಟ್ಟರು. ಆದರೆ ಅವರ ಮಾತನ್ನು ಕೇಳುವವರು ಇಲ್ಲದೆ ಕ್ರಿಪ್ಸ್ ರಾಯಭಾರ ಮುರಿದು ಬಿತ್ತು. ಅದರ ಪರಿಣಾಮವಾಗಿಯೆ ಈ ದೇಶ ಎರಡು ಹೋಳಾಗಿ ಕಡಿದು ಬಿತ್ತು.

ಮುಂದೆ ಅವರು ಮಹಾ ಸಮಾಧಿ ಹೊಂದುವುದಕ್ಕೆ ಕೆಲವೆ ತಿಂಗಳು ಮುಂಚಿತವಾಗಿ ಚೀನಾದೇಶದ ವಿಸ್ತರಣಾಕಾಂಕ್ಷೆಯು ಭಾರತಕ್ಕೆ ಗಂಡಾಂತರಕಾರಿಯಾದೀತು ಎಂಬುದಾಗಿ ಬರವಣಿಗೆಯ ಮೂಲಕ ದೇಶಕ್ಕೆ ಜಗಜ್ಜಾಗೀರು ಮಾಡಿದರು. ಆದರೆ ಅವರ ಮಾತನ್ನು ಯಾರು ಕೇಳುವಂತಿತ್ತು? "ಹಿಂದೀ-ಚೀನೀ ಭಾಯಿ ಭಾಯಿ" ಅಮಲು ಹತ್ತಿದಾಗ ಶ್ರೀ ಅರವಿಂದರ ವಾಣಿ ಯಾರ ಕಿವಿಗೂ ಬೀಳಲಿಲ್ಲ. 1962ರ ಅಕ್ಟೋಬರ್‌ನಲ್ಲಿ ಚೀನಾ ನಮ್ಮ ದೇಶದ ಮೇಲೆ ದಾಳಿ ನಡೆಸಿದಾಗ, ಕಳೆದ ದಶಕದಲ್ಲಿ ಭಾರತ ಸರ್ಕಾರ ಮಾಡಿದ ದೊಡ್ಡ ತಪ್ಪು ಅರಿವಾಯಿತು. ಆದರೆ ಕಾಲವನ್ನು ಹಿಂದಕ್ಕೆ ಸರಿಸಿ ಮತ್ತೆ ನಮ್ಮ ದೇಶ 1950ಕ್ಕೆ ಹೋಗುವಂತಿರಲಿಲ್ಲ.

ಶ್ರೀ ಅರವಿಂದರು ತಮ್ಮ ಅವತಾರದ ಉದ್ದೇಶವು ಈ ಜನ್ಮದಲ್ಲಿ ಇಷ್ಟು ನೆರವೇರಿತೆಂದು ಮನವರಿಕೆಯಾದ ಮೇಲೆ ಇನ್ನು ಈ ದೇಹದ ಈ ಬಾಳಿನ ಕರ್ತವ್ಯ ಮುಗಿದ ಮೇಲೆ 1950ನೆ ಡಿಸಂಬರ್ 5 ರಂದು ದೇಹ ತ್ಯಾಗ ಮಾಡಿದರು.
ಆದರೆ ಶ್ರೀ ಅರವಿಂದರೆ ಹೇಳಿದ್ದಾರೆ:

"ಅತಿಮಾನಸ ರೀತಿಯಿಂದ ರೂಪುಗೊಂಡ ಅತಿಮಾನಸ ದೇಹ ಧಾರಣೆಮಾಡಿ ಮತ್ತೆ ಈ ಲೋಕದಲ್ಲಿ ಉದಿಸುವ ಪ್ರಥಮ ದಿವ್ಯಜೀವಿಯೆ ನಾನಾಗುತ್ತೇನೆ" ಎಂಬುದಾಗಿ.

ತಾ. 5–12–50ರಂದು ಪ್ರಾಣವಾಯು ದೇಹದಿಂದ ಹೊರಟು ಹೋದರೂ 9–12–50 ರವರೆಗೆ ಆ ದೇಹವು ಬದುಕಿದ್ದಾಗ ಹೇಗಿತ್ತೊ, ಹಾಗೆಯೆ ಇತ್ತು. ಅದನ್ನು ಕುರಿತು ಶ್ರೀ ಮಾತಾಜಿ ಹೀಗೆ ಹೇಳುತ್ತಾರೆ:

"ಶ್ರೀ ಅರವಿಂದರು ನಮ್ಮನ್ನು ಬಿಟ್ಟು ಹೋಗಿಲ್ಲ. ಎಂದಿನಂತೆ ಸಜೀವ ಪ್ರತ್ಯಕ್ಷವಾಗಿ ಇಲ್ಲಿಯೆ ಇದ್ದಾರೆ."

ಈ ನಂಬುಗೆಯಿಂದಲೇ ಶ್ರೀ ಅರವಿಂದಾಶ್ರಮದ ಸಾಧಕರು ದಿವ್ಯಜೀವನದ ಸಿದ್ಧಿಯ ಸಾಧನೆಯಲ್ಲಿ ತೊಡಗಿದ್ದಾರೆ.

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ-ಸರಳ ವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಶಾಂತಿನಾಥ ಕವಿ	ಕಮಲಾ ಹಂಪನಾ
6.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ
29.	ಪಂಪ	ತ. ಸು. ಶಾಮರಾಯ
30.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
31.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
32.	ಮಹಾಕವಿ ಕುಮಾರನಾಶಾನ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
33.	ತುಳ್ಳಲ್‌ಕವಿ ಕುಂಜನ್ ನಂಬಿಯಾರ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
34.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್